ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ


ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 12 | ಮಾರ್ಚ್ 15–21, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com



ಲುಲಾ ಖುಲಾಸೆ:
ಲ್ಯಾಟಿನ್ ಅಮೆರಿಕಾದಲ್ಲಿ ಮತ್ತೆ ಎಳೆಗೆಂಪು ಅಲೆ?



ಕೇರಳ ಚುನಾವಣೆಗಳಲ್ಲಿ ಅಪವಿತ್ರ ತ್ರಿವಳಿ ಕೂಟ



▪ ಸಾಲದ ಬಲೆಯಲ್ಲಿ ಕರ್ನಾಟಕ
▪ ಜನಗಳ ಕಣ್ಣಿಗೆ ಮಣ್ಣೆರೆಚುವ ಕ್ರಮ



ದಲಿತರ ಹಕ್ಕಿನ ಕಾರ್ಯಕ್ರಮಗಳು ಹಂಗಿನ ಕಾರ್ಯಕ್ರಮಗಳಾಗುತ್ತಿವೆ

ಸಂಯುಕ್ತ ಕಿಸಾನ್ ಮೋರ್ಚಾ ಕರೆ



ಮಾರ್ಚ್ 26 : ಭಾರತ್ ಬಂದ್
ಮಾರ್ಚ್ 28 : ಕರಾಳ ಕಾಯ್ದೆಗಳ ಹೋಳಿ ದಹನ

ಮುಂಬರುವ ಚುನಾವಣೆಗಳಲ್ಲಿ ಬಿಜೆಪಿಯನ್ನು ಸೋಲಿಸಿ-ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ

ಎಡ, ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತೀತ ಶಕ್ತಿಗಳ ವಿಜಯವನ್ನು ಖಾತ್ರಿಪಡಿಸಿ

ಕೇರಳ, ಪಶ್ಚಿಮ ಬಂಗಾಲ, ತಮಿಳುನಾಡು, ಅಸ್ಸಾಂ ಮತ್ತು ಪುದುಚೇರಿಯ ವಿಧಾನಸಭೆಗಳಿಗೆ ಹಾಗೂ ತ್ರಿಪುರಾದಲ್ಲಿ ಸ್ವಾಯಂತ್ತ ಜಿಲ್ಲಾ ಮಂಡಳಿಗಳಿಗೆ ನಡೆಯಲಿರುವ ಚುನಾವಣೆಗಳಲ್ಲಿ ಎಡ,ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತೀತ ಶಕ್ತಿಗಳ ವಿಜಯವನ್ನು ಖಾತ್ರಿಪಡಿಸಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ದೇಶಾದ್ಯಂತ ಇಡೀ ಪಕ್ಷಕ್ಕೆ ಕರೆ ನೀಡಿದೆ. ಸಿಪಿಐ(ಎಂ) ಈ ಚುನಾವಣೆಗಳಲ್ಲಿ ಬಿಜೆಪಿಯನ್ನು ಸೋಲಿಸುವುದರ ಮೇಲೆ ಪ್ರಧಾನವಾಗಿ ಗಮನ ಕೇಂದ್ರೀಕರಿಸುತ್ತದೆ, ಇದು ಸಂಬಂಧಪಟ್ಟ ರಾಜ್ಯಗಳಲ್ಲಿ ಜನತೆಯ ಕಲ್ಯಾಣಕ್ಕೆ ಮತ್ತು ಇಡೀ ಭಾರತದ ಐಕ್ಯತೆ ಮತ್ತು ಸಮಗ್ರತೆಗೆ ಅತ್ಯಗತ್ಯ ಎಂದು ಅದು ಹೇಳಿದೆ.

ಸಂಬಂಧಪಟ್ಟ ಪಕ್ಷದ ರಾಜ್ಯಸಮಿತಿಗಳು ಈಗಾಗಲೇ ಈ ಚುನಾವಣೆಗಳಿಗೆ ಪಕ್ಷದ ಅಭ್ಯರ್ಥಿಗಳ ಪಟ್ಟಿಗಳನ್ನು ಪ್ರಕಟಿಸಿವೆ.

ಐತಿಹಾಸಿಕ ರೈತ ಹೋರಾಟ

ಭಾರತೀಯ ರೈತಾಪಿಗಳ ಐತಿಹಾಸಿಕ ಹೋರಾಟಕ್ಕೆ ಸಿಪಿಐ(ಎಂ) ತನ್ನ ಬೆಂಬಲ ಮತ್ತು ಸೌಹಾರ್ದವನ್ನು ಮುಂದುವರೆಸುತ್ತದೆ ಎಂದಿರುವ ಪೊಲಿಟ್‌ಬ್ಯುರೊ ವಿನಾಶಕಾರೀ ಕೃಷಿ ಕಾಯ್ದೆಗಳನ್ನು ತಕ್ಷಣವೇ ರದ್ದು ಮಾಡಬೇಕು ಎಂದು ಮೋದಿ ಸರಕಾರವನ್ನು ಆಗ್ರಹಿಸಿದೆ.

ಖಾಸಗೀಕರಣದ ವಿರುದ್ಧ ಹೋರಾಟಗಳು

ಮೋದಿ ಸರಕಾರ ಕೈಗೊಂಡಿರುವ ಸಾರ್ವಜನಿಕ ವಲಯದ ಸಾರಾ ಸಗಟು ಖಾಸಗೀಕರಣ ಮತ್ತು ರಾಷ್ಟ್ರೀಯ ಆಸ್ತಿಗಳ ಲಂಗುಲಗಾಮಿಲ್ಲದ ಲೂಟಿಯ ವಿರುದ್ಧ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ನಡೆಸಿರುವ ಸಮರಗಳಿಗೆ ಸಿಪಿಐ(ಎಂ) ಪೊಲಿಟ್ ಬ್ಯುರೊ ತನ್ನ ಬೆಂಬಲ ಮತ್ತು ಸೌಹಾರ್ದವನ್ನು ವ್ಯಕ್ತಪಡಿಸಿದೆ.

ವಿಶಾಖಪಟ್ಟಣ ಉಕ್ಕು ಸ್ಥಾವರದ ಖಾಸಗೀಕರಣದ ವಿರುದ್ಧ ಆಂಧ್ರಪ್ರದೇಶದ ಜನರು ನಡೆಸುತ್ತಿರುವ ಹೋರಾಟಕ್ಕೂ ಅದು ಬೆಂಬಲವನ್ನು ವ್ಯಕ್ತಪಡಿಸಿದೆ.

ಮಾರ್ಚ್ 15 ಮತ್ತು 16ರಂದು ಬ್ಯಾಂಕುಗಳಲ್ಲಿ ಎಲ್ಲ ಸಂಘಗಳು ಮುಷ್ಕರದ ಕರೆ ನೀಡಿವೆ. ಸಾಮಾನ್ಯ ವಿಮಾಕ್ಷೇತ್ರದ ಸಂಘಗಳು ಮಾರ್ಚ್ 17ರಂದು, ಮತ್ತು ಎಲ್‌ಐಸಿಯಲ್ಲಿನ ಸಂಘಗಳು ಮಾರ್ಚ್ 18ರಂದು ಮುಷ್ಕರಗಳಿಗೆ ಕರೆ ನೀಡಿವೆ. ಇವೆಲ್ಲವುಗಳಿಗೂ ಸಿಪಿಐ(ಎಂ) ಪೊಲಿಟ್‌ಬ್ಯುರೊ ತನ್ನ ಬೆಂಬಲವನ್ನು ವ್ಯಕ್ತಪಡಿಸಿದೆ.

ಸಂಸತ್ತಿಗೆ ಉತ್ತರದಾಯಿ ಆಗಲೊಲ್ಲದ ಬಿಜೆಪಿ ಸರಕಾರ

ಪೆಟ್ರೋಲಿಯಂ ಉತ್ಪನ್ನಗಳ ಸತತ ಬೆಲೆಯೇರಿಕೆ ಮುಂತಾದ ಜನಗಳ ಜ್ವಲಂತ ಪ್ರಶ್ನೆಗಳನ್ನು ಸಂಸತ್ತಿನಲ್ಲಿ ಚರ್ಚಿಸಲು ಕೇಂದ್ರದ ಬಿಜೆಪಿ ಸರಕಾರ ನಿರಾಕರಿಸುತ್ತಿದೆ ಎಂದು ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ಸಂಸತ್ತಿನಲ್ಲಿ ಇಂತಹ ಚರ್ಚೆಗಳನ್ನು ತಪ್ಪಿಸಲು ಸಂಸತ್ತಿನ ಅಧಿವೇಶನಗಳನ್ನು ಮಾರ್ಚ್ 15ರ ವರೆಗೆ ರದ್ದು ಮಾಡಲಾಗಿದೆ. ಇದು ಭಾರತೀಯ ಸಂವಿಧಾನ ವಿಧಿಸಿರುವ, ಸಂಸತ್ತಿಗೆ ಸರಕಾರದ ಹೊಣೆಗಾರಿಕೆ ಮತ್ತು ಉತ್ತರದಾಯಿತ್ವವನ್ನು ಕೈಬಿಟ್ಟಿರುವ ಅತ್ಯಂತ ಕೆಟ್ಟ ಉದಾಹರಣೆಯಾಗಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಕೇಂದ್ರ ಸರಕಾರ ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಎಲ್ಲ ಅಬಕಾರಿ ಸುಂಕ ಏರಿಕೆಗಳನ್ನು ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದೆ.

ಕೇರಳ ಮೂಲರಚನೆ ಹೂಡಿಕೆ ಮಂಡಳಿಯ ವಿರುದ್ಧ ಇ.ಡಿ. ಮೂಲಕ ಕ್ರಮ–ಎಲ್.ಡಿ.ಎಫ್. ಸರಕಾರದ ಹೆಸರುಗೆಡಿಸುವ ನಿರ್ಲಜ್ಜ ಕ್ರಮ

ಕೇಂದ್ರ ಸರಕಾರದ ಹಣಕಾಸು ಮಂತ್ರಾಲಯದ ಅಡಿಯಲ್ಲಿರುವ ಜಾರಿ ನಿರ್ದೇಶನಾಲಯ(ಇ.ಡಿ.) ಕೇರಳ ಮೂಲರಚನೆ ಹೂಡಿಕೆ ನಿಧಿ ಮಂಡಳಿ(ಕೆ.ಐ.ಐ.ಎಫ್.ಬಿ.) ವಿರುದ್ಧ ಒಂದು ಪ್ರಕರಣವನ್ನು ದಾಖಲಿಸಿಕೊಂಡಿರುವುದು ಕೇಂದ್ರ ಸರಕಾರ ಇ.ಡಿ.ಯನ್ನು ಒಂದು ರಾಜಕೀಯ ಉಪಕರಣವಾಗಿ ಬಳಸುವ ಒಂದು ನಾಚಿಕೆಗೆಟ್ಟ ದುರುಪಯೋಗವಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ಹಣಕಾಸು ಮಂತ್ರಿ ನಿರ್ಮಲಾ ಸೀತಾರಾಮನ್ ಕೇರಳದಲ್ಲಿ ಬಿಜೆಪಿ ಚುನಾವಣಾ ಸಭೆಯಲ್ಲಿ ಮಾತಾಡುತ್ತ ಕೆ.ಐ.ಐ.ಎಫ್.ಬಿ. ವಿರುದ್ಧ ಮತ್ತು ಮತ್ತು ಎಲ್.ಡಿ.ಎಫ್. ಸರಕಾರದ ವಿರುದ್ಧ ಆಧಾರರಹಿತ ಆಪಾದನೆಗಳನ್ನು ಮಾಡಿದರು. ಇದನ್ನು ಅನುಸಸರಿಸಿ ಇ.ಡಿ. ಈ ಸಂಪೂರ್ಣವಾಗಿ ಅಸಮರ್ಥನೀಯವಾದ ಕ್ರಮವನ್ನು ಕೈಗೊಂಡಿದೆ.

ಕೆ.ಐ.ಐ.ಎಫ್.ಬಿ ವಿರುದ್ಧ ಇ.ಡಿ. ವಿದೇಶಿ ವಿನಿಮಯ ನಿರ್ವಹಣೆ ಕಾಯ್ದೆ(ಎಫ್.ಇ.ಎಂ.ಎ,) ನಿಯಮಗಳ ಉಲ್ಲಂಘನೆಯ ಕೇಸನ್ನು ದಾಖಲಿಸಿದೆ. ಮತ್ತು ಅದರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿ.ಇ.ಒ.) ಮತ್ತು ಡೆಪ್ಯುಟಿ ಮೆನೇಜಿಂಗ್ ಡೈರೆಕ್ಟರ್‌ರನ್ನು ವಿಚಾರಣೆಗೆ ಬರಲು ಆದೇಶ ನೀಡಿದೆ. ಇದು ಒಂದು ರಾಜ್ಯಸರಕಾರ ಪ್ರಾಯೋಜಿತ ಸಂಸ್ಥೆಯ ಮೇಲೆ ಒಂದು ಗಂಭೀರ ಪ್ರಹಾರ. ಕಾರ್ಪೊರೇಟ್ ಸಂಸ್ಥೆಯಾಗಿ ಕೆ.ಐ.ಐ.ಎಫ್.ಬಿ.ಗೆ ವಾಣಿಜ್ಯ ಸಾಲಗಳನ್ನು ಎತ್ತುವ ಹಕ್ಕಿದೆ. ರಿಝರ್ವ್ ಬ್ಯಾಂಕ್ ಆಫ್ ಇಂಡಿಯಾದ ಮಂಜೂರಾತಿಯಿಂದಲೇ ಅದು ವಿದೇಶಗಳಲ್ಲಿ ಮಸಾಲಾ ಬಾಂಡುಗಳನ್ನು ಕೊಟ್ಟಿದೆ ಎಂಬ ಸಂಗತಿಯತ್ತ ಪೊಲಿಟ್‌ಬ್ಯುರೊ ಗಮನ ಸೆಳೆದಿದೆ.

ಈ ಇ.ಡಿ. ಕ್ರಮ ಚುನಾವಣೆಗಳ ಪ್ರಕಟಣೆಯ ನಂತರ ಬಂದಿರುವುದು ಇನ್ನಷ್ಟು ನಿಂದನೀಯ. ಏಕೆಂದರೆ ಎಲ್.ಡಿ.ಎಫ್. ಸರಕಾರದ ಮತ್ತು ಕೆ.ಐ.ಐ.ಎಫ್.ಬಿ. ಆಶ್ರಯದಲ್ಲಿ ಕೈಗೊಂಡಿರುವ ವಿಸ್ತಾರವಾದ ಅಭಿವೃದ್ಧಿ ಕೆಲಸಗಳ ಹೆಸರುಗೆಡಿಸುವ ಒಂದು ನಾಚಿಕೆಹೀನ ಪ್ರಯತ್ನವಿದು. ಅಲ್ಲದೆ ಇದು ಒಕ್ಕೂಟ ತತ್ವದ ಒಂದು ಗಂಭೀರ ಉಲ್ಲಂಘನೆ ಎಂದೂ ಖಂಡಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಹಣಕಾಸು ಮಂತ್ರಿಗಳು ಮತ್ತು ಇ.ಡಿ. ತಕ್ಷಣವೇ ಕೆ.ಐ.ಐ.ಎಫ್..ಬಿ. ವಿರುದ್ಧ ಪ್ರಕರಣವನ್ನು ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದೆ.

"ನಾಚಿಕೆಯಿಲ್ಲದೆ ಕೇಂದ್ರೀಯ ಸಂಸ್ಥೆಗಳ ದುರುಪಯೋಗ ನಡೆಯುತ್ತಿದೆ"

ಕಸ್ಟಮ್ಸ್ ಅಧಿಕಾರಿಗಳು ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮೂವರು ಇತರ ಮಂತ್ರಿಗಳು ಮತ್ತು ವಿಧಾನಸಭಾ ಅಧ್ಯಕ್ಷರನ್ನು ಸುಳ್ಳು ಮೊಕದ್ದಮೆಯಲ್ಲಿ ಸಿಕ್ಕಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ಈ ಉದ್ದೇಶಕ್ಕೆ ಅವರು ಚಿನ್ನ ಕಳ್ಳಸಾಗಾಣಿಕೆ ಪ್ರಕರಣದಲ್ಲಿ ನ್ಯಾಯಾಂಗ ಕಸ್ಟಡಿಯಲ್ಲಿ ಇರುವ ಒಬ್ಬ ಆರೋಪಿಯಿಂದ ಒಂದು ಅಫಿಡವಿಟ್‌ನ್ನು ತೋರಿಸಿದ್ದಾರೆ. ನಿಜಸಂಗತಿಯೆಂದರೆ ಈ ಹೇಳಿ ಬರೆಸಿದ ಹೇಳಿಕೆಯನ್ನು ಕೆಲವು ತಿಂಗಳ ಹಿಂದೆ ದಾಖಲು ಮಾಡಿಕೊಳ್ಳಲಾಗಿತ್ತು ಮತ್ತು ಈಗ ಚುನಾವಣೆಗಳ ಪ್ರಕಟಣೆಯ ನಂತರ ಸಲ್ಲಿಸಲಾಗಿದೆ ಎಂಬುದು ಈ ನಡೆಯ ಹಿಂದಿರುವ ರಾಜಕೀಯ ಆಟವನ್ನು ತೋರಿಸುತ್ತದೆ ಎಂದು ಪೊಲಿಟ್ ಬ್ಯುರೊ ಹೇಳಿದೆ.

ಬಿಜೆಪಿ ಕೇಂದ್ರ ಸರಕಾರ ಮುಖ್ಯಮಂತ್ರಿಗಳು ಮತ್ತು ಎಲ್.ಡಿ.ಎಫ್. ಸರಕಾರದ ಹೆಸರುಗೆಡಿಸಲು ಕೇಂದ್ರೀಯ ಸಂಸ್ಥೆಗಳನ್ನು ವ್ಯವಸ್ಥಿತವಾಗಿ ದುರುಪಯೋಗ ಪಡಿಸಿಕೊಳ್ಳುತ್ತಿದೆ. ಆದರೆ ಕೇರಳದ ಜನತೆ ಇದರ ಹಿಂದಿರುವ ರಾಜಕೀಯ ಕುಯುಕ್ತಿಗಳನ್ನು ಕಾಣುತ್ತಾರೆ ಮತ್ತು ಬಿಜೆಪಿ ಹಾಗೂ ಯುಡಿಎಫ್ ಅನುಸರಿಸುತ್ತಿರುವ ಹೊಲಸು ತಂತ್ರಗಳಿಗೆ ತಕ್ಕ ಉತ್ತರ ಕೊಡುತ್ತಾರೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಎಲ್.ಐ.ಸಿ. ಶೇರು ಮಾರಾಟಕ್ಕೆ ಹಣಕಾಸು ಮಸೂದೆಯ ದಾರಿ ಸರಿಯಲ್ಲ ಲೋಕಸಭಾಧ್ಯಕ್ಷರಿಗೆ ಎಲ್.ಐ.ಸಿ. ನೌಕರರ, ಅಧಿಕಾರಿಗಳ ಸಂಘಟನೆಗಳ ಪತ್ರ

ಎಲ್.ಐ.ಸಿ. ಯಲ್ಲಿ ಖಾಸಗಿಯವರು ಪಾಲು ಹೊಂದುವಂತೆ ಅನುವು ಮಾಡಿಕೊಡಬೇಕೆಂದು ನಿರ್ಧರಿಸಿರುವ ಸರಕಾರ ಇದಕ್ಕಾಗಿ ಎಲ್.ಐ.ಸಿ. ಕಾಯ್ದೆಯಲ್ಲಿ ತಿದ್ದುಪಡಿಗಳನ್ನು ತರಲು ಮುಂದಾಗಿದೆ. ಇದನ್ನು ಅದು ಹಣಕಾಸು ಮಸೂದೆಯ ಭಾಗವಾಗಿ ತರಬೇಕೆಂದಿದೆ.

ಹೀಗೆ ಮಾಡಬಾರದೆಂದು ಸರಕಾರಕ್ಕೆ ಸಲಹೆ ನೀಡಬೇಕು ಎಂದು ಎಲ್.ಐ.ಸಿ.ಯ ನೌಕರರ 2 ಸಂಘಟನೆಗಳು, ದರ್ಜೆ 1 ಅಧಿಕಾರಿಗಳ ಸಂಘಟನೆ ಹಾಗೂ ಅಭಿವೃದ್ಧಿ ಅಧಿಕಾರಿಗಳ ಸಂಘಟನೆ ಲೋಕಸಭಾಧ್ಯಕ್ಷರನ್ನು ಕೋರಿವೆ. ಏಕೆಂದರೆ, ಎಲ್.ಐ.ಸಿ.ಯನ್ನು ಶೇರು ಮಾರುಕಟ್ಟೆಗಳ ಪಟ್ಟಿಗೆ ಸೇರಿಸಿದರೆ ಅದು 40 ಕೋಟಿ ಪಾಲಿಸಿದಾರರು ಮತ್ತು ಒಟ್ಟು ರಾಷ್ಟ್ರೀಯ ಅರ್ಥವ್ಯವಸ್ಥೆಯ ಮೇಲೆ ಭಾರೀ ಪರಿಣಾಮಗಳನ್ನು ಬೀರಲಿದೆ ಎಂದು ಲೋಕಸಭಾಧ್ಯಕ್ಷರಿಗೆ ಸಲ್ಲಿಸಿರುವ ಪತ್ರದಲ್ಲಿ ಹೇಳಿದ್ದಾರೆ.

ಹಣಕಾಸು ಮಸೂದೆಯ ಭಾಗವಾಗಿ ಮಂಡಿಸದಿದ್ದರೆ, ಸರಕಾರ ಮಾಡಬೇಕೆಂದಿರುವ ತಿದ್ದುಪಡಿಗಳನ್ನು ಕುರಿತಂತೆ ಸಂಸದೀಯ ಸ್ಥಾಯೀ ಸಮಿತಿಯಲ್ಲಿ ಸಂಬಂಧಪಟ್ಟ ಎಲ್ಲರಿಗೆ ತಂತಮ್ಮ ಅಭಿಪ್ರಾಯಗಳನ್ನು ಸಲ್ಲಿಸಲು ಮತ್ತು ಈ ಮೂಲಕ ಸ್ಥಾಯೀ ಸಮಿತಿ ಈ ವಿಷಯವನ್ನು ಕೂಲಂಕುಷವಾಗಿ ಪರೀಕ್ಷಿಸಲು ಸಾಧ್ಯವಾಗುತ್ತದೆ. ಎಲ್.ಐ.ಸಿ.ಯ ಎಲ್ಲ ವಿಭಾಗಗಳ ನೌಕರರನ್ನು ಪ್ರತಿನಿಧಿಸುವ ತಮ್ಮ ಸಂಘಟನೆಗಳಿಗೆ ಬಲವಾದ ಆಕ್ಷೇಪಗಳಿವೆ. ಇವು ಸರಿಯಾದ ತರ್ಕಗಳನ್ನು ಆಧರಿಸಿರುವ ಆಕ್ಷೇಪಗಳು. ಆದ್ದರಿಂದ ಲೋಕಸಭಾದ್ಯಕ್ಷರು ಈ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಾರೆ ಎಂದು ಈ ನಾಲ್ಕು ಸಂಘಟನೆಗಳ ಮುಖಂಡರು ತಮ್ಮ ಪತ್ರದಲ್ಲಿ ಆಶಿಸಿದ್ದಾರೆ.

ಅಖಿಲ ಭಾರತ ವಿಮಾ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ ಮಿಶ್ರ, ಅಖಿಲ ಭಾರತ ಎಲ್‌ಐಸಿ ನೌಕರರ ಫೆಡರೇಷನ್‌ನ ಪ್ರಧಾನ ಕಾರ್ಯದರ್ಶಿ ರಾಜೇಶ್ ಕುಮಾರ್, ಎಲ್‌ಐಸಿ ದರ್ಜೆ 1 ಅಧಿಕಾರಿಗಳ ಸರಘಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎಸ್. ರಾಜಕುಮಾರ್ ಮತ್ತು ಮತ್ತು ರಾಷ್ಟ್ರೀಯ ವಿಮಾ ಕ್ಷೇತ್ರ ಕಾರ್ಯಕರ್ತರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ವಿವೇಕ್ ಸಿಂಗ್ ಜಂಟಿಯಾಗಿ ಲೋಕಸಭಾಧ್ಯಕ್ಷರಿಗೆ ಈ ಪತ್ರವನ್ನು ಬರೆದಿದ್ದಾರೆ.

ರೈತರ ಮುಂದುವರೆದ ಹೋರಾಟ–ಮಾರ್ಚ್ 26 ರಂದು ಭಾರತ ಬಂದ್ ಮಾರ್ಚ್ 28: ರೈತ–ವಿರೋಧಿ ಕಾಯ್ದೆಗಳ ಹೋಳಿ ದಹನ–ಎಸ್.ಕೆ.ಎಂ. ಕರೆ

ಮಾರ್ಚ್ 6 ರಂದು ದಿಲ್ಲಿ ಗಡಿಗಳಲ್ಲಿ ರೈತರ ಹೋರಾಟ 100 ದಿನಗಳನ್ನು ಪೂರ್ಣಗೊಳಿಸಿದ ಸಂದರ್ಭದಲ್ಲಿ ಪಶ್ಚಿಮ ಹೊರವಲಯ ಹೆದ್ದಾರಿ ಬಂದ್ ಮತ್ತು ಮಾರ್ಚ್ 8ರಂದು ದಿಲ್ಲಿ ಗಡಿಗಳಲ್ಲಿ ರೈತ ಮಹಿಳಾ ದಿನಾಚರಣೆಯ ನಂತರ

ಮಾರ್ಚ್ 10 ರಂದು, ಹೋರಾಟದ 105ನೇ ಸಭೆ ನಡೆಸಿದ ಸಂಯುಕ್ತ ಕಿಸಾನ್ ಮೋರ್ಚಾ ರೈತರ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸುವ ಕಾರ್ಯಕ್ರಮವನ್ನು ಪ್ರಕಟಿಸಿದೆ.

ಮಾರ್ಚ್ 26 ರಂದು ಭಾರತ ಬಂದ್ ಯೋಜಿಸಲು **ಮಾರ್ಚ್ 17 ರಂದು ಕಾರ್ಮಿಕ ಸಂಘಟನೆಗಳು ಮತ್ತು ಇತರ ಸಮೂಹ ಸಂಘಟನೆಗಳೊಂದಿಗೆ ಜಂಟಿ ಸಮಾವೇಶ** ನಡೆಸಲಾಗುವುದು.

ಇದಕ್ಕೆ ಮೊದಲು **ಮಾರ್ಚ್ 15ನ್ನು ಕಾರ್ಪೊರೇಟ್–ವಿರೋಧಿ ದಿನ ಮತ್ತು ಸರ್ಕಾರ–ವಿರೋಧಿ ದಿನವಾಗಿ** ಎಲ್ಲಾ ಜಿಲ್ಲೆಗಳಲ್ಲಿ ಪೆಟ್ರೋಲ್–ಡೀಸೆಲ್– ಅಡುಗೆ ಅನಿಲ ಬೇಲೆಯೇರಿಕೆಗಳು ಮತ್ತು ಇತರ ಬೆಲೆಯೇರಿಕೆಗಳ ವಿರುದ್ಧ ಎಸ್‌ಡಿಎಂ/ಡಿಎಂ ಗಳಿಗೆ ಮನವಿ ಪತ್ರ ಸಲ್ಲಿಸಲಾಗುವುದು ಮತ್ತು ಎಲ್ಲ ರೈಲು ನಿಲ್ದಾಣಗಳಲ್ಲಿ ಖಾಸಗೀಕರಣದ ವಿರುದ್ಧ ಕಾರ್ಮಿಕ ಸಂಘಟನೆಗಳೊಂದಿಗೆ ಮತಪ್ರದರ್ಶನಗಳನ್ನು ನಡೆಸಲಾಗುವುದು.

ಮಾರ್ಚ್ 19ರಂದು ದೇಶಾದ್ಯಂತ ಮಂಡಿಗಳಲ್ಲಿ 'ಎಫ್‌ಸಿಐ ಮತ್ತು ಕೃಷಿ ಬಚಾವೋ' ಪ್ರತಿಭಟನೆಗಳನ್ನು ನಡೆಸಲಾಗುವುದು.

ಭಗತ್ ಸಿಂಗ್ ಹುತಾತ್ಮರಾದ ಮಾರ್ಚ್ 23ರಂದು ದೇಶಾದ್ಯಂತದಿಂದ ಯುವಜನರು ದಿಲ್ಲಿ ಗಡಿಗಳಿಗೆ ಬಂದು ರೈತರ ಪ್ರತಿಭಟನೆಗಳಲ್ಲಿ ಪಾಲುಗೊಳ್ಳುತ್ತಾರೆ.

ಮಾರ್ಚ್ 26ರಂದು ಈ ಹೋರಾಟಕ್ಕೆ ನಾಲ್ಕು ತಿಂಗಳಾಗುವ ಸಂದರ್ಭದಲ್ಲಿ ಒಂದು ಸಂಪೂರ್ಣ ಭಾರತ ಬಂದ್ ಆಚರಿಸಲಾಗುವುದು.

ಮಾರ್ಚ್ 28 ರಂದು ಹೋಳಿ ದಹನವನ್ನು ರೈತ–ವಿರೋಧಿ ಕಾಯ್ದೆಗಳ ದಹನದ ಮೂಲಕ ಆಚರಿಸಲಾಗುವದು ಎಂದು ಸಂಯುಕ್ತ ಕಿಸಾನ್ ಮೋರ್ಚಾ ನಿರ್ಧರಿಸಿದೆ.

ರೈತ ಆಂದೋಲನ ಇದುವರೆಗೂ ಶಾಂತಿಯುತವಾಗಿ ನಡೆಯುತ್ತಿದ್ದರೂ ಕೆಲವು ವೆಬ್‌ಸೈಟ್‌ಗಳು

ಕಿಸಾನ್ ಚಳುವಳಿ 'ಸರ್‌ಬ್ಲೋಹ್ ರ‍್ಯಾನ್ಸಮ್‌ವೇರ್ ಕುತಂತ್ರಾಂಶದ ಮೂಲಕ ಬೆದರಿಕೆ ಹಾಕುತ್ತದೆ ಎಂದು ಅಪಪ್ರಚಾರ ಮಾಡುತ್ತಿವೆ. ಆದರೆ ಇದಕ್ಕೂ ತಮಗೂ ಏನೂ ಸಂಬಂಧವಿಲ್ಲ ಎಂದು ಸಂಯುಕ್ತ ಕಿಸಾನ್ ಮೋರ್ಚಾ ಸ್ಪಷ್ಟಪಡಿಸಿದೆ.

ಮಾರ್ಚ್ 10ರಂದು ಹರ‍್ಯಾಣದ ಅಲೆವಾದಲ್ಲಿ ಮತ್ತು ದುಲ್ಕೇರಿಯಲ್ಲಿ ಕಿಸಾನ್ ಏಕತಾ ಮಹಾಪಂಚಾಯತ್ ನಡೆದಿವೆ. ಕೊಲ್ಕತಾದಲ್ಲಿ "ಬಿಜೆಪಿಗೆ ಮತ ಇಲ್ಲ" ಎಂದು ರ‍್ಯಾಲಿ ನಡೆದಿದೆ. ಇದರಲ್ಲಿ 10,000 ವಿದ್ಯಾರ್ಥಿಗಳು, ಯುವಜನರು, ರೈತರು, ಕಾರ್ಮಿಕರು ಮತ್ತು ಇತರ ನಾಗರಿಕರು ಭಾಗವಹಿಸಿದರು ಎಂದು ಸಂಯುಕ್ತ ಕಿಸಾನ್ ಮೋರ್ಚಾದ ಈ ಹೇಳಿಕೆ ತಿಳಿಸಿದೆ.

ಸಂಪಾದಕೀಯ

ಕಣ್ಣಿಗೆ ಮಣ್ಣೆರಚುವ ಯಡ್ಡಿ ಬಜೆಟ್

ಹಣಕಾಸು ಇಲಾಖೆಯನ್ನು ತನ್ನ ಮುಷ್ಠಿಯಲ್ಲಿ ಭದ್ರವಾಗಿ ಇಟ್ಟುಕೊಂಡಿರುವ ಮುಖ್ಯಮಂತ್ರಿ ಯಡಿಯೂರಪ್ಪನವರು ತಮ್ಮ 8ನೇ ಕೂಸಿಗೆ ಜನ್ಮ ನೀಡಿದ್ದಾರೆ. ಆದರೆ ಅದು ಹೆಣ್ಣೋ ಅಥವಾ ಗಂಡೋ ಎನ್ನುವುದು ತಿಳಿಯದಿದ್ದರೆ ಅದು ಯಡ್ಡಿಯವರ ತಪ್ಪಲ್ಲ ಎನ್ನುವುದು ತಿಳಿಯದಿದ್ದರೆ ಅದು ಯಡ್ಡಿಯವರ ತಪ್ಪಲ ಎನ್ನುತ್ತಿದಾರೆ ಕಮಲದ ಮಂದಿ. ವಿಧಾನ ಮಂಡಲದಲ್ಲಿ ಚರ್ಚೆ ಸುಸೂತ್ರವಾಗಿ ನಡೆದರೆ ಈ ಬಜೆಟ್‌ನ ನಿಜ ಸ್ವರೂಪ ಬಯಲಾಗಬಹುದು.

ನಾನು ಈ ಬಾರಿ ಕೊರತೆಯ ಬಜೆಟ್ ಮಂಡಿಸುವುದಿಲ್ಲ ಎಂದು ಯಡಿಯೂರಪ್ಪನವರು ಹೇಳುತ್ತಿದ್ದರು. ಆದರೆ ಮುಖ್ಯಮಂತ್ರಿ ಯಡಿಯೂರಪ್ಪನವರು ತಾವು ಹೇಳುವುದು ಒಂದಾದರೆ ಮಾಡುವುದು ಇನ್ನೊಂದು ಎಂದು ಮತ್ತೊಮ್ಮೆ ಸಾಬೀತ್‌ಪಡಿಸಿದ್ದಾರೆ.

ಯಡಿಯೂರಪ್ಪರವರು ಮಂಡಿಸಿದ, ಪ್ರಸಕ್ತ ಅಧಿವೇಶನದಲ್ಲಿ ಚರ್ಚೆಯಾಗಬೇಕಾದ ಬಜೆಟ್ 46 ಸಾವಿರ ಕೋಟಿ ರೂ. ಗಳ ಕೊರತೆಯ ಬಜೆಟ್ ಆಗಿದೆ. ವರಮಾನ ಸಂಗ್ರಹದಲ್ಲಿ ಉಂಟಾಗಿರುವ ಅಪಾರ ಪ್ರಮಾಣದ ಕೊರತೆಯನ್ನು ನೀಗಲೂ 71 ಸಾವಿರ ಕೋಟಿ ರೂ. ಸಾರ್ವಜನಿಕ ಸಾಲ ಪಡೆಯುವ ಇಂಗಿತವನ್ನು ಪ್ರಕಟಿಸಲಾಗಿದೆ.

ಬಜೆಟ್ ಕೊರತೆಯನ್ನು ನೀಗಿಸಲು ಸರ್ಕಾರ ಹೆಚ್ಚೆಚ್ಚು ಸಾಲಕ್ಕೆ ಕೈಯೊಡ್ಡಬೇಕಾಗುತ್ತದೆ. ತಂದ ಸಾಲಕ್ಕೆ ಅಪಾರ ಪ್ರಮಾಣದ ಬಡ್ಡಿ ತೆರಬೇಕಾಗುತ್ತದೆ. ಬಡ್ಡಿ ಸಹಿತದ ಈ ಸಾಲದ ಹೊರೆ ಜನಸಾಮಾನ್ಯರ ಮೇಲೆ ಹೇರಲಾಗುತ್ತದೆ. ಪರೋಕ್ಷ ತೆರಿಗೆಗಳ ಭಾರದಿಂದ ಈಗಾಗಲೇ ಬಗ್ಗಿ ಹೋಗಿರುವ ಜನಸಾಮಾನ್ಯರ ಬೆನ್ನು ಮುರಿದುಹೋಗುತ್ತದೆ. ಸಾಲ ಮಾಡಿಯಾದರೂ ತುಪ್ಪ ತಿನ್ನಬೇಕು ಎನ್ನುವವರೆಗೆ ನಾಯಕರಾಗಲು ಹೊರಟಿದ್ದಾರೆ ಯಡಿಯೂರಪ್ಪನವರು.

ಯಡಿಯೂರಪ್ಪನವರ ಹೊಗಳು ಭಟ್ಟರು ಇನ್ನೊಂದು ವಿಷಯದತ್ತ ಬಾರೀ ಪ್ರಚಾರ ಮಾಡುತ್ತಿದ್ದಾರೆ. ಈ ಸಲದ ಬಜೆಟ್‌ನಲ್ಲಿ ಒಂದೇ ಒಂದು ಪೈಸೆ ಹೆಚ್ಚಿನ ತೆರಿಗೆ ಹೊರೆಯನ್ನು ಹೇರದೆ ಒಂದು ದಾಖಲೆ ನಿರ್ಮಾಣ ಮಾಡಿದ್ದಾರೆ! ಇದನ್ನು ನಂಬುತ್ತಿರುವ ಜನರಿಗೆ ಕಡಿಮೆ ಇಲ್ಲ. ಇದು ಆತಂಕದ ವಿಷಯವಾಗಿದೆ. ಇದನ್ನು ಹಲವು ಬಾರಿ ಯಡಿಯೂರಪ್ಪನವರು ಹೇಳಿ ಜನರ ಕಣ್ಣಿಗೆ ಮಣ್ಣೆರಚಿದ್ದಾರೆ.

ಬಜೆಟ್‌ನಲ್ಲಿ ತೆರಿಗೆ ಹೆಚ್ಚಳ ಮಾಡಲು ಯಡಿಯೂರಪ್ಪನವರಿಗೆ ಧೈರ್ಯ ಇದೆಯಾ? ಈಗಾಗಲೇ ಕೇಂದ್ರ ಸರ್ಕಾರದ ಕ್ರಮಗಳಿಂದ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಗಗನಕ್ಕೇರಿದೆ. ಇದರಿಂದ ಅಗತ್ಯ ವಸ್ತುಗಳ ಹಾಗೂ ಸಾಗಾಟದ ಬೆಲೆಗಳು ಅಪಾರ ಪ್ರಮಾಣದಲ್ಲಿ ಹೆಚ್ಚಾಗಿದೆ. ಹೀಗೆ ಬಜೆಟ್ ಪೂರ್ವದಲ್ಲೇ ಒಂದು ಸುತ್ತಿದ ಬೆಲೆ ಏರಿಕೆಯನ್ನು ಜನತೆಯ ಮೇಲೆ ಹೇರಲಾಗಿದೆ. ಬಜೆಟ್‌ನಲ್ಲಿ ಅದನ್ನು ಮುಚ್ಚಿಡಲಾಗಿದೆ.

ಪೆಟ್ರೋಲ್, ಡಿಸೆಲ್, ಅಡುಗೆ ಅನಿಲಗಳ ಬೆಲೆಗಳನ್ನು ಇಳಿಸಿ ಸರ್ಕಾರ ಜನರ ನೆರವಿಗೆ ಬರಬಹುದಾಗಿತ್ತು. ಆ ಮೂಲಕ ಬೆಲೆಏರಿಕೆಯಿಂದ ತತ್ತರಿಸುವ ಜನ ಸಾಮಾನ್ಯರ ನೆರವಿಗೆ ಬರಬಹುದಾಗಿತ್ತು. ಆದರೆ ಯಡಿಯೂರಪ್ಪ ಸರಕಾರ ಹಾಗೆ ಮಾಡಲು ಮನಸ್ಸು ಮಾಡಲಿಲ್ಲ. ಹೀಗೆ ಯಡಿಯೂರಪ್ಪನವರು ಜನತೆಗೆ ದ್ರೋಹ ಮಾಡಲು ಸಜ್ಜಾಗಿದ್ದಾರೆ.

ಯಡಿಯೂರಪ್ಪ ಸರ್ಕಾರ ತನ್ನ ದುರಾಡಳಿತವನ್ನು ಮರೆಮಾಚಲು ನೈಸರ್ಗಿಕ ವಿಕೋಪ, ಕೋವಿಡ್–19 ದುರಂತವನ್ನು ಚೆನ್ನಾಗಿ ಉಪಯೋಗಿಸುತ್ತಿದ್ದಾರೆ. 'ಕೋವಿಡ್ ನಿಂದಾಗಿ ಕೆಲಸ ಕಳೆದುಕೊಂಡ ಜನರಿಗೆ ನೆರವಿನ ಹಸ್ತ' ಚಾಚಲು ಮುಂದಾಗುತ್ತಿಲ್ಲ. ಬಜೆಟ್ ಪೂರ್ವದಲ್ಲಿ ಒಂದು ಸುತ್ತಿನ ಬೆಲೆ ಏರಿಕೆ ಆವರಿಸಿಕೊಂಡಿದೆ. ಬಜೆಟ್ ಕೊರತೆ, ಸಾಲದ ಬಡ್ಡಿ ಹೇರುವ ಮೂಲಕ ಇನ್ನೊಂದು ಸುತ್ತಿನ ಬೆಲೆ ಏರಿಕೆಗೆ ಸರ್ಕಾರ ಸಜ್ಜಾಗುತ್ತಿದೆ. ಬಿಜೆಪಿ ಸರ್ಕಾರಗಳ ಈ ಜನವಿರೋಧಿ ನೀತಿಗಳ ವಿರುದ್ಧ ಜನಸಂಗ್ರಾಮಗೊಳಿಸುವುದೊಂದೇ ಉಳಿದಿರುವ ದಾರಿ.

ಸದನದ ಸಮಯ ಹಾಗೂ ಸಾರ್ವಜನಿಕ ಹಣದ ದುಂದುವೆಚ್ಚದಲ್ಲಿ ತೊಡಗಿದ ರಾಜ್ಯ ಸರಕಾರ–ಸಿಪಿಐಎಂ ಖಂಡನೆ

ಅನಗತ್ಯ ಮತ್ತು ಪ್ರಸ್ತುವಲ್ಲದ ವಿಷಯದ ಮೇಲೆ ಸದನದ ಸಮಯವನ್ನು ಹಾಳು ಮಾಡುತ್ತಿರುವ ಹಾಗೂ ಸಾರ್ವಜನಿಕರ ತೆರಿಗೆ ಹಣವನ್ನು ದುಂದು ವೆಚ್ಚ ಮಾಡುತ್ತಿರುವ ರಾಜ್ಯ ಸರಕಾರದ ಬೇಜವಾಬ್ದಾರಿಯುತ ಕ್ರಮವು ಅಕ್ಷಮ್ಯ ವೆಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ಖಂಡಿಸಿದೆ.

ರಾಜ್ಯವು ತೀವ್ರತರವಾದ ಜ್ವಲಂತ ಸಮಸ್ಯೆಗಳಿಂದ ಬಳಲುತ್ತಿರುವಾಗ ಮತ್ತು ಅವುಗಳಿಗೆ ಪರಿಹಾರ ಹುಡುಕಲು ಹಾಕಬೇಕಾದ ಸದನದ ಸಮಯವು ಕಳೆದೆರಡು ದಿನಗಳಿಂದ ರಾಜ್ಯ ಸರಕಾರದ ಹೊಣೆಗೇಡಿತನದಿಂದಾಗಿಯೇ ಪೋಲಾಗುತ್ತಿದೆ. ಬಿಜೆಪಿ ಹಾಗೂ ಸಂಘ ಪರಿವಾರವು ತನ್ನ ಜೀವಮಾನದುದ್ದಕ್ಕೂ ಸಮಸ್ಯೆ ಅಲ್ಲದವುಗಳನ್ನೇ, ದೊಡ್ಡ ಸಮಸ್ಯೆಗಳೆಂದು ಮುಂದೆ ಮಾಡಿ ಜನರ ಗಮನವನ್ನು ಬೇರೆಡೆ ಸೆಳೆಯುವ ಕುತಂತ್ರವನ್ನು ಮಾಡುತ್ತಾ ಬಂದಿವೆ. ಈಗಲೂ ಅದರ ಭಾಗವಾಗಿಯೇ, ಒಂದು ರಾಷ್ಟ್ರ ಒಂದು ಚುನಾವಣೆ ವಿಚಾರವನ್ನು ಮುನ್ನೆಲೆಗೆ ತಂದಿದೆಯೆಂದು ಸಿಪಿಐಎಂ ಕಟುವಾಗಿ ವಿಮರ್ಶಿಸಿದೆ.

ರಾಜ್ಯವು ಕಳೆದ ಮೂರು – ನಾಲ್ಕು ವರ್ಷಗಳಿಂದ ವ್ಯಾಪಕ ಬರಗಾಲ ಹಾಗೂ ಅತೀವೃಷ್ಟಿಗಳಿಂದ ಮತ್ತು ಕೋವಿಡ್ – 19, ಲಾಕ್ ಡೌನ್ ಗಳಿಂದ ಬಾಧಿತವಾಗಿದೆ. ಇವುಗಳಿಂದ ಬಾಧಿತರಾದ ರೈತರು, ಕೂಲಿಕಾರರು, ಮಹಿಳೆಯರು, ದಲಿತರು, ಕಾರ್ಮಿಕರ ಪರಿಹಾರದ ವಿಚಾರಗಳು ಗಂಭೀರವಾಗಿವೆ.

ಅದೇ ರೀತಿ, ರಾಜ್ಯದ ಜನಸಂಖ್ಯೆಯ ಅರ್ಧಕ್ಕಿಂತಲೂ ಹೆಚ್ಚಿರುವ ಯಾವುದೇ ರೈತರ ಯಾವುದೇ ಬೆಳೆಗೆ ಡಾ. ಎಂ.ಎಸ್. ಸ್ವಾಮಿನಾಥನ್ ನೇತೃತ್ವದ ಕೃಷಿ ಆಯೋಗದ ಸಲಹೆಯಂತೆ ಬೆಂಬಲ ಬೆಲೆ ನಿಗದಿಸುತ್ತಿಲ್ಲ. ಮಾತ್ರವಲ್ಲಾ, ನಿಗದಿಸಿದ ಕಳಪೆ ಬೆಲೆಯೂ ದೊರೆಯುತ್ತಿಲ್ಲ. ರೈತರನ್ನು ದೊಡ್ಡ ವ್ಯಾಪಾರಿಗಳ ಲೂಟಿಗೆ ಬಿಡಲಾಗಿದೆ.

ವಿದ್ಯಾವಂತ ನಿರುದ್ಯೋಗ ವ್ಯಾಪಕವಾಗಿ ಬೆಳೆಯುತ್ತಿದೆ. ಯುವಜನರು ಅಪಮಾನದ ಬದುಕು ಬದುಕುತ್ತಿದ್ದಾರೆ. ವ್ಯವಸಾಯ, ಉಪಕಸುಬುಗಳನ್ನು ಹಾಗೂ ಕೃಷಿ ಭೂಮಿಯನ್ನು ಕಾರ್ಪೋರೇಟ್ ಲೂಟಿಗೆ ತೆರೆಯಲು ಮತ್ತು ನೂರಾರು ವರ್ಷಗಳ ಸಮರ ಶೀಲ ಹೋರಾಟಗಳಿಂದ ಕಾರ್ಮಿಕರು ಪಡೆದುಕೊಂಡಿದ್ದ ಹಕ್ಕುಗಳನ್ನು ಕಸಿದು ಕಾರ್ಪೋರೇಟ್ ಲೂಟಿಗೆ ತೆರೆಯುವ ದೇಶ ದ್ರೋಹಿ ಕಾಯ್ದೆಗಳನ್ನು, ಗ್ರಾಹಕರ ಲೂಟಿಗೆ ಕಾರಣವಾದ ಅಗತ್ಯ ವಸ್ತುಗಳ ತಿದ್ದುಪಡಿ ಕಾಯ್ದೆ, ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆಗಳಂತಹ ಸಂವಿಧಾನ ಹಾಗೂ ಪ್ರಜಾಪ್ರಭುತ್ವ ವಿರೋಧಿ ಕಾಯ್ದೆಗಳನ್ನು ದೇಶದ ಹಾಗೂ ರಾಜ್ಯದ ಜನತೆಯ ಮೇಲೆ ಬಲವಂತವಾಗಿ ಹೇರಲಾಗಿದೆ.

ದೇಶ ಹಾಗೂ ರಾಜ್ಯಗಳಿಗೆ ಅಪಾರ ಲಾಭ ತಂದುಕೊಡುತ್ತಿರುವ ಮತ್ತು ದಮನಿತ ಜನತೆಗೆ ಮೀಸಲಾತಿಯಡಿ ವ್ಯಾಪಕ ಉದ್ಯೋಗ ನೀಡುತ್ತಿರುವ ಸಾರ್ವ ಜನಿಕ ವಲಯದ ಉದ್ದಿಮೆಗಳಾದ ಬ್ಯಾಂಕ್, ವಿಮೆ, ರೈಲ್ವೇ, ಹಡಗು, ವಿಮಾನ, ಬಿ.ಎಸ್.ಎನ್.ಎಲ್, ವಿದ್ಯುತ್ ಮುಂತಾದ ರಂಗಗಳನ್ನು ಕಾರ್ಪೋರೇಟ್ ವಲಯಕ್ಕೆ ಧಾನ ಮಾಡುತ್ತಿರುವದರಿಂದ ಇಲ್ಲಿನ ನೌಕರರು ಉದ್ಯೋಗದ ತೀವ್ರ ಅಭದ್ರತೆಯನ್ನು ಎದುರಿಸುವಂತಾಗಿದೆ. ದೇಶದ ಜನತೆಗೆ ಸಂಪನ್ಮೂಲದ ಕೊರತೆಯುಂಟಾಗುವಂತಾಗಿದೆ.

ಕೇಂದ್ರ ಸರಕಾರ ಕಳೆದ ಬಜೆಟ್ ನಲ್ಲಿ ಕಾರ್ಪೋರೇಟ್ ಕಂಪನಿಗಳಿಗೆ ಲಕ್ಷಾಂತರ ಕೋಟಿ ತೆರಿಗೆ ವಿನಾಯಿತಿ ನೀಡಿ, ಜನ ಸಾಮಾನ್ಯರ ಮೇಲೆ ತೆರಿಗೆಯ ಭಾರ ಹೇರಿ, ಅಗತ್ಯ ವಸ್ತುಗಳ ವ್ಯಾಪಕ ಬೆಲೆ ಏರಿಕೆಗೆ ಕಾರಣವಾಗಿದೆ.

ಇಂತಹ ಗಹನವಾದ ಯಾವುದೇ ವಿಷಯಗಳನ್ನು ಚರ್ಚೆಗಳಿಲ್ಲದೇ ಪ್ರಜಾಸತ್ತಾತ್ಮಕ ವಿಧಾನಗಳನ್ನು ಗಾಳಿಗೆ ತೂರಿ, ಪಾರ್ಲಿಮೆಂಟಿನಲ್ಲಿ ಮತ್ತು ವಿಧಾನ ಸಭೆಗಳಲ್ಲಿ ಅಂಗೀಕರಿಸಲು ಕ್ರಮ ವಹಿಸಿದ ಬಿಜೆಪಿ, ಇದೀಗ ಒಂದು ಚುನಾವಣೆಯ ಕುರಿತು ಚರ್ಚಿಸುವ ಮತ್ತು ತಾನು ಭಾರೀ ಪ್ರಜಾಪ್ರಭುತ್ವವಾದಿ ಎಂದು ತೋರಿಸಿಕೊಳ್ಳುವ ನಾಟಕವಾಡುತ್ತಿದೆ ಎಂದು ಸಿಪಿಐಎಂ ವಿಮರ್ಶಿಸಿದೆ. ರಾಜ್ಯದ ಜನತೆ ಬಿಜೆಪಿಯ ಇಂತಹ ನಯ ವಂಚನೆಯ ಕುರಿತು ಜಾಗ್ರತೆ ವಹಿಸಿ ತಿರಸ್ಕರಿಸುವಂತೆ ಕರೆ ನೀಡಿದೆ.

ರಾಜ್ಯದ ಲಕ್ಷಾಂತರ ರೈತರು, ಕಾರ್ಮಿಕರು, ಮಹಿಳೆಯರು, ನಾಗರೀಕರು ಈ ಜನ ವಿರೋಧಿ ನೀತಿಗಳು ಹಾಗೂ ಲೂಟಿಕೋರ ಕಾಯ್ದೆಗಳ ವಿರುದ್ದ ತೀರ್ವ ರೀತಿಯ ಚಳುವಳಿಯಲ್ಲಿ ತೊಡಗಿರುವಾಗ ಜನರ ಗಮನವನ್ನು ಬೇರೆಡೆ ಸೆಳೆಯುವ ಕುತಂತ್ರವೇ ಇದಾಗಿದೆ.

ಇಂತಹ ಅಗ್ಗದ ಕುತಂತ್ರಗಳನ್ನು ಕೈಬಿಟ್ಟು ಜನರನ್ನು ಬಾಧಿಸುವ ಜ್ವಲಂತ ಸಮಸ್ಯೆಗಳ ಪರಿಹಾರದ ವಿಚಾರಗಳನ್ನು ಸದನವು ಕೈಗೆತ್ತಿಕೊಳ್ಳುವಂತೆ ರಾಜ್ಯ ಸರಕಾರ ಕ್ರಮ ವಹಿಸಬೇಕು ಎಂದು ಸಿಪಿಐಎಂ ರಾಜ್ಯ ಕಾರ್ಯದರ್ಶಿ ಯು. ಬಸವರಾಜ ಮುಖ್ಯಮಂತ್ರಿಗಳನ್ನು ಒತ್ತಾಯಿಸಿದ್ದಾರೆ.

ಮಹಾನಗರದ ಅಗತ್ಯ ಮನಗಾಣದ ರಾಜ್ಯ ಬಜೆಟ್: ಸಿಪಿಐ(ಎಂ)

ರಾಜ್ಯ ಬಿಜೆಪಿ ಸರ್ಕಾರದ ಬಜೆಟ್ ಮಹಾನಗರದ ಜನತೆಯ ಅಗತ್ಯ ಮನಗಾಣುವಲ್ಲಿ ವಿಫಲವಾಗಿದೆ ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ಖಂಡಿಸಿವೆ.

ಒಟ್ಟಾರೆ ರಾಜ್ಯದ ಮತ್ತು ಬೆಂಗಳೂರಿನ ಆರ್ಥಿಕತೆ ಮತ್ತು ಜನತೆಯ ಜೀವನ ಹಾಗು ಜೀವನಾದಾರವು ಕೋವಿಡ್ ಲಾಕ್ಡೌನಿಂದಾಗಿ ಸಂಕಷ್ಟಕ್ಕೆ ಸಿಲುಕಿದೆ. ಅದಕ್ಕೆ ಯಾವುದೆ ರೀತಿಯ ಪರಿಹಾರವನ್ನು ಒದಗಿಸದ ಹಾಗು ಜನತೆಯ ಸಂಕಟಕ್ಕೆ ಮಿಡಿಯದ ಬಜೆಟ್ಟಾಗಿದೆ ಎಂದು ಸಿಪಿಐ(ಎಂ) ಟೀಕಿಸಿದೆ.

ಬಿಬಿಎಂಪಿ ಕಸ ನಿರ್ವಹಣೆಗೆ ಪ್ರತ್ಯೇಕ ಕಂಪನಿಯ ಸ್ಥಾಪನೆಯು ಜನರ ಮೇಲೆ ಬಳಕೆದಾರರ ಶುಲ್ಕ ವಿಧಿಸುವ ಹೊರೆಯನ್ನು ಜನತೆಯ ಮೇಲೆ ಹೊರಿಸಿ ಕಸ ನಿರ್ವಹಣೆಯನ್ನು ಕಾರ್ಪೊರೇಟ್ ಕಂಪನಿಗಳಿಗೆ ವಹಿಸಿ ಜನತೆಯ ಲೂಟಿಗೆ ಅನುವುಗೊಳಿಸಲಿದೆ.

ಬೆಂಗಳೂರು ನಗರದ ಸಮಗ್ರ ಅಭಿವೃದ್ಧಿಗಾಗಿ ಮೀಸಲಿಟ್ಟಿರುವ 7795 ಕೋಟಿ ರೂಗಳ ಬಳಕೆಯ ಕುರಿತು ವಿವರಣೆ ನೀಡದೆ ಒಟ್ಟಾರೆ ಪ್ರಕಟಿಸಿ ಅದರ ಬಳಕೆಯನ್ನು ತನ್ನ ರಾಜಕೀಯ ಹಿತಾಸಕ್ತಿಗಾಗಿ ಬಳಕೆ ಮಾಡಿಕೊಳ್ಳಲು ಮುಕ್ತವಾಗಿರಿಸಿ ಕೊಂಡಿದೆ. ಅದನ್ನು ಕಸ ನಿರ್ವಹಣೆಗೆ ಸ್ಥಾಪಿಸಲು ಉದ್ದೇಶಿಸಿರುವ ಕಂಪನಿಗೆ ಬಳಸಿ ಕೊಳ್ಳುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಹಾಗಾಗಿ ಇಷ್ಟು ದೊಡ್ಡ ಮೊತ್ತ ನೀಡಿದ್ದೇವೆಂದು ಮೂಗಿಗೆ ತುಪ್ಪ ಸವರುವ ಕೆಲಸವನ್ನು ಮುಂಬರುವ ಬಿಬಿಎಂಪಿ ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ಸರ್ಕಾರವು ಮಾಡಲು ಹೊರಟಿದೆ.

ಬೆಂಗಳೂರಿನ ಜನತೆಯ ಜೀವನಾದಾರಕ್ಕೆ ಈ ಕ್ರಮಗಳು ಪರಿಹಾರ ನೀಡುವುದಿಲ್ಲ ಆದರೆ ಗುತ್ತಿಗೆದಾರರು ಅಧಿಕಾರಿಗಳು ಬಿಜೆಪಿ ನಾಯಕರ ಹಿತಕಾಯಲಿದೆ. ನಗರ ಮೂಲಸೌಕರ್ಯ ಬಲಪಡಿಸುವ ನಿಟ್ಟಿನಲ್ಲಿ ಕೈಗಾರಿಕಾ ಪ್ರದೇಶಗಳಾದ ಜಿಗಣಿ, ಬಿಡದಿ, ದಾಬಸಪೇಟೆ, ಹೊಸಕೋಟೆ, ದೊಡ್ಡಬಳ್ಳಾಪುರ ಪ್ರದೇಶಗಳಿಗೆ ಮತ್ತು ರಿಂಗ್ ರಸ್ತೆಗೆ ಮೆಟ್ರೋ ವಿಸ್ತರಣೆಯ ಪ್ರಸ್ತಾಪವನ್ನು ಸಹಾ ಮಾಡದೆ ಅಭಿವೃದ್ಧಿಯ ಮಾತು ಬರಿ ನೆಪ ಮಾತ್ರವಾಗಲಿದೆ. ಅಂತೆಯೇ ಬೆಳೆದು ಬಂದಿರುವ ಕೈಗಾರಿಕಾ ನಗರ ಪ್ರದೇಶಗಳಾದ ಆನೇಕಲ್ ನ ಬೊಮ್ಮಸಂದ್ರ, ಚಂದಾಪುರ, ಜಿಗಣೆ ವೀರಸಂದ್ರ ಒಳಗೊಂಡಂತೆ ಮಹಾನಗರ ಪಾಲಿಕೆಯನ್ನಾಗಿಸ ಬೇಕೆಂಬ ಅಂಶವನ್ನು ಒಳಗೊಳ್ಳದೆ ಬೆಂಗಳೂರು ನಗರವನ್ನು ವಿಶ್ವದರ್ಜೆಯ ನಗರವನ್ನಾಗಿಸಲು ಸಾಧ್ಯವಿಲ್ಲ ಎಂಬುದನ್ನು ಬಿಜೆಪಿ ಸರ್ಕಾರ ಅರಿಯಬೇಕಿದೆ ಎಂದು ಸಿಪಿಐ(ಎಂ) ಟೀಕಿಸಿದೆ.



ಮಾರ್ಚ್ 22 ಕ್ಕೆ ವಿಧಾನಸೌಧಕ್ಕೆ ಮುತ್ತಿಗೆ – ಯೋಗೇಂದ್ರ ಯಾದವ್

ಕಲಬುರ್ಗಿಯಿಂದ ಆರಂಭವಾಗಿರುವ ಬೆಂಬಲ ಬೆಲೆ ಹಕ್ಕೊತ್ತಾಯ (ಎಂಎಸ್ ಪಿ ದಿಲಾವ್) ದೇಶದಾದ್ಯಂತ ಮುಂದುವರಿಯಲಿದೆ. ಹೋರಾಟದ ಭಾಗವಾಗಿ ಕರ್ನಾಟಕ ಸಂಯುಕ್ತ ಹೋರಾಟ ಮೈತ್ರಿಕೂಟದ ನೇತೃತ್ವದಲ್ಲಿ ರೈತರು ಮಾರ್ಚ 22 ರಂದು ವಿಧಾನಸೌಧಕ್ಕೆಮುತ್ತಿಗೆ ಹಾಕಲಿದ್ದಾರೆ ಎಂದು ಸಂಯುಕ್ತ ಕಿಸಾನ್ ಮೋರ್ಚಾದ ರಾಷ್ಟ್ರ ನಾಯಕ ಯೋಗೇಂದ್ರ ಯಾದವ್ ತಿಳಿಸಿದ್ದಾರೆ.

ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬೆಂಬಲ ಬೆಲೆಯ ವಿಚಾರದಲ್ಲಿ ಕೇಂದ್ರ ಸರ್ಕಾರ ಸುಳ್ಳು ಹೇಳುತ್ತಿದೆ. ಕೃಷಿ ಸಂಬಂಧಿ ಹೊಸ ಕಾಯ್ದೆಗಳ ಜಾರಿಯಿಂದ ಕೃಷಿ ಉತ್ಪನ್ನ ಮಾರುಕಟ್ಟೆ (ಎಪಿಎಂಸಿ) ಮತ್ತು ಬೆಂಬಲ ಬೆಲೆ ವ್ಯವಸ್ಥೆಗಳು ನಾಶವಾಗಲಿವೆ. ಕರ್ನಾಟಕದಲ್ಲೇ ಇದಕ್ಕೆ ಸಾಕ್ಷ್ಯ ದೊರೆತಿದೆ' ಎಂದರು.

ಕಲಬುರ್ಗಿ, ಬಳ್ಳಾರಿ ಜಿಲ್ಲೆಗಳ ಎಪಿಎಂಸಿಗಳಿಗೆ ಭೇಟಿನೀಡಿ ಅಧ್ಯಯನ ಮಾಡಲಾಗಿದೆ. ರೈತರಿಗೆ ಬೆಂಬಲ ಬೆಲೆಗಿಂತ ಕಡಿಮೆ ದರ ದೊರೆಯುತ್ತಿರುವುದು ಕಂಡುಬಂದಿದೆ. ಎಪಿಎಂಸಿಗಳಿಗೆ ಕೃಷಿ ಉತ್ಪನ್ನಗಳ ಆವಕದ ಪ್ರಮಾಣವೂ ಕುಸಿದಿದೆ ಎಂದರು.

ಡಾ.ಎಂ.ಎಸ್. ಸ್ವಾಮಿನಾಥನ್ ವರದಿಯ ಆಧಾರದಲ್ಲಿ ಬೆಂಬಲ ಬೆಲೆಯನ್ನು ಕಾನೂನಿನ ಮೂಲಕ ಖಾತರಿಪಡಿಸಬೇಕು ಎಂಬುದು ರೈತರ ಬೇಡಿಕೆ. ಅದನ್ನು ಪಡೆಯುವವರೆಗೂ ಹೋರಾಟ ಮುಂದುವರಿಯುತ್ತದೆ ಎಂದು ಯಾದವ್ ತಿಳಿಸಿದರು.

ಸರಿಯಾದ ರೀತಿಯಲ್ಲಿ ಬೆಂಬಲ ಬೆಲೆ ದೊರಕದ ಕಾರಣದಿಂದ 2019–20ರಲ್ಲಿ ಕರ್ನಾಟಕದ ರೈತರಿಗೆ 13 ಬೆಳೆಗಳಲ್ಲಿ ರೂ. 3319 ಕೋಟಿ ನಷ್ಟವಾಗಿದೆ. ಸ್ವಾಮಿನಾಥನ್ ವರದಿಯ ಶಿಫಾರಸಿನಂತೆ ಲೆಕ್ಕ ಹಾಕಿದರೆ ನಷ್ಟದ ಪ್ರಮಾಣ ರೂ. 20,339 ಕೋಟಿ ಆಗುತ್ತದೆ. ಬೆಂಬಲ ಬೆಲೆ ನೀಡಲು ಲಕ್ಷಾಂತರ ಕೋಟಿ ರೂಪಾಯಿ ಬೇಕಾಗಿಲ್ಲ. ಅಧಿಕಾರದಲ್ಲಿ ಇರುವವರಿಗೆ ಬದ್ಧತೆ ಮತ್ತು ಇಚ್ಛಾಶಕ್ತಿ ಇರಬೇಕು ಎಂದರು.

ಕೇಂದ್ರ ಸರ್ಕಾರವು ರೈತ ಹೋರಾಟವನ್ನು ಹತ್ತಿಕ್ಕಿ, ಭೂಮಿಯೊಳಗೆ ಹೂತುಹಾಕಲು ಯತ್ನಿಸಿತು. ಅದಕ್ಕಾಗಿಯೇ ಸುಳ್ಳುಗಳನ್ನು ಸೃಷ್ಟಿಸಿತು. ನಾನಾ ತರಹದ ಅಪಪ್ರಚಾರ ಮಾಡಿತು. ಸರ್ಕಾರ ಹತ್ತಿಕ್ಕಲು ಯತ್ನಿಸಿದಂತೆಲ್ಲ ಹೋರಾಟ ವಿಸ್ತಾರವಾಗಿ ಬೆಳೆಯುತ್ತಿದೆ ಎಂದು ಯೋಗೇಂದ್ರ ಯಾದವ್ ಹೇಳಿದರು.

ಪಂಜಾಬ್ ನ ಜಾಂಬೂರಿ ಕಿಸಾನ್ ಸಭಾ ಅಧ್ಯಕ್ಷ ಡಾ. ಸತ್ನಾಂ ಸಿಂಗ್ ಅಜ್ನಾಲ, ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಡಾ.ಪ್ರಕಾಶ್ ಕಮ್ಮರಡಿ, ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ರೈತ ಸಂಘ ಮತ್ತು ಹಸಿರು ಸೇನೆ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್, ಜನಾಂದೋಲನ ಮಹಾಮೈತ್ರಿಯ ಅಧ್ಯಕ್ಷ ಎಸ್.ಆರ್. ಹಿರೇಮಠ, ಕರ್ನಾಟಕ ಪ್ರಾಂತರೈತ ಸಂಘದ ರಾಜ್ಯ ಮುಖಂಡ ಟಿ.ಯಶವಂತ್ ಸೇರಿದಂತೆ ಹಲವರು ಪತ್ರಿಕಾಗೋಷ್ಠಿಯಲ್ಲಿದ್ದರು.

'ನೀವು ರೈತರಿಗಾಗಿ ನೀಡುತ್ತಿರುವ ಮೂರು ಕೃಷಿ ಕಾಯ್ದೆಯ ಗಿಫ್ಟ್ ನಮಗೆ ಬೇಕಿಲ್ಲ. ಅದನ್ನು ನೀವು ಇಟ್ಟುಕೊಳ್ಳಿ' ಮೋದಿಜಿ– ಯೋಗೇಂದ್ರ ಯಾದವ್



'ನೀವು ರೈತರಿಗಾಗಿ ನೀಡುತ್ತಿರುವ ಮೂರು ಕೃಷಿ ಕಾಯ್ದೆಯ ಗಿಫ್ಟ್ ನಮಗೆ ಬೇಕಿಲ್ಲ. ಅದನ್ನು ನೀವು ಇಟ್ಟುಕೊಳ್ಳಿ' ಮೋದಿಜಿ ಎಂದು ಸ್ವರಾಜ್ ಇಂಡಿಯಾ ಪಕ್ಷದ ಅಧ್ಯಕ್ಷ ಹಾಗೂ ಕಿಸಾನ್ ಸಂಯುಕ್ತ ಮೋರ್ಚಾ ರಾಷ್ಟ್ರೀಯ ಮುಖಂಡ ಯೋಗೇಂದ್ರ ಯಾದವ್ ಹೇಳಿದರು

ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಖಾತರಿಗಾಗಿ ರಾಷ್ಟ್ರವ್ಯಾಪಿ ಅಭಿಯಾನಕ್ಕೆ ಚಾಲನೆ ನೀಡಿದ ಅವರು ನಂತರ ರೈತರೊಂದಿಗೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡುತ್ತಾ, ದೇಶದ ಜನರು ಏನೇ ಕೇಳಿದರೂ ಈ ಹಿಂದೆ ಕಾಂಗ್ರೆಸ್ ಮಾಡಿತ್ತೇ ಎಂದು ಪ್ರಧಾನಿ ಮೋದಿ ಅವರು ಪ್ರಶ್ನೆ ಮಾಡುತ್ತಾರೆ. ಕಾಂಗ್ರೆಸ್‌ನವರೇ ಎಲ್ಲವನ್ನೂ ಮಾಡಿದ್ದರೆ ನೀವು (ಮೋದಿ) ಅಧಿಕಾರಕ್ಕೆ ಬರುತ್ತಿರಲಿಲ್ಲ ಎಂದು ಛೇಡಿಸಿದರು.

ಬೆಂಬಲ ಬೆಲೆಗೆ ಕಾನೂನು ಮಾನ್ಯತೆ ಕೊಡಿ ಎಂದು ರೈತರು ಮೋದಿ ಸರ್ಕಾರವನ್ನು ಕೇಳುತ್ತಿದ್ದಾರೆ. ಈ ಹಿಂದೆ ಕಾಂಗ್ರೆಸ್ ನವರು ಕೊಟ್ಟಿದ್ದರೆ ನೀವು ಅಧಿಕಾರಕ್ಕೂ ಬರುತ್ತಿರಲಿಲ್ಲ. ಅಧಿಕಾರದಲ್ಲೂ ಇರುತ್ತಿರಲಿಲ್ಲ ಎಂದು ಯೋಗೇಂದ್ರ ಯಾದವ್ ಗುಡುಗಿದರು.

ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿ ದೆಹಲಿಯ ನಾಲ್ಕು ದಿಕ್ಕುಗಳಲ್ಲಿ ರೈತರು ಕುಳಿತು ನೂರು ದಿನಗಳು ತುಂಬಿವೆ. ಈ ಆಂದೋಲನ ಮುಂದಿನ ಪೀಳಿಗೆಗಾಗಿ ನಡೆಯುತ್ತಿದೆ. ನಮ್ಮ ಮುಂದಿನ ಪೀಳಿಗೆಯ ಮಕ್ಕಳಿಗೆ ಕೃಷಿ ಇರುತ್ತದೋ, ಇಲ್ಲವೋ ಎಂದು ಹೇಳಲಾಗದ ಸ್ಥಿತಿಯಲ್ಲಿ ನಾವು ಇದ್ದೇವೆ ಎಂದರು.

ರೂ. 5,100 ಕಡಲೆಗೆ ಬೆಂಬಲ ಬೆಲೆ ಸಿಗಬೇಕು. ಆದರೆ, ಇಲ್ಲಿ ಈಗ ರೂ. 4,800 ಕ್ಕೆ ಕಡಲೆ ಮಾರಾಟವಾಗುತ್ತಿದೆ. ಇದನ್ನು ನಾವು ಬೆಂಬಲ ಬೆಲೆ ಎಂದು ಕರೆಯಬೇಕಾ? ಮೋದಿ ಅವರೇ ನಿಜವಾದ ಬೆಂಬಲ ಬೆಲೆ ಕೊಡಿ. ಇದನ್ನು ಕಾನೂನು ಮಾಡಿ ಜಾರಿಗೊಳಿಸಿ. ಈ ಕಾನೂನು ಹಕ್ಕು ನಮಗೆ ಕೊಡಿ ಎಂದು ಆಗ್ರಹಿಸಿದರು.

2011ರಲ್ಲಿ ಗುಜರಾತ್ ಮುಖ್ಯಮಂತ್ರಿ ಆಗಿದ್ದಾಗ ನೀವು (ನರೇಂದ್ರ ಮೋದಿ) ಆಗಿನ ಪ್ರಧಾನಿ ಡಾ.ಮನಮೋಹನ್ ಸಿಂಗ್ ಗೆ ಬೆಂಬಲ ಬೆಲೆ ಕಾನೂನು ಮಾಡಿ ಎಂದು ಪತ್ರ ಬರೆದಿದ್ದೀರಿ. ಆಗ ಗುಜರಾತ್ ಮುಖ್ಯಮಂತ್ರಿ ಆಗಿದ್ದ ನೀವು ಹೇಳಿದ್ದ ಮಾತನ್ನೇ ನೀವು ಇಂದು ಕೇಳಿಕೊಳ್ಳಿ, ನಮ್ಮ ಮಾತು ನೀವೆ ಕೇಳಿ. 'ಸಿಎಂ' ನರೇಂದ್ರ ಮೋದಿ ಮಾತು 'ಪಿಎಂ' ನರೇಂದ್ರ ಮೋದಿ ಕೇಳಲಿ ಎಂದು ವ್ಯಂಗ್ಯವಾಡಿದರು.

ಎಂಎಸ್ ಪಿ ಇದೆ. ಇರುತ್ತದೆ, ಇರಲಿದೆ ಎನ್ನುವುದೇ ಆದರೆ, ಅದನ್ನು ಕಾಗದದಲ್ಲಿ ಇರುವುದು ಬೇಡ. ನಮಗೆ ಕಾನೂನು ರೂಪದಲ್ಲಿ ಕೊಡಿ. ಅದು ಬಿಟ್ಟು ಬೇರೆ ಯಾವ ಬೇಡಿಕೆಯೂ ನಿಮ್ಮ ಬಳಿ ಇಟ್ಟಿಲ್ಲ. ನೀವು ಬಾಯಲ್ಲಿ ಹೇಳುವುದನ್ನು ನಮ್ಮ ಜೇಬಿಗೆ ಬರುವಂತೆ ಮಾಡಿ ಸಾಕು ಎಂದರು.

ಮಾಜಿ ಶಾಸಕ ಬಿ.ಆರ್.ಪಾಟೀಲ ಮಾತನಾಡಿ, ಕಲಬುರ್ಗಿ ಜಿಲ್ಲೆಯ ಕುಡಗಿ ಗ್ರಾಮದಲ್ಲಿ ನೇರವಾಗಿ ರಿಲಯನ್ಸ್ ಕಂಪನಿಯವರು ಖರೀದಿ ಶುರು ಮಾಡಿದ್ದಾರೆ. ಹೀಗೆ ಪ್ರತಿ ಹಳ್ಳಿಯಲ್ಲಿ ಖಾಸಗಿ ಕಂಪನಿಗಳು ಖರೀದಿ ಮಾಡಿದರೆ, ಎಂಪಿಎಂಸಿಗೆ ಯಾರು ಬರುತ್ತಾರೆ.? ಎಂಪಿಎಂಸಿ ಮುಚ್ಚುತ್ತವೆ. ಆಗ ರೈತರು ಮಾತ್ರವಲ್ಲದೆ ಕೂಲಿ ಕಾರ್ಮಿಕರು, ಹಮಾಲಿಗಳು ಬೀದಿಗೆ ಬೀಳುತ್ತಾರೆ. ಅದೇ ರೀತಿ ರಾಜ್ಯದಲ್ಲಿ ಭೂ ಸುಧಾರಣೆ ತಿದ್ದುಪಡಿ ಕಾಯ್ದೆಯಿಂದ 108 ಎಕರೆ ಕೃಷಿ ಜಮೀನನ್ನು ಯಾರಾದರೂ ಖರೀದಿಸಬಹುದು. 108 ಎಕರೆ ಭೂಮಿ ಖರೀದಿಸುವ ಶಕ್ತಿ ಯಾವ ರೈತರಿಗೆ ಇದೆ? ಆಗ ಕೃಷಿ ಜಮೀನು ಪಾಲಾಗುವುದು ಉಳ್ಳವರು ಪಾಲು ಆಗುವುದು ಖಚಿತ ಎಂದರು.

ರಾಜ್ಯ ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಟಿ.ಎನ್.ಪ್ರಕಾಶ ಕಮ್ಮರಡಿ ಮಾತನಾಡಿ, ಈಗ ಎಂಪಿಎಂಸಿಗೆ ಒಂದು ಗೋಡೆ ನಿರ್ಮಾಣವಾಗಿದೆ. ಎಪಿಎಂಸಿ ಒಳಗೆ ಒಂದು ವ್ಯವಸ್ಥೆಯಡಿ ಖರೀದಿ ಇದೆ. ಎಂಪಿಎಸಿ ಹೊರಗೆ ಯಾರಾದರೂ ಖರೀದಿ ಮಾಡಬಹುದು. ಅಲ್ಲಿ ಯಾರು ಖರೀದಿ ಮಾಡುತ್ತಾರೆ ಎಂಬುವುದೇ ಗೊತ್ತಾಗಲ್ಲ. ಅಲ್ಲಿನ ಮೋಸ ರೈತರಿಗೂ ತಿಳಿಯುವುದಿಲ್ಲ ಎಂದು ಎಚ್ಚರಿಸಿದರು.

ಬಿಹಾರದ ದೀಪಕ್ ಲಂಬಾ, ಪಂಜಾಬ್ ನ ಸತ್ನಾಮ್ ಸಿಂಗ್, ಮಾಜಿ ಸಚಿವ ಡಾ. ಶರಣಪ್ರಕಾಶ ಪಾಟೀಲ್, ಎಚ್ ಕೆಸಿಸಿಐ ಮಾಜಿ ಅಧ್ಯಕ್ಷ ಅಮರನಾಥ ಪಾಟೀಲ, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಯು. ಬಸವರಾಜ, ಜಿಲ್ಲಾಧ್ಯಕ್ಷ ಶರಣಬಸಪ್ಪ ಮಮಶೆಟ್ಟಿ, ರೈತ ಮುಖಂಡರಾದ ಬಡಗಲಪುರ ನಾಗೇಂದ್ರ, ಚಾಮರಸ ಮಾಲಿಪಾಟೀಲ, ಎಚ್. ವಿ.ದಿವಾಕರ, ಕೆ.ನೀಲಾ, ನಾಗರತ್ನಾ, ಶೌಕತ್ ಅಲಿ ಆಲೂರ ಇದ್ದರು.

ಬಜೆಟ್ ನಲ್ಲಿ ಏನು ಇಲ್ಲ! ಅಂಕಿ ಅಂಶಗಳನ್ನು ತಿರುಗು ಮುರುಗು ಮಾಡಿದ್ದಾರೆ!!?

ಯಡಿಯೂರಪ್ಪನವರ ಬಜೆಟ್ ಲೆಕ್ಕಕ್ಕೆ ಸಾರ್ವಜನಿಕ ವಲಯದಲ್ಲಿ ಸಾಕಷ್ಟು ವಿರೋಧ ವ್ಯಕ್ತವಾಗುತ್ತಿದೆ. ಸ್ವ ಪಕ್ಷದ ನಾಯಕರು ಸೇರಿದಂತೆ ಅನೇಕರು ಅನೇಕರು ಈ ಬಾರಿಯ ಬಜೆಟ್ ನ್ನು ನಿರಾಶಾದಾಯಕ ಬಜೆಟ್ ಎಂದು ಹೇಳುತ್ತಿದ್ದಾರೆ. ಬಜೆಟ್ ಬಗ್ಗೆ ಯಾರೆಲ್ಲ ಏನು ಹೇಳಿದ್ದಾರೆ? ಯಾವ ಕ್ಷೇತ್ರವನ್ನು ನಿರ್ಲಕ್ಷ್ಯ ಮಾಡಲಾಗಿದೆ? ಯಡಿಯೂರಪ್ಪ ಲೆಕ್ಕಾಚಾರದಲ್ಲಿವ ಹುಸಿ ಭರವಸೆಗಳೆಷ್ಟು?

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು 2021–2022ರ ಸಾಲಿನ ಬಹು ನಿರೀಕ್ಷಿತ ಬಜೆಟ್ ನ್ನು ಮಂಡಿಸಿದ್ದಾರೆ. ರಾಜ್ಯ ಬಜೆಟ್ ಒಟ್ಟು ಗಾತ್ರ 2 ಲಕ್ಷದ 46 ಸಾವಿರದ 207 ಕೋಟಿ ರೂ.ಗಳು. ಆಗಿವೆ. ಬಜೆಟ್ ಕುರಿತಾಗಿ ಅನೇಕರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಬಜೆಟ್ ಕುರಿತಾಗಿ ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಪ್ರತಿಕ್ರಿಯೆ ನೀಡಿದ್ದಾರೆ. ಈ ಬಜೆಟ್‌ನಲ್ಲಿ ಏನೂ ಇಲ್ಲ. ಕಳೆದ 10 ವರ್ಷಗಳ ಬಜೆಟ್ ನೋಡಿದ್ದೇನೆ. ಅದೇ ಅಂಕಿ ಅಂಶ ತಿರುಗು ಮುರುಗು ಮಾಡಿದ್ದಾರೆ. ಅದೇ ಯೋಜನೆ, ಅದೇ ಅನುದಾನ. ಹಣಕಾಸು ಇಲಾಖೆ ಅಧಿಕಾರಿಗಳು ಮುಖ್ಯಮಂತ್ರಿಗೇ ಟೋಪಿ ಹಾಕಿದ್ದಾರೆ' ಎಂದು ಬಿಜೆಪಿಯ ಎಚ್. ವಿಶ್ವನಾಥ್, ಆಡಳಿತ ಪಕ್ಷದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'33 ಇಲಾಖೆಗಳಲ್ಲಿ ಹಣಕಾಸು, ಡಿ.ಪಿ.ಎ.ಆರ್, ಕಾನೂನು ಈ ಮೂರು ಅತಿ ಮುಖ್ಯವಾದುದು. ಆಡಳಿತಾತ್ಮಕ ವ್ಯವಸ್ಥೆ, ತೀರ್ಮಾನಗಳನ್ನು ತೆಗೆದುಕೊಳ್ಳುವ ಇಲಾಖೆಗಳು. ಹಣಕಾಸು, ಡಿ.ಪಿ.ಎ.ಆರ್ ಎರಡು ಮುಖ್ಯಮಂತ್ರಿ ಬಳಿ ಇದೆ' 1978ರಲ್ಲಿ ನಾನು ಸದನದೊಳಗೆ ಪ್ರವೇಶ ಮಾಡಿದೆ. ಆಗಿನಿಂದ ಬಜೆಟ್ ಗಮನಿಸಿದ್ದೇನೆ, ಬಜೆಟ್‌ಗೆ ಸಾಕಷ್ಟು ಮಹತ್ವವಿತ್ತು. ಬಜೆಟ್ ಮಂಡಿಸಿದ ಮೇಲೆ ಅದರ ಮೇಲೆ ವ್ಯಾಪಕ ಚರ್ಚೆ ನಡೆಯುತ್ತಿತ್ತು. ಹಿಂದಿನ ಬಜೆಟ್ ಗಾತ್ರ ಎಷ್ಟು, ಎಷ್ಟು ಖರ್ಚು ಆಗಿದೆ. ಇಲಾಖಾವಾರು ಚರ್ಚೆಯ ಬಳಿಕ ಸಂಬಂಧಪಟ್ಟ ಸಚಿವರು ಉತ್ತರ ಕೊಡುತ್ತಿದ್ದರು. ಆದರೆ ಈಗ ಏನಾಗಿದೆ' ಎಂದು ಪ್ರಶ್ನಿಸಿದ್ದಾರೆ?

ಬಿಜೆಪಿ ಸಂಸದ ನಾರಾಯಣ ಸ್ವಾಮಿ ಬಜೆಟ್ ಕುರಿತು ಪ್ರತಿಕ್ರೀಯೆಯನ್ನು ನೀಡಿದ್ದಾರೆ. ರಾಜ್ಯ ಬಜೆಟ್‌ನಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ನಿಗಮಗಳಿಗೆ ಕಡಿಮೆ ಅನುದಾನವನ್ನು ಹಂಚಿಕೆ ಮಾಡಲಾಗಿದೆ ಎಂದು ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. 'ಮೇಲ್ವರ್ಗದ ನಿಗಮಗಳಿಗೆ ನೀಡಿದ ಅನುದಾನದ ಬಗ್ಗೆ ಆಕ್ಷೇಪವಿಲ್ಲ. ಆದರೆ, ತುಳಿತಕ್ಕೆ ಒಳಗಾದ ಹಾಗೂ ಆರ್ಥಿಕವಾಗಿ ಹಿಂದುಳಿದ ಸಮುದಾಯಗಳಿಗೆ ಹೆಚ್ಚು ಆದ್ಯತೆ ಸಿಗಬೇಕು. ಇದರಲ್ಲಿ ವ್ಯತ್ಯಾಸ ಕಾಣಿಸುತ್ತಿದೆ. ಹಾಗಾಗಿ ಬಜೆಟ್‌ಗೆ ಇದೊಂದು ಕಪ್ಪುಚುಕ್ಕೆಯಾಗಿ ಕಾಣಿಸುತ್ತಿದೆ ಎಂದು ಆರೋಪಿಸಿದ್ದಾರೆ.

ಕೃಷ್ಣ ಬೀ ಸ್ಕೀಂ ಹೋರಾಟ ಸಮಿತಿ ಅಧ್ಯಕ್ಷ ಕೂಡ್ಲೆಪ್ಪ ಗುಡಿಮನಿ ಪ್ರತಿಕ್ರೀಯೆ ನೀಡಿದ್ದು, ಕೃಷ್ಣಾ ಭೀ ಸ್ಕೀಂ ಯೋಜನೆಗೆ 5600 ಕೋಟಿ ಹಣ ಮೀಸಲಿಟ್ಟದ್ದು ಸ್ವಾಗತಾರ್ಹ, ಇದು ನಮ್ಮ ಹೋರಾಟಕ್ಕೆ ಸಿಕ್ಕ ಗೆಲುವು, ಆದರೆ ಇದು ಕಾರ್ಯರೂಪಕ್ಕೆ ಬರಬೇಕು ಎಂದು ಅವರು ಆಗ್ರಹಿಸಿದ್ದಾರೆ

ರಾಜ್ಯ ಬಿಜೆಪಿ ಸರಕಾರವು ಶಿಕ್ಷಣ ಕ್ಷೇತ್ರವನ್ನು ಸಂಪೂರ್ಣವಾಗಿ ಕಡೆಗಣಿಸಿದೆ, ಕೇವಲ ಶೆ 11 ರಷ್ಟು ಹಣವನ್ನು ಶಿಕ್ಷಣಕ್ಕಾಗಿ ಕೊಡಲಾಗಿದೆ. ಕಳೆದ

ಬಜೆಟ್ ಎಂಬ ಕಣ್ಕಟ್ಟು!

ಕೆ.ಎಸ್ ವಿಮಲಾ

ಬಡ್ಡಿ ರಹಿತ ಹೊಸ ಸಾಲ ಮತ್ತು ಅದಕ್ಕೆ ಪೂರಕವಾಗಿ ಉತ್ಪಾದನೆ, ಮಾರುಕಟ್ಟೆ ಸೌಲಭ್ಯ ನೀಡುವ ಅತ್ಯಗತ್ಯವನ್ನು ಮುಖ್ಯ ಮಂತ್ರಿಗಳು ಪರಿಗಣಿಸಿಲ್ಲ. ಉದ್ಯೋಗದ ಕ್ಷೇತ್ರ ಸಂಪೂರ್ಣವಾಗಿ ಕುಸಿದಿದ್ದು ಅದರ ಬಗ್ಗೆ ಚಕಾರವಿಲ್ಲ. ನಗರ ಉದ್ಯೋಗ ಖಾತ್ರಿ ಯೋಜನೆಯ ಮೂಲಕ ಹದಗೆಟ್ಟ ನಗರವಾಸಿಗಳ ಬದುಕಿಗೆ ಸ್ವಲ್ಪವಾದರೂ ನೆರವು ನೀಡಬಹುದಾಗಿದ್ದನ್ನು ರಾಜ್ಯದ ಬಜೆಟ್ ಗಮನಕ್ಕೆ ತೆಗೆದುಕೊಂಡಿಲ್ಲ.

ಮಹಿಳಾ ದಿನದ ಹೆಸರಿನಲ್ಲಿ ಬಜೆಟ್ ನ ಮೊದಲ ಸಾಲುಗಳು ಮಹಿಳಾ ವಿಭಾಗಕ್ಕೆ ಬಂದಿದೆ ಎಂಬುದು ಬಿಟ್ಟರೆ ಖಚಿತವಾಗಿ ಸಮತೆಯ ತಲೆಮಾರು ಕಟ್ಟುವ ಕನಸು ಎಲ್ಲಿಯೂ ಹುಟ್ಟಲಿಲ್ಲ. ಒಟ್ಟು ಬಜೆಟ್ ನ ಕೇವಲ 1% ಹಣಕೊಟ್ಟು ಮಹಿಳೆಯರ ಅಭಿವೃದ್ಧಿ ಮಾಡುತ್ತೇವೆ ಎನ್ನುವ ಕಣ್ಕಟ್ಟು ಇದು.

ಕೊವಿಡ್ ನಿಂದ ಕಂಗೆಟ್ಟ ಕಾಲದಲ್ಲಿಯೂ ದಿಟ್ಟತನದಿಂದ ಎದುರಿಸಿದ ಸ್ವಸಹಾಯ ಸಂಘದ ಮಹಿಳೆಯರಿಗೆ ಭರವಸೆ ನೀಡುವ ಅಕ್ಷರಗಳೂ ಕಾಣುತ್ತಿಲ್ಲ. ಅವರು ಕೊವಿಡ್ ಕಾರಣದಿಂದ ಪ್ರಾರಂಭವಾದ ಅವೈಜ್ಞಾನಿಕ ಆನ್ ಲೈನ್ ತರಗತಿಗಳ ಮಕ್ಕಳ ಶಿಕ್ಷಣಕ್ಕಾಗಿ ಸರಕಾರ ನಡೆಸುತ್ತಿರುವ ಪಕ್ಷ ಪ್ರತಿಪಾದಿಸುವ ಸಿದ್ಧಾಂತದ್ದ ಅತ್ಯಂತ 'ಪವಿತ್ರ' ಕುರುಹು ತಾಳಿಯನ್ನು ಮಾರಾಟ ಮಾಡಿ ಆನ್ ಲೈನ್ ಕ್ಲಾಸ್ ಗಳಿಗೆ ವ್ಯವಸ್ಥೆ ಮಾಡಿದ್ದವರಿಗೆ ಮತ್ತೊಮ್ಮೆ ಮೂಗಿಗೆ ತುಪ್ಪ ಸವರಿದ ಹಾಗೆ ಮಾರುಕಟ್ಟೆ ಸೌಲಭ್ಯದ ಪ್ರಸ್ತಾಪ ಮಾತ್ರ ಇದೆ.

ಉತ್ಪಾದನೆಗೆ ಬೇಕಾದ ಬಂಡವಾಳ ನೀಡಿಕೆಗೆ ವ್ಯವಸ್ಥೆ ಮಾಡುವ ಅಗತ್ಯವಿತ್ತು. ಕೊವಿಡ್ ಕಾರಣದಿಂದ ದಿಕ್ಕೆಟ್ಟ ವಿಭಾಗದ ಸಾಲಮನ್ನಾ ಮತ್ತು ಬಡ್ಡಿ ರಹಿತ ಹೊಸ ಸಾಲ,ಮೈಕ್ರೋ ಫೈನಾನ್ಸ್ ಕಿರುಕುಳದಿಂದ ಮುಕ್ತಿಕೊಡುವ ಬದಲು ಬಾಹ್ಯೋಪಚಾರದ ಮಾತುಗಳು ಹೊಟ್ಟೆ ತುಂಬಿಸಲಾರದು. ಆ ವಿಭಾಗಕ್ಕೆ ಬೇಕಿದ್ದುದು ಹಿಂದಿನ ಸಾಲದ ಮನ್ನಾ. ಈ ಬಗ್ಗೆ ಸ್ವ ಸಹಾಯ ಸಂಘಗಳ ಮಹಿಳೆಯರ ಮಧ್ಯೆ ಕೆಲಸ ಮಾಡುವ ಜನವಾದಿ ಮಹಿಳಾ ಸಂಘಟನೆ ಕೊವಿಡ್ ಲಾಕ್ ಡೌನ್ ಅವಧಿಯಲ್ಲೇ ಸರಕಾರಕ್ಕೆ ಒತ್ತಾಯಿಸಿ ಮನವಿ ಸಲ್ಲಿಸಿತ್ತು.

ಬಡ್ಡಿ ರಹಿತ ಹೊಸ ಸಾಲ ಮತ್ತು ಅದಕ್ಕೆ ಪೂರಕವಾಗಿ ಉತ್ಪಾದನೆ, ಮಾರುಕಟ್ಟೆ ಸೌಲಭ್ಯ ನೀಡುವ ಅತ್ಯಗತ್ಯವನ್ನು ಮುಖ್ಯ ಮಂತ್ರಿಗಳು ಪರಿಗಣಿಸಿಲ್ಲ. ಉದ್ಯೋಗದ ಕ್ಷೇತ್ರ ಸಂಪೂರ್ಣವಾಗಿ ಕುಸಿದಿದ್ದು ಅದರ ಬಗ್ಗೆ ಚಕಾರವಿಲ್ಲ. ನಗರ ಉದ್ಯೋಗ ಖಾತ್ರಿ ಯೋಜನೆಯ ಮೂಲಕ ಹದಗೆಟ್ಟ ನಗರವಾಸಿಗಳ ಬದುಕಿಗೆ ಸ್ವಲ್ಪವಾದರೂ ನೆರವು ನೀಡಬಹುದಾಗಿದ್ದನ್ನು ರಾಜ್ಯದ ಬಜೆಟ್ ಗಮನಕ್ಕೆ ತೆಗೆದುಕೊಂಡಿಲ್ಲ.

ಕಳೆದ ವರ್ಷ ಘೋಷಿಸಿದ್ದ ಅಸಂಘಟಿತ ವಲಯದ ಗಾರ್ಮೆಂಟ್ ಕಾರ್ಮಿಕರ ಬಸ್ ಪಾಸ್ ಮತ್ತೆ ಪುನರುಚ್ಚರಿಸಿ ಹೊಸತೇನೋ ಕೊಟ್ಟಂತೆ ಮಾಡಲಾಗಿದೆ. ಕೇಂದ್ರದಿಂದ ಬರಬೇಕಾದ ನ್ಯಾಯಯುತ ಪಾಲು ಕೇಳಲಾರದೆ ಅತಿಶಯ ಸಾಲದ ಹೊರೆಯನ್ನು ಹೇರುವ ಬಜೆಟ್ ಇದಾಗಿದೆ. ಜಾತಿ ಆಧಾರಿತ ನಿಗಮಗಳ ಸರ್ವತೋಮುಖ ಅಭಿವೃದ್ಧಿಗೆ ಕೋಟ್ಯಾಂತರ ರೂಪಾಯಿ ನೀಡಿ ಅತೃಪ್ತ ಆತ್ಮಗಳನ್ನು ತೃಪ್ತಿ ಪಡಿಸುವ ಪ್ರಯತ್ನ ಮಾಡಲಾಗಿದೆ.

ಮಹಿಳಾ ಸುರಕ್ಷೆ ಎಂದರೆ ಸಿ.ಸಿ ಕ್ಯಾಮರಾಗಳು ಎಂಬ ಕಲ್ಪನೆಯೇ ಅಸಮಂಜಸವಾಗಿದ್ದರೂ ಅದನ್ನೇ ಮತ್ತೆ ಹೇಳುವ ಮೂಲಕ ಮಹಿಳಾ ಸುರಕ್ಷತೆ ಯನ್ನು ಜಾಳಾಗಿಸಲಾಗಿದೆ. ಮುಂಚೂಣಿ ಸೈನಿಕರೆಂದು ಕರೆದು ಹಾಡಿ ಹೊಗಳಿ ಅಟ್ಟಕ್ಕೇರಿಸಿದ ಅಂಗನವಾಡಿ ಆಶಾ ಬಿಸಿಯೂಟದ ನೌಕರರಿಗೆ ಏನೊಂದೂ ಕೊಟ್ಟ ಮಾಹಿತಿ ಪ್ರಸ್ತಾಪಿತ ಬಜೆಟ್‌ನಲ್ಲಿ ಕಾಣುತ್ತಿಲ್ಲ.

ಕಿವಿಗೆ ಹಿತ, ಕಣ್ಣಿಗೆ ತಂಪು ಜೇಬು ಖಾಲಿ ಎಂಬಂತಿದೆ ಈ ಬಜೆಟ್: ರಾಜ್ಯಾದ್ಯಂತ 60 ಸಾವಿರ ಮಹಿಳೆಯರಿಗೆ ಉದ್ಯೋಗವೆಂದು ಹೇಳಲಾಗಿದೆ. ಆದರೆ ಉದ್ಯೋಗದ ಅವಕಾಶ ಸೃಷ್ಟಿಸುವ ಯಾವ ಪ್ರಸ್ತಾಪಗಳಿಲ್ಲ.

ಎ.ಪಿ.ಎಂ.ಸಿಯನ್ನು ಮುಚ್ಚುವ ಎಲ್ಲ ಅವಕಾಶವಿರುವ ತಿದ್ದುಪಡಿ ತಂದು ಅಲ್ಲಿ ಮಹಿಳೆಯರಿಗೆ ಅವಕಾಶ ಮಾಡುವ ಪ್ರಸ್ತಾಪ ವೇ ಒಂದು ಅಪಹಾಸ್ಯವಾಗಿದೆ.

ಇನ್ನು ಕೂಸು ಹುಟ್ಟುವ ಮೊದಲೇ ಕುಲಾವಿ ಹೊಲೆಸಿಟ್ಟ ಹಾಗೆ ರಾಮ ಮಂದಿರ ಕಟ್ಟುವ ಮೊದಲೇ ಅಲ್ಲಿ ಯಾತ್ರಿ ನಿವಾಸ ನಿರ್ಮಾಣಕ್ಕೆ ಹಣ ಮೀಸಲಿಟ್ಟ ಸಂಗತಿಯನ್ನಂತೂ ಒಪ್ಪುವುದಾದರೂ ಹೇಗೆ? ಕೊವಿಡ್ ಕಾಲದಲ್ಲಿ ಲಾಕ್ ಡೌನ್ ಅವಧಿಯಲ್ಲಿ ಕೆಲಸ ಕಳೆದುಕೊಂಡ ಮನೆಗೆಲಸದ ಮಹಿಳೆಯರಲ್ಲಿ ಬಹುತೇಕ ಜನರಿಗೆ ಮರಳಿ ಕೆಲಾ ಸಿಕ್ಕಿಲ್ಲ. ಯಾಕೆಂದರೆ ಉದ್ಯೋಗದಾತರಿಗೇ ಅನೇಕರಿಗೆ ಸರಿಯಾದ ಉದ್ಯೋಗವಿಲ್ಲ. ಸಣ್ಣ ಪುಟ್ಟ ಆದಾಯದಲ್ಲಿ ಸಾಲ ಸೋಲ ಮಾಡಿ ಮನೆ ಕಟ್ಟಿ ಬಾಡಿಗೆ ಕೊಟ್ಟವರ ಮನೆಗಳು ಬಾಡಿಗೆದಾರರಿಲ್ಲದೇ ಖಾಲಿ ಬಿದ್ದಿವೆ.

ಅಂತವರು ಮನೆಗೆಲಸಕ್ಕೆಂದು ಸಹಾಯಕರನ್ನು ನೇಮಿಸಿಕೊಳ್ಳುವ ಮಾತೇ ಇಲ್ಲ. ಪಿ.ಜಿ.ಗಳು ಖಾಲಿಯಾಗಿವೆ. ಅಕಸ್ಮಾತ್ ಹಳೆಯ ಕೆಲಸವೇ ಸಿಕ್ಕರೂ ಮೊದಲಿಗಿಂತ ವೇತನ ಕಡಿಮೆ. ಅಂಥಹ ಮನೆಗೆಲಸದ ಹೆಣ್ಣುಮಕ್ಕಳಿಗೆ ಕನಿಷ್ಠ ಜೀವನ ನಿರ್ವಹಣೆಗೆ ಏನಾದರೂ ಮೀಸಲಿಡುವ ಬದಲು ಗುಡಿ ಕಟ್ಟುವ ಮೊದಲೇ ಯಾತ್ರಿ ನಿವಾಸವಂತೆ. ಜೊತೆಗೇ ರಾಮ ಮಂದಿರದ ಹೆಸರಿನಲ್ಲಿ ಮನೆ ಮನೆ ತಿರುಗಿ ಹಣ ಸಂಗ್ರಹ ಮಾಡುತ್ತಿರುವವರೇ ಮಾಧ್ಯಮಗಳಲ್ಲಿ ಹೇಳಿರುವಂತೆ ಸರಿ ಸುಮಾರು ಎರಡೂವರೆ ಸಾವಿರ ಕೋಟಿ ಹಣ ಸಂಗ್ರಹ ವಾಗಲಿದೆಯಂತೆ.

ಅಪೌಷ್ಟಿಕತೆ ರಕ್ತ ಹೀನತೆಯಿಂದ ಬಳಲುವ ಮಹಿಳೆಯರು ಮತ್ತು ಮಕ್ಕಳಿಗೆ ಹೆಚ್ಚು ಗಮನ ನೀಡದೇ ಭಾರತ ಸರಕಾರ ಹಾಕಿ ಕೊಟ್ಟ ಮೇಲ್ಪಂಕ್ತಿಯನ್ನೇ ಅನುಸರಿಸಿ ರಾಜ್ಯದ ಮುಖ್ಯಮಂತ್ರಿ ಗಳು ಅವರು ಮಾಡಿದ ಆಳವಾದ ಗಾಯದ ಮೇಲೆ ಅಳಿಸಲಾಗದ ಬರೆ ಎಳೆದಿದ್ದಾರೆ. ಇದೊಂದು ನಿರಾಶಾದಾಯಕ, ಸಾಲದಹೊರೆ ಹೆಚ್ಚಿಸಿರುವ ಬಜೆಟ್ ಎಂದು ಸ್ಪಷ್ಟವಾಗಿದೆ.

ಶಿಕ್ಷಣ ಕ್ಷೇತ್ರದ ನಿರ್ಲಕ್ಷ್ಯ, ಹೊಸತನವಿಲ್ಲದ ಬಜೆಟ್

ಬಿ. ಶ್ರೀಪಾದ ಭಟ್

2021-22ರ ಬಜೆಟ್ ವೆಚ್ಚ : 2.46 ಲಕ್ಷ ಕೋಟಿ. ಅದರಲ್ಲಿ ಶಿಕ್ಷಣಕ್ಕೆ 29,688 ಕೋಟಿ (ಶೇ. 11%) ಕೊಟ್ಟಿದ್ದಾರೆ. ಕಳೆದ ಬಾರಿಯ ಬಜೆಟ್ ವೆಚ್ಚ : 2.37 ಲಕ್ಷ ಕೋಟಿ ಕಳೆದ ಬಾರಿ ಶಿಕ್ಷಣಕ್ಕೆ 28,967 ಕೋಟಿ (ಶೇ. 12%) ಕೊಟ್ಟಿದ್ದರು.

ಕಳೆದ ಐದು ವರ್ಷಗಳಿಂದ ಶಿಕ್ಷಣಕ್ಕೆ ಕೇವಲ 28 ಕೋಟಿ ಯಿಂದ 29 ಕೋಟಿ ಆಸು ಪಾಸು ಹಂಚಿಕೆ ಮಾಡುತ್ತಿದ್ದಾರೆ. ಈ ಬಾರಿ ಮೀಸಲಿಟ್ಟ 29688 ಕೋಟಿ ಹಣ ಅಲ್ಲಿನ ಶಿಕ್ಷಕರು, ಇತರ ಸಿಬ್ಬಂದಿಗಳ ವೇತನ ಮತ್ತು ದೈನಂದಿನ ವೆಚ್ಚಕ್ಕೆ ಸಾಕಾಗುತ್ತದೆ.

ಬದಲಿಗೆ ಶಿಕ್ಷಣಕ್ಕೆ ಕನಿಷ್ಠ 35,000 ಕೋಟಿ ಮೀಸಲಿಡಬೇಕಾಗುತ್ತದೆ. ಶಾಲೆಯ ಮೂಲಭೂತ ಸೌಕರ್ಯವನ್ನು ಅಭಿವೃದ್ಧಿಗಾಗಿ ಮತ್ತು ನಿರ್ವಹಣ ವೆಚ್ಚವಾಗಿ ಕಿರಿಯ ಪ್ರಾಥಮಿಕ ಶಾಲೆಗೆ ವಾರ್ಷಿಕ 50,000 ಮತ್ತು ಹಿರಿಯ ಪ್ರಾಥಮಿಕ ಶಾಲೆಗೆ ವಾರ್ಷಿಕ 1 ಲಕ್ಷ ಮೊತ್ತವನ್ನು ಆಯವ್ಯಯದಲ್ಲಿ ಮೀಸಲಿಡಬೇಕಾಗುತ್ತದೆ. ಪ್ರತಿ ಶಾಲೆಗೂ ಕಲಿಕ ಬೋಧನ ಉಪಕರಣಗಳಿಗಾಗಿ 10,000 ರೂಗಳನ್ನು ನೀಡಬೇಕು. ಆದರೆ ಸರಕಾರವು ಇದ್ಯಾವುದನ್ನೂ ಪರಿಗಣಿಸದಿರುವುದು ನಿಜಕ್ಕೂ ದುರಂತ. ಕೋವಿಡ್ ಕಾಯಿಲೆಯಿಂದ ಶಿಕ್ಷಣ ಮತ್ತು ಆರೋಗ್ಯ ವಲಯಗಳಲ್ಲಿ ತೀವ್ರವಾದ ದುಷ್ಪರಿಣಾಮ ಉಂಟಾಗಿತ್ತು. ಈ ಕ್ಷೇತ್ರಗಳಿಗೆ ವಿಶೇಷ ಅನುದಾನ ಬಿಡುಗಡೆಗೊಳಿಸುವ ನಿರೀಕ್ಷೆಗಳು ಹುಸಿಯಾಗಿವೆ. ಶಿಕ್ಷಣ ಕ್ಷೇತ್ರವನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ.

ಸ್ಥೂಲವಾಗಿ ಕಳೆದ ಕೆಲವು ವರ್ಷಗಳ ಬಜೆಟ್ ಅನ್ನು ಅವಲೋಕಿಸಿದಾಗ ಶಿಕ್ಷಣ ವಲಯದ ಕುರಿತಾಗಿ ಸರ್ಕಾರಕ್ಕಿರುವ ಅಸಡ್ಡೆ, ನಿರ್ಲಕ್ಷ ನಮಗೆ ಸ್ಪಷ್ಟವಾಗುತ್ತದೆ. ಎರಡು ವರ್ಷಗಳ ಹಿಂದೆ ಬಜೆಟ್ ನಲ್ಲಿ ಮೂಲಭೂತ ಸೌಕರ್ಯಕ್ಕಾಗಿ 1200 ಕೋಟಿ ಮೀಸಲಿಟ್ಟಿದ್ದರು. ಅದರಲ್ಲಿ ಎಷ್ಟು ಮೊತ್ತವನ್ನು ವಿನಿಯೋಗಿಸಿದ್ದಾರೆ ಎಂದು ನಿಖರವಾದ ಮಾಹಿತಿಯಿಲ್ಲ. ಮತ್ತೆ ಈ ಬಾರಿ ಮೂಲಭೂತ ಸೌಕರ್ಯಕ್ಕಾಗಿ 150 ಕೋಟಿ ಕೊಡಲಾಗಿದೆ. ಶೌಚಾಲಯಗಳ ಅಭಿವೃದ್ಧಿಗೆ 100 ಕೋಟಿ ಕೊಟ್ಟಿದ್ದಾರೆ. ಅಂದರೆ ಎರಡು ವರ್ಷಗಳ ಹಿಂದಿನ ಬಜೆಟ್ ಗಿಂತಲೂ 500 ಕೋಟಿ ಕಡಿಮೆ.

ಅಲ್ಲದೆ ಕಳೆದ ಎರಡು ವರ್ಷಗಳಲ್ಲಿ ಯಾವುದೆ ಅಭಿವೃದ್ಧಿ ಗೋಚರಿಸಿಲ್ಲ. ಹೀಗಾಗಿ ಈ ಬಾರಿಯೂ ಮೂಲಭೂತ ಸೌಕರ್ಯವು ಉತ್ತಮಗೊಳ್ಳುತ್ತದೆ ಎನ್ನುವ ನಿರೀಕ್ಷೆ ಇಲ್ಲ. ಇದು ಕೇವಲ ಅಂಕಿ ಅಂಶಗಳ ಮೇಲಾಟವಷ್ಟೆ.

ಶಿಕ್ಷಕರ ನೇಮಕಾತಿ ಕುರಿತು ಯಾವುದೇ ಪ್ರಸ್ತಾಪವಿಲ್ಲ. ಅದಕ್ಕಾಗಿ ಪ್ರತ್ಯೇಕ ಹಣವೂ ಸಹ ಹಂಚಿಕೆಯಾಗಿಲ್ಲ.

ಕಳೆದ ಬಾರಿ 1000 ಪಬ್ಲಿಕ್ ಶಾಲೆಗಳನ್ನು ಸ್ಥಾಪಿಸುವುದಾಗಿ ಹೇಳಿದ್ದರು. ಆದರೆ ಅದರ ವಾಸ್ತವ ಸ್ಥಿತಿಗತಿಗಳ ಕುರಿತು ಯಾವುದೇ ಮಾಹಿತಿಯಿಲ್ಲ. ಈ ಬಾರಿ ಕೇವಲ 50 ಪಬ್ಲಿಕ್ ಶಾಲೆಗಳ ಅಭಿವೃದ್ಧಿಗಾಗಿ 100 ಕೋಟಿ ಅನುದಾನ ಪ್ರಸ್ತಾಪ ಮಾಡಿದ್ದಾರೆ. ಆದರೆ ಕಳೆದ ಬಾರಿ ಹೇಳಿದ 1000 ಪಬ್ಲಿಕ್ ಶಾಲೆಗಳ ಕತೆ ಏನು?

ಇಲ್ಲಿ ನಿರಾಸೆ ಮೂಡಿಸುವ ವಿಷಯವೆಂದರೆ ಕಲಿಕೆಯರಿಮೆಗೆ (pedagogy) ಯಾವುದೆ ಮಹತ್ವವನ್ನು ಕೊಟ್ಟಿಲ್ಲ. ಪ್ರಾಥಮಿಕ, ಪ್ರೌಢ ಶಿಕ್ಷಣದ ಕಲಿಕೆಯ ಗುಣಮಟ್ಟ ಉತ್ತಮಪಡಿಸಲು ಆಯವ್ಯಯದಲ್ಲಿ ಹೇಳಲಾದ ಅಂಶಗಳಲ್ಲಿ ಯಾವುದೆ ಹೊಸತನವಿಲ್ಲ.

ಬಾರಿಗೆ ಹೋಲಿಕೆ ಮಾಡಿದರೆ ಈ ಬಾರಿಯ ಬಜೆಟ್ ನಲ್ಲಿ 70 ಕೋಟಿ ರೂ ಹಣವನ್ನು ಕಡಿತ ಮಾಡಲಾಗಿದೆ ಎಂದು ಎಸ್. ಎಫ್. ಐ ರಾಜ್ಯ ಕಾರ್ಯದರ್ಶಿ ವಾಸುದೇವರೆಡ್ಡಿ ಆರೋಪವನ್ನು ಮಾಡಿದ್ದಾರೆ.

ಡಿವೈಎಫೈ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಬಜೆಟ್ ಕುರಿತಾಗಿ ಪ್ರತಿಕ್ರೀಯೆ ನೀಡಿದ್ದಾರೆ, ಈ ಬಜೆಟ್ ನಲ್ಲಿ ಸಕಾರಾತ್ಮಕ ಅಂಶಗಳಿಲ್ಲ. ಬಲಿಷ್ಠರನ್ನು ಓಲೈಸುವ ಬಜೆಟ್ ಇದಾಗಿದೆ ಎಂದು ಮುನೀರ್ ಆರೋಪ ಮಾಡಿದ್ದಾರೆ.

ರೈತ ನಾಯಕ ಪಿ.ಆರ್. ಸೂರ್ಯನಾರಾಯಣ ಪ್ರತಿಕ್ರೀಯೆ ನೀಡಿದ್ದು, ಸಾಲ ಮಾಡಿ ಬಜೆಟ್ ಮಂಡಿಸಲಾಗಿದೆ. ಕೃಷಿ ಕ್ಷೇತ್ರವನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಲಾಗಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಮುಖಂಡ ಪಿ.ಆರ್. ಸೂರ್ಯನಾರಾಯಣ್ ಆರೋಪಿಸಿದ್ದಾರೆ.

ಒಟ್ಟಾರೆ ರಾಜ್ಯ ಬಜೆಟ್ ನಲ್ಲಿ ಶಿಕ್ಷಣ, ಆರೋಗ್ಯ, ಕೃಷಿ ಗೆ ಹೆಚ್ಚಿನ ಆದ್ಯತೆಯನ್ನು ನೀಡಬೇಕಾಗಿತ್ತು, ಆದರೆ ಸರಕಾರ ಈ ವಿಭಾಗಗಳಿಗೆ ಹೆಚ್ಚಿನ ಆದ್ಯತೆ ನೀಡಿಲ್ಲ ಎಂಬುದು ಇವರೆಲ್ಲರ ಅಭಿಪ್ರಾಯದಿಂದ ಗೊತ್ತಾಗ್ತಾ ಇದೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ, ಹಿಂದುಳಿದವರು, ಮಹಿಳೆಯರಿಗೆ, ವಿಕಲಚೇತನರಿಗೆ ಹೆಚ್ಚಿನ ಆದ್ಯತೆಯನ್ನು ನೀಡಿಲ್ಲ. ಜನತೆಯ ಮೇಲೆ ಹೊರೆ ಹೇರಿದ ಬಜೆಟ್ ಇದಾಗಿದೆ ಎಂಬುದು ಸಾರ್ವಜನಿಕರ ಅಭಿಪ್ರಾಯವಾಗಿದೆ.

ಸದಾಶಿವ ಆಯೋಗ ವರದಿ ಜಾರಿಗಾಗಿ ಮಾದಿಗರ ಬೃಹತ್ 'ಚೈತನ್ಯ ರಥಯಾತ್ರೆ'

ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗ ಸಲ್ಲಿಸಿರುವ 'ಒಳ ಮೀಸಲಾತಿ ಕುರಿತ ವರದಿನ್ನು ಜಾರಿ ಮಾಡಬೇಕೆಂದು ಆಗ್ರಹಿಸಿ ನ್ಯಾಯಮೂರ್ತಿ ಸದಾಶಿವ ವರದಿ ಜಾರಿ ಹೋರಾಟ ಸಮಿತಿಯಿಂದ "ಮಾದಿಗ ಚೈತನ್ಯ ರಥಯಾತ್ರೆ" ಮೂಲಕ ನಗರದಲ್ಲಿ ಸಾವಿರಾರು ಜನರು ಬೃಹತ್ ಪ್ರತಿಭಟನಾ ಧರಣಿ ಹಮ್ಮಿಕೊಂಡಿದ್ದರು.

ಬೆಂಗಳೂರು ರೈಲ್ವೆ ನಿಲ್ದಾಣದಿಂದ ಆನಂದರಾವ್ ಮೇಲ್ಸೇತುವೆ ಮೂಲಕ ಫ್ರೀಡಂ ಪಾರ್ಕ್‌ವರೆಗೆ ಬೃಹತ್ ಮೆರವಣಿಗೆ ಹೊರಟ ಕಾರ್ಯಕರ್ತರು ವರದಿಯನ್ನು ಕೂಡಲೇ ಜಾರಿಗೊಳಿಸಬೇಕೆಂದು ಆಕ್ರೋಶ ವ್ಯಕ್ತಪಡಿಸಿದರು.

ಡಾ.ಬಿ.ಆರ್.ಅಂಬೇಡ್ಕರ್‌ರವರು ಸಂವಿಧಾನ ಮುನ್ನುಡಿಯಲ್ಲಿ ತಿಳಿಸಿರುವಂತೆ ಎಲ್ಲ ಜಾತಿ-ಜನಾಂಗ, ಧರ್ಮದವರಿಗೆ ಸಾಮಾಜಿಕವಾಗಿ, ಆರ್ಥಿಕವಾಗಿ, ಮತ್ತು ರಾಜಕೀಯವಾಗಿ ಸಮಾನವಾದ ನ್ಯಾಯ ಸಿಗಬೇಕೆಂದು ಹೇಳಿದ್ದಾರೆ. ಆದರೆ ಸಂವಿಧಾನ ಜಾರಿಯಾಗಿ ಹಲವು ದಶಕಗಳು ಕಳೆದರೂ ಸಹ ಮಾದಿಗರು ಮತ್ತು ಸಂಬಂಧಿಸಿದ ಜಾತಿಯವರಿಗೆ ಶಿಕ್ಷಣದಲ್ಲಿ, ಸರ್ಕಾರಿ ಉದ್ಯೋಗದಲ್ಲಿ, ಭೂಮಿ ಮತ್ತು ಸಂಪತ್ತಿನಲ್ಲಿ ಸಮಾನವಾದ ಅವಕಾಶ ಸಿಗದ ಪರಿಣಾಮ ಅನ್ಯಾಯಕ್ಕೆ ಒಳಗಾಗಿದ್ದಾರೆ ಎಂದು ಆಗ್ರಹಿಸಿದರು.

ಸ್ವಾತಂತ್ರ ಉದ್ಯಾನವನದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾದಿಗ ಸಮಾಜದ ಮುಖಂಡರು "ಸಂವಿಧಾನದ ಆಶಯಗಳು ಸಮರ್ಪಕವಾಗಿ ಜಾರಿಯಾಗಬೇಕಾದರೆ ಒಳ ಮೀಸಲಾತಿ ಕುರಿತು ಸದಾಶಿವ ಆಯೋಗ ನೀಡಿರುವ ವರದಿಯನ್ನು ಜಾರಿಗೊಳಿಸಬೇಕು. ಈಗಾಗಲೇ ತಮಿಳುನಾಡಿನಲ್ಲಿಯೂ ಒಳ ಮೀಸಲಾತಿ ಜಾರಿಗೊಳಿಸಲಾಗಿದೆ. ಕರ್ನಾಟಕದಲ್ಲಿ ಜಾರಿ ಮಾಡಬೇಕು" ಎಂದು ಸಭೆಯಲ್ಲಿ ಹೇಳಿದರು.

'ಮಾದಿಗ ಸಮಾಜವು ತುಳಿತಕ್ಕೆ ಒಳಗಾಗಿದ್ದು, ನಮ್ಮ ಹಕ್ಕನ್ನು ನಾವು ಕೇಳಲು ಬಂದಿದ್ದೇವೆ. ಆದರೆ ಸರಕಾರವು ವರದಿ ಜಾರಿಯ ಮಲತಾಯಿ ಧೋರಣೆ ಅನುಸರಿಸುತ್ತಿವೆ ಎಂದು ಖಂಡಿಸಿದರು.

ಮಾದಿಗ ಸಮಾಜದ ಆರು ಜನ ಶಾಸಕರು ಆಯ್ಕೆಯಾಗಿ ಬಂದಿದ್ದರೂ ನಮಗೆ ನ್ಯಾಯ ಕೊಡಿಸಲು ಸಾಧ್ಯವಾಗಿಲ್ಲ.

ಕರ್ನಾಟಕದಲ್ಲಿ 96.60 ಲಕ್ಷದಷ್ಟು ಸಮುದಾಯದ ಜನರು ಇದ್ದಾರೆ. ನ್ಯಾಯಮೂರ್ತಿ ಸದಾಶಿವ ಅವರ ಆಯೋಗವು ಸವಿಸ್ತಾರವಾಗಿ ರಾಜ್ಯಾದ್ಯಂತ ಪ್ರವಾಸ ಕೈಗೊಂಡು ತನ್ನ ವರದಿಯನ್ನು ಸಿದ್ಧಪಡಿಸಿತು. ಆಯೋಗದ ಆರು ವರ್ಷ ಐದು ತಿಂಗಳ ವಿವಿಧ ಭಾಗಗಳಲ್ಲಿ ಭೇಟಿ ನೀಡಿ ರಾಜ್ಯ ಸರಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿದೆ. ಅಲ್ಲದೆ ಮಾದಿಗರು, ಹೊಲೆಯರು, ಭೋವಿ, ಲಂಬಾಣಿ ಸೇರಿದಂತೆ ವಿವಿಧ ಪರಿಶಿಷ್ಟ ಜಾತಿಗೆ ಸೇರಿದ ಸಮುದಾಯಕ್ಕೆ ಮೀಸಲಾತಿಯು ಎಷ್ಟು ಪ್ರಮಾಣದಲ್ಲಿ ಇರಬೇಕೆಂದು ತಿಳಿಸಿದ್ದಾರೆ.

ಸಮಾವೇಶದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಭಾಗವಹಿಸಿದ ಸಾವಿರಾರು ಕಾರ್ಯಕರ್ತರು ರಾಜ್ಯದಲ್ಲಿ ಅಧಿಕಾರ ನಡೆಸಿದ ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಸರ್ಕಾರಗಳಿಂದ ನೀತಿಗಳಿಂದಾಗಿ ಮಾದಿಗ ಸಮಾಜಕ್ಕೆ ಸಂಪೂರ್ಣವಾಗಿ ಅನ್ಯಾಯಕ್ಕೆ ಒಳಗಾಗಿದ್ದಾರೆ. ಮಾದಿಗ ಸಮುದಾಯಕ್ಕೆ ಸಿಗಬೇಕಾದ ಹಲವು ಸೌಲಭ್ಯಗಳು ಮತ್ತು ಉದ್ಯೋಗವಕಾಶಗಳು ಬೇರೆಯವರ ಪಾಲಾಗಿದ್ದು, ನಮ್ಮ ಸಮಾಜಕ್ಕೆ ಅನ್ಯಾಯವಾಗಿದೆ ಎಂದು ತಿಳಿಸಿದರು.

ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ಸಮಾಜ ಕಲ್ಯಾಣ ಸಚಿವ ಶ್ರೀರಾಮುಲು ಸದಾಶಿವ ಆಯೋಗ ಸಲ್ಲಿಸಿರುವ ವರದಿಯ ಜಾರಿಯ ಕುರಿತು ಉಪಸಮಿತಿ ರಚಿಸಲಾಗಿದೆ. ಸರಕಾರವು ಶೀಘ್ರದಲ್ಲಿಯೇ ಕ್ರಮ ಕೈಗೊಳ್ಳಲಿದೆ. ಸದ್ಯಕ್ಕೆ ಧರಣಿಯನ್ನು ಕೈಬಿಡಬೇಕೆಂದು ಹೇಳಿದರು.

ವರದಿಯನ್ನು ಶೀಘ್ರದಲ್ಲಿ ಜಾರಿಗೊಳಿಸಿ ಇಲ್ಲವಾದಲ್ಲಿ ರಾಜ್ಯಾದ್ಯಂತ ಮತ್ತಷ್ಟು ದೊಡ್ಡ ಮಟ್ಟದ ಶಕ್ತಿ ಪ್ರದರ್ಶನ ನಡೆಸಬೇಕಾಗುತ್ತದೆ ಎಂದು ಸಚಿವರಿಗೆ ಆಗ್ರಹಿಸುತ್ತಾ, ರಾಜ್ಯ ಸರಕಾರಕ್ಕೆ ಎಚ್ಚರಿಕೆ ನೀಡಿದ ಪ್ರತಿಭಟನಾಕಾರರು ಧರಣಿಯನ್ನು ಅಂತ್ಯಗೊಳಿಸಿದರು.

ಭೂ ಒಡೆತನ ಮತ್ತು ಗಂಗಾ ಕಲ್ಯಾಣ ಕೊಳವೆ ಬಾವಿ ಯೋಜನೆಗೆ ರೂ. 5,000 ಕೋಟಿ ಒದಗಿಸಿ

ವಸತಿ–ಶಿಕ್ಷಣ–ಉದ್ಯೋಗಗಳಿಗೆ ಆದ್ಯತೆ ನೀಡಿ

ಮಾರ್ಚ್ 3ರಂದು ದಲಿತರ ಹಕ್ಕುಗಳಿಗಾಗಿ ವಿಧಾನಸೌಧ ಚಲೋದ ಸಂದರ್ಭದಲ್ಲಿ, ದಲಿತ ಹಕ್ಕುಗಳ ಸಮಿತಿ ರಾಜ್ಯ ಸಮಿತಿ ರಾಜ್ಯ ಸರಕಾರಕ್ಕೆ ಸಲ್ಲಿಸಿದ ಮನವಿ ಪತ್ರದ ಪೂರ್ಣ ಪಾಠ. ಮನವಿಯಲ್ಲಿ ದಲಿತರ ಅಭಿವೃದ್ಧಿ ಹಣದ ದುರುಪಯೋಗಗಳನ್ನು ತಡೆದು ಎಸ್.ಸಿ.ಎಸ್.ಪಿ /ಟಿ.ಎಸ್.ಪಿ ಯೋಜನೆ ಜಾರಿ ಮಾಡಬೇಕು, ಭೂ ಒಡೆತನ–ಗಂಗಾಕಲ್ಯಾಣ ಕೊಳವೆ ಬಾವಿಗೆ ಒಟ್ಟು 5000ರೂ. ನೀಡಬೇಕು, ಸ್ಮಶಾನ ಭೂಮಿ–ಹಿತ್ತಲು ಸಹಿತ ಮನೆ, ಶಿಕ್ಷಣ–ಉದ್ಯೋಗ (ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ) ಆದ್ಯತೆಯಾಗಬೇಕು ಎಂದು ಒತ್ತಾಯಿಸಲಾಯಿತು.

ದಲಿತ ಅಭಿವೃದ್ಧಿ ಎಂದರೆ ಸಾಮಾಜಿಕ ನ್ಯಾಯ ಒದಗಿಸುವುದು. ಅಭಿವೃದ್ಧಿ ಎನ್ನುವುದು ದತ್ತಿ–ದಾನವಲ್ಲ. ಇದು ದಲಿತರ ಸಂವಿಧಾನಬದ್ಧ ಮೂಲಭೂತ ಹಕ್ಕು. ಆದ್ಯಾಗ್ಯೂ ಮೂಲಭೂತ ಸಾಮಾಜಿಕ ಸಮಸ್ಯೆಯಾಗಿಯೇ ಉಳಿದಿದೆ. ಅದಕ್ಕಾಗಿ ಡಾ॥ ಬಿ.ಆರ್. ಅಂಬೇಡ್ಕರ್‌ರವರು ದಲಿತರ ವಿಮೋಚನೆಗೆ ಸಾಮಾಜಿಕ ಪ್ರಜಾಪ್ರಭುತ್ವ ಅಗತ್ಯವೆಂದು ಹೇಳಿದ್ದರು. ಅವರ ಕನಸು ಮಾತ್ರ ನನಸಾಗಲಿಲ್ಲ. ಸ್ವಾತಂತ್ರ ಬಂದು 74 ವರ್ಷಗಳಾದರೂ ದಲಿತರು ಇಂದಿಗೂ ಆರ್ಥಿಕ, ಸಾಮಾಜಿಕ ಅಸಮಾನತೆ, ಜಾತಿ ತಾರತಮ್ಯ, ಅಸ್ಪೃಶ್ಯತೆ, ದೌರ್ಜನ್ಯದ ದುಸ್ಥಿತಿ ಜೀವನ ಅನುಭವಿಸುತ್ತಿದ್ದಾರೆ. ದಲಿತರು ಸತ್ತಮೇಲೂ ಬಿಡುಗಡೆ ಸಿಗದಂತಾಗಿದೆ. ಹೆಣ ಹೂಳಲು ಭೂಮಿ ಇಲ್ಲ. ತುಂಡು ಭೂಮಿಯು ಇಲ್ಲದ ಲಕ್ಷಾಂತರ ದಲಿತರು ಕೃಷಿ ಕೂಲಿಗಾರರಾಗಿದ್ದಾರೆ. ಜೊತೆಗೆ ಕೋವಿಡ್–19 ಶಾಪವಾಗಿ ಪರಿಣಮಿಸಿದೆ.

ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ. ಯೋಜನೆಯನ್ನು ವಿಫಲಗೊಳಿಸುತ್ತಿರುವ ಕೇಂದ್ರ–ರಾಜ್ಯ ಬಿಜೆಪಿ ಸರ್ಕಾರ

1979–80ರಲ್ಲಿ ದಲಿತರ ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ಸಬಲೀಕರಣದ ಭದ್ರತೆಗೆ ಅನುಗುಣವಾಗಿ ಪರಿಶಿಷ್ಟ ಜಾತಿ (ಎಸ್.ಸಿ.ಎಸ್.ಪಿ.) ಮತ್ತು ಬುಡಕಟ್ಟು (ಟಿ.ಎಸ್.ಪಿ.) ಉಪ ಯೋಜನೆ ಜಾರಿಗೆ ತರಲಾಗಿದೆ. ನಂತರದಲ್ಲಿ 2013ರಲ್ಲಿ ಕಾಯಿದೆಯನ್ನು ಜಾರಿ ಮಾಡಲಾಗಿದೆ. ಅದರಂತೆ ಜನಸಂಖ್ಯೆಗೆ ಅನುಗುಣವಾಗಿ ಅನುದಾನ ನೀಡಬೇಕು. ಜಾರಿ ಮಾಡದ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಲು ಅವಕಾಶ ಕಲ್ಪಿಸಿ ಯಾವುದೇ ಕಾರಣಕ್ಕೂ ಈ ಹಣ ಲ್ಯಾಪ್ಸ್ (ವಂಚನೆ) ಆಗಬಾರದು, ಬೇರೆ ಯೋಜನೆಗಳಿಗೆ ವರ್ಗಾಯಿಸಕೊಡದೆಂದು ಸ್ಪಷ್ಟವಾಗಿ ತಿಳಿಸಿದೆ. 39 ಇಲಾಖೆಗಳಿಗೆ ಹಂಚಿಕೆ ಮಾಡಲಾಗುತ್ತಿದೆ. ಈ ಮೇಲಿನ ಹಣ ಸದುಪಯೋಗವಾಗಿದೆಯೇ? ಖಂಡಿತ ಇಲ್ಲ. ಸರ್ಕಾರ ಹೇಳಿದ ಪ್ರಕಾರ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಉಪ ಯೋಜನೆಗೆ 2020–21ರಲ್ಲಿ ಬಜೆಟ್‌ನಲ್ಲಿ ರೂ. 27,699 ಕೋಟಿ ಒದಗಿಸುವುದಾಗಿ ನಿರ್ಧರಿಸಿತು. ಪರಿಷ್ಕೃತಗೊಳಿಸಿ ರೂ. 25,616 ಕೋಟಿ ಒದಗಿಸುವುದಾಗಿ ಹೇಳಿತು. ಡಿಸೆಂಬರ್ ಅಂತ್ಯದವರೆಗೆ ಕೇವಲ ರೂ.12,154 ಕೋಟಿ (ಶೇ.47.45) ಮಾತ್ರ ವೆಚ್ಚವಾಗಿದೆ. ಕೋವಿಡ್ ನೆಪದಲ್ಲಿ ಈ ಹಣವನ್ನು ಕಡಿತ ಮಾಡಿದೆ. ಸಮಾಜ ಕಲ್ಯಾಣ ಇಲಾಖೆ ವಿವಿಧ ಕಾರ್ಯಕ್ರಮಗಳಿಗೆ ಪರಿಶಿಷ್ಟ ಜಾತಿಗೆ ಮೀಸಲಾದ ಅನುದಾನ, ರೂ.3105 ಕೋಟಿಯಲ್ಲಿ ಕೇವಲ ರೂ. 1355 ಕೋಟಿ (ಶೇ.43.6), ಪರಿಶಿಷ್ಟ ಪಂಗಡಗಳ ಇಲಾಖೆ ನೀಡಿದ ಮೀಸಲಾತಿ ಅನುದಾನ ರೂ. 1341 ಕೋಟಿಯಲ್ಲಿ 585 ಕೋಟಿ. (ಶೇ.43.67) ಮಾತ್ರ ವೆಚ್ಚವಾಗಿದೆ. ಉಳಿದ ಅನುದಾನ ಬಿಡುಗಡೆ ಮಾಡಲೇ ಇಲ್ಲ.

ಕಾಯಿದೆಯ 7(ಡಿ) ದುರುಪಯೋಗ ಪಡಿಸಿಕೊಂಡು ನಗರಾಭಿವೃದ್ಧಿ ಇಲಾಖೆಗೆ ಮೀಸಲಿಟ್ಟ 170 ಕೋಟಿ ಪೂರ್ಣ ಹಣವನ್ನು, ಪೆರಿಫರಲ್ ರಿಂಗ್ ರಸ್ತೆಯ ರಚನೆಗೆ, ನೀರಾವರಿ ಇಲಾಖೆಯ ಪೂರ್ಣ ಹಣ ಇತರೆ ಉದ್ದೇಶಗಳಿಗೆ ಬಳಸಲಾಗಿದೆ. ಸರ್ಕಾರ ಇಲಾಖೆ 74.13 ಕೋಟಿಯನ್ನು ಇತರೆ ಯೋಜನೆಗೆ ಬಳಸಿ ದಲಿತರ ಅಭಿವೃದ್ಧಿ ಹಣವನ್ನು ವಂಚಿಸುತ್ತಿದ್ದಾರೆ. ಕಾಯಿದೆ ಉಲ್ಲಂಘಿಸಿದ ಇಂತಹ ಒಬ್ಬ ಅಧಿಕಾರಿಗೂ ಶಿಕ್ಷೆ ಆಗಿಲ್ಲವೆಂಬುದು ದುರಂತ ಸಂಗತಿ. ಭೂಒಡೆತನ ಯೋಜನೆಯಲ್ಲಿ ಕೊಟ್ಯಾಂತರ



ರೂ,ಗಳು ಭ್ರಷ್ಟಾಚಾರ ಆಗಿರುವ ವಿಚಾರ ಬೆಳಕಿಗೆ ಬಂದಿದೆ.

ನೀತಿ ಆಯೋಗ ಜಾರಿ: ಬಿ.ಜೆ.ಪಿ. ದಲಿತರಿಗೆ ಮಾಡುತ್ತಿರುವ ಮೋಸ!

ಡಾ॥ ಬಿ.ಆರ್. ಅಂಬೇಡ್ಕರ್ ಸಂವಿಧಾನ ಹಕ್ಕುಗಳನ್ನು ನೀಡಿದ ಹಲವು ದಶಕಗಳ ನಂತರ, ದಲಿತರ ನಿರಂತರ ಹೋರಾಟದ ಫಲವಾಗಿ ಉಪಯೊಜನೆ ಜಾರಿಗೆ ಬಂದಿತ್ತು. ಇವು ಇನ್ನೂ ಕೂಡ ಪೂರ್ಣ ಪ್ರಮಾಣದಲ್ಲಿ ದಲಿತರಿಗೆ ದಕ್ಕಲೇ ಇಲ್ಲ. ಉದ್ಯೋಗದಲ್ಲಿ ಬ್ಯಾಕ್‌ಲಾಗ್ ಹುದ್ದೆ ಭರ್ತಿಯಾಗಲಿಲ್ಲ. ಜಾಗತೀಕರಣದ ಸಂದರ್ಭದಲ್ಲಿ ಖಾಸಗೀ ಕ್ಷೇತ್ರದಲ್ಲಿ ಮೀಸಲಾತಿ ಇಲ್ಲವಾಗಿದೆ. ಆದರೆ ಇದೇ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ಮೀಸಲಾತಿ ಮೂಲಭೂತ ಹಕ್ಕಲ್ಲ ಎಂದು ಹೇಳುವ ದುಸ್ಥಿತಿ ಉಂಟಾಗಿದೆ. ಬಿಜೆಪಿ ಕೇಂದ್ರ ಸರ್ಕಾರದ ನೀತಿ ಆಯೋಗದ ಮಾರ್ಗದರ್ಶನದಂತೆ, 2017–18ರಲ್ಲಿ ಈ ಯೋಜನೆಗಳ ಹೆಸರನ್ನು ಪ.ಜಾ. ಮತ್ತು ಪ.ಪಂಗಡ ಕಲ್ಯಾಣ ಕಾರ್ಯಕ್ರಮ ಎಂದು ಬದಲಾಯಿಸಿದೆ. ಅಭಿವೃದ್ಧಿ ಮತ್ತು ಕಲ್ಯಾಣಗಳ ನಡುವೆ ಸೈದ್ಧಾಂತಿಕ ಭಿನ್ನತೆ ಇದೆ ಇಂದು ತಿಳಿದಿದ್ದರೂ, ದಲಿತರು ಅಂಗಲಾಚಿ ಹಂಗಿನಲ್ಲಿ ಇರುವ, ಬೇಡುವ ವ್ಯವಸ್ಥೆ ಇದಾಗಿದೆ. ದಲಿತರ ಹಕ್ಕಿನ ಕಾರ್ಯಗಳನ್ನು ಹಂಗಿನ ಕಾರ್ಯಕ್ರಮಗಳಾಗಿ ಮಾಡಲಾಗಿದೆ.

ದಲಿತರಿಗೆ ಬಜೆಟ್ ಮೂಲಕ ಹಂಚುವ ಯೋಜನಾ ಬದ್ಧ ಹಣವು ಸರ್ಕಾರ ನೀಡುವ ಭಿಕ್ಷೆಯಲ್ಲ. ದಲಿತರು ಹೋರಾಟದಿಂದ ದಕ್ಕಿಸಿಕೊಂಡಿರುವ ಹಕ್ಕನ್ನು ದಮನ ಮಾಡಲಾಗುತ್ತಿದೆ. ಹಕ್ಕುಗಳನ್ನು ಕಸಿದುಕೊಳ್ಳಲಾಗುತ್ತಿದೆ. ಈ ಹಕ್ಕನ್ನು ಕಸಿದುಕೊಳ್ಳುವ ಪ್ರಯತ್ನವನ್ನು ಸರ್ಕಾರ ನಿರಂತರವಾಗಿ ಮಾಡುತ್ತಿದೆ. ದಲಿತ ಹಕ್ಕುಗಳ ಸಮಿತಿ (ಡಿ.ಹೆಚ್.ಎಸ್) ಇಂತಹ ನೀತಿಗಳನ್ನು ಸಹಿಸಿಕೊಳ್ಳುವುದಿಲ್ಲ.

ಭೂ ಒಡೆತನ ಮತ್ತು ಗಂಗ ಕಲ್ಯಾಣ ಕೊಳವೆ ಭಾವಿಗೆ ತಲಾ ರೂ.2500 ಕೋಟಿ ನೀಡಿ

ವಸತಿ–ಶಿಕ್ಷಣ–ಉದ್ಯೋಗ, ಆದ್ಯತೆ ನೀಡಿ, ಏಕಗವಾಕ್ಷಿ ಮೂಲಕ ಜಾರಿಮಾಡಿ

ರಾಜ್ಯದಲ್ಲಿ ಮೇಲು ಜಾತಿ ಜನರ ಮಾನವ ಅಭಿವೃದ್ಧಿಗೆ ಹೋಲಿಸಿದರೆ, ದಲಿತರ ಮಾನವ ಅಭಿವೃದ್ಧಿ ಅತ್ಯಂತ ಕಳಪೆಯಗಿದೆ ಎಂದು ಡಾ॥ ಚಂದ್ರ ಪೂಜಾರಿಯುವರ ಸಂಶೋಧನೆ ಮತ್ತು ಅರ್ಥಶಾಸ್ತ್ರಜ್ಞರಾದ ಪ್ರೊ.ಟಿ.ಆರ್. ಚಂದ್ರಶೇಖರ್ ಅವರ ಅಧ್ಯಯನಗಳಿಂದ ಸಾಬೀತಾಗಿದೆ.

2018–19 ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಮಾಹಿತಿಯಂತೆ ಭೂ ಒಡೆತನ ಯೋಜನೆಯಲ್ಲಿ 2 ಎಕರೆ ಭೂಮಿ ಕೊಡಿ ಎಂದು 11,723 ಅರ್ಜಿ ಸಲ್ಲಿಸಿದ್ದಾರೆ. 2018–19ರಲ್ಲಿ ಗಂಗಾಕಲ್ಯಾಣ ಯೋಜನೆಯಲ್ಲಿ 42,471 ಫಲಾಪೇಕ್ಷಿಗಳಾಗಿ ಅರ್ಜಿ ಸಲ್ಲಿಸಿದ್ದಾರೆ. ಆದರೆ ಸರ್ಕಾರ ಬಿಡುಗಡೆ ಮಾಡಿದ ಹಣ ಕೇವಲ ರೂ 124 ಕೋಟಿ ಮಾತ್ರ. ಈ ಅರ್ಜಿಗಳ ಸಂಖ್ಯೆ ಮತ್ತೆ ಹೆಚ್ಚಾಗಿದೆ. ಗಂಗಾ ಕಲ್ಯಾಣ ವೈಯಕ್ತಿಕ ನೀರಾವರಿ ಕೊಳವೆ ಬಾವಿಗಾಗಿ 2019–20 ರಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್ ನಿಗಮಕ್ಕೆ 15,230 ಅರ್ಜಿಗಳು, ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮಕ್ಕೆ 9,587 ಅರ್ಜಿಗಳು, ಕರ್ನಾಟಕ ತಾಂಡ ನಿಗಮಕ್ಕೆ 5,954 ಅರ್ಜಿಗಳು ನೊಂದಾವಣೆಯಾಗಿವೆ. ಒಟ್ಟು 30,769 ಅರ್ಜಿಗಳು ಬಂದಿರುವ ಮಾಹಿತಿ ಇದೆ. ಈ ಯೋಜನೆಗೆ ಬೇಕಾದ ಹಣ ರೂ.2000 ಕೋಟಿಯನ್ನು ಹೆಚ್ಚುವರಿಯಾಗಿ ನೀಡಿದರೆ ದಲಿತರ ಭೂಮಿಗೆ ನೀರು ಒದಗಿಸಲು ಸಹಾಯಕವಾಗುತ್ತದೆ.

ಈ ಯೋಜನೆಗಳು ಶಾಸಕರ ಕಪಿಮುಷ್ಠಿಗೆ ಸಿಲುಕಿ ನರಳುತ್ತಿವೆ. ಅವರ ಹಿಂಬಾಲಕರಿಗೆ ಮಾತ್ರ ಸಿಗುತ್ತದೆ. ವಸತಿ ಹೀನರಿಗೆ ಮನೆ ನೀಡುವಲ್ಲಿ ಕೇಂದ್ರ ರಾಜ್ಯ ಸರ್ಕಾರಗಳು ಸಂಪೂರ್ಣ ವಿಫಲವಾಗಿದೆ.

ರಾಜ್ಯ ಸರ್ಕಾರ ಈ ಯೋಜನೆಗಳನ್ನು ಹಣಕಾಸು ಇಲಾಖೆಯಿಂದ ನಿರ್ವಹಿಸುತ್ತಿದೆ. ದಲಿತರ ಜನಸಂಖ್ಯೆ ಅನುಗುಣವಾಗಿ ಹಣ ಒದಗಿಸುತ್ತಿಲ್ಲ ಎಂಬುದು ಸಾಬೀತಾಗಿದೆ. ಆದ್ದರಿಂದ ಮಾತೃ ಇಲಾಖೆಯಾದ ಸಮಾಜ ಕಲ್ಯಾಣ ಇಲಾಖೆಗೆ ಹಂಚಿಕೆ ಜವಾಬ್ದಾರಿ ನೀಡಿ 'ಏಕಗವಾಕ್ಷಿ' ಮೂಲಕ ನಿರ್ವಹಿಸಿದರೆ ಸದುಪಯೋಗವಾಗಲು ಸಾಧ್ಯವಾಗುತ್ತದೆ.

ದಲಿತ ಮಹಿಳೆಯರ ಪರಿಸ್ಥಿತಿ ಚಿಂತಾಜನಕವಾಗಿದೆ. ಎಂಬುದನ್ನು ಕೋವಿಡ್–19 ಸಂದರ್ಭದಲ್ಲಿ ಅನುಭವಿಸಿದ್ದೇವೆ. ರಾಜ್ಯದಲ್ಲಿ ದೇವದಾಸಿ ಮಹಿಳೆಯರು ತಮ್ಮ ಬದುಕಿಗಾಗಿ ಪರಿತಪಿಸುತ್ತಿದ್ದಾರೆ. ಮಾಸಿಕ ಪೆನ್ಶನ್ ಹೆಚ್ಚಳವಿಲ್ಲ, ಪುನರ್ ವಸತಿ ಕಲ್ಪಿಸಲು, ಉದ್ಯೋಗ ಒದಗಿಸಲು ಅವರ ಕುಟುಂಬದ ಗಣತಿ ಮಾಡುತ್ತಿಲ್ಲ. ದೇವದಾಸಿ ಮಕ್ಕಳ ಶಿಕ್ಷಣ ಅಭದ್ರತೆಯಲ್ಲಿದೆ.

ಅದರಂತೆ ರಾಜ್ಯದಲ್ಲಿ ಗ್ರಾಮದ ಮಸಣಗಳಲ್ಲಿ ಬಿಟ್ಟಿ ಚಾಕರಿ ಮಾಡುವ, ಹೆಣದ ಗುಂಡಿ ತೆಗೆಯುವ ದಲಿತರು ಇದ್ದಾರೆ, ಮಂಗಳವಾದ್ಯ ನುಡಿಸುವವರು ಇದ್ದಾರೆ. ಇವರ ಸ್ಥಿತಿ ಅತ್ಯಂತ ಭೀಕರವಾಗಿದೆ. ಇವರಿಗೆ ಪ್ರತಿ ಪಂಚಾಯತಿಯಲ್ಲಿ ಒಂದು ಉದ್ಯೋಗ ಕಲ್ಪಿಸಿ ಕೊಡಬೇಕಾಗಿದೆ.

ಹಕ್ಕೊತ್ತಾಯಗಳು:

* ಭೂ ಒಡೆತನ ಮತ್ತು ಗಂಗಾ ಕಲ್ಯಾಣ ಕೊಳವೆ ಬಾವಿ ಯೋಜನೆಗೆ ರೂ.5,000 ಕೋಟಿ ಒದಗಿಸಿ. ವಸತಿ–ಶಿಕ್ಷಣ– ಉದ್ಯೋಗ ಆದ್ಯತೆ ನೀಡಿ,
* ಎಸ್.ಸಿ/ಎಸ್.ಟಿ ಉಪಯೋಜನೆ ಕಾಯಿದೆಯ 7ಡಿ ರದ್ದುಗೊಳಿಸಿ, ಡೀಮ್ ನೆಪದಲ್ಲಿ ಖರ್ಚು ಮಾಡುವ ಹಣವನ್ನು ಕನಿಷ್ಟ ಎರಡು ವರ್ಷಗಳ ಕಾಲ ತಡೆಯಿರಿ,
* ದಲಿತರ ಅಭಿವೃದ್ಧಿ ಹಣದ ವೈಫಲ್ಯ ಮತ್ತು ಹಣ ವರ್ಗಾವಣೆಗಳನ್ನು ತಡೆದು ಎಸ್.ಸಿ.ಎಸ್.ಪಿ /ಟಿ.ಎಸ್.ಪಿ ಉಪ ಯೋಜನೆ ಜಾರಿ ಮಾಡಿ.
* ಸಮಾಜ ಕಲ್ಯಾಣ ಇಲಾಖೆಗೆ ಬಜೆಟ್ ನಲ್ಲಿ ನಿಗದಿ ಪಡಿಸಿದ ಒಟ್ಟು ಹಣವನ್ನು ಒದಗಿಸಿ 'ಏಕ ಗವಾಕ್ಷಿ' ಮೂಲಕ ಜಾರಿಗೊಳಿಸಿ.
* ಕಾಯಿದೆ ಅನ್ವಯ ಯೋಜನೆ ಜಾರಿ ಮಾಡದ ಅಧಿಕಾರಿಗಳ ಮೇಲೆ ಕಾನೂನು ಕ್ರಮ ಜರುಗಿಸಿ.
* ಜಾತಿ ತಾರತಮ್ಯ ನಿರ್ಮೂಲನೆಗಾಗಿ ಸಂಘಟನೆಗಳ ಸಹಕಾರ ಜಾಗೃತಿ ಕಾರ್ಯಕ್ರಮ ರೂಪಿಸಲು ಆಗ್ರಹಿಸಿ.
* ಶಿಕ್ಷಣ, ಉದ್ಯೋಗ, ವಸತಿ ಹೆಚ್ಚಿನ ಹಣ ಒದಗಿಸಬೇಕು. ಎಲ್ಲಾ ಫಲಾಪೇಕ್ಷಿಗಳಿಗೂ ದೊರಕಬೇಕು.
* ಅಂತರಜಾತಿ ವಿವಾಹಿತರಿಗೆ ವಿಶೇಷ ಪ್ಯಾಕೇಜ್ ಮೂಲಕ ಅವರ ಮಕ್ಕಳಿಗೆ ಶಿಕ್ಷಣ, ಉದ್ಯೋಗ, ಭೂಮಿ ನೀಡಿ ಜಾತಿ ವಿನಾಶದ ಮೈಲಿಗಲ್ಲಾಗಲು ಸರ್ಕಾರ ಪ್ರೋತ್ಸಾಹಿಸಬೇಕು.
* ಹಿತ್ತಲು ಸಹಿತ (1 ಗುಂಟೆ) ಮನೆ ನಿವೇಶನ ನೀಡಬೇಕು. ಅದಕ್ಕಾಗಿ ಅಂಬೇಡ್ಕರ್, ಇಂದಿರಾ, ವಾಜಪೇಯಿ, ಬಸವ ಯೋಜನೆಗಳು ಪುನರ್ ಯೋಜನೆ ರೂಪಿಸಬೇಕು. ಹೆಚ್ಚಿನ ಹಣ ಒದಗಿಸಬೇಕು.
* ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಿ ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ಜಾರಿ ಮಾಡಬೇಕು.
* ದೇವದಾಸಿ ಮಹಿಳೆಯರ ಪೆನ್ಶನ್ ಕನಿಷ್ಠ 5,000ರೂ ಗಳಿಗೆ ಹೆಚ್ಚಿಸಿ. ಆದನಂತರ ಗಣತಿಯಾಚೆ ಇರುವ ಮಹಿಳೆಯರನ್ನು ಪಟ್ಟಿಗೆ ಸೇರಿಸಬೇಕು. ಅವರ ಮಕ್ಕಳ ವಿವಾಹಕ್ಕೂ ಪ್ರೋತ್ಸಾಹ ಧನ ನೀಡಿ, ಶಿಕ್ಷಣ ಉದ್ಯೋಗ ನೀಡಬೇಕು, ದೇವದಾಸಿ ಪದ್ಧತಿ ನಿರ್ಮೂಲನೆ ಮಾಡಲು ಅಗತ್ಯ ಕ್ರಮ ಜರುಗಿಸಬೇಕು.
* ಮಸಣ ಕಾರ್ಮಿಕರಿಗೆ ಪಂಚಾಯತಿಯಲ್ಲಿ ಪ್ರತಿ ಮಸಣಕ್ಕೆ ಒಂದು ಉದ್ಯೋಗ ಒದಗಿಸಬೇಕು. 3000 ರೂ. ಪೆನ್ಸನ್ ನೀಡಬೇಕು.

ಈ ಮೇಲಿನ ಎಲ್ಲಾ ಹಕ್ಕೊತ್ತಾಯಗಳು ದಲಿತರ ಸಾಮಾಜಿಕ–ಆರ್ಥಿಕ ಸಬಲೀಕರಣದೊಂದಿಗೆ ಹಾಸುಹೊಕ್ಕಾಗಿವೆ. ಸರ್ಕಾರಕ್ಕೆ ರಾಜಕೀಯ ಇಚ್ಛಾಶಕ್ತಿ ಅಗತ್ಯ.. ಸಚಿವರು ನಡೆಸಿದ ಸಭೆಗೆ ಪತ್ರ ನೀಡಿದ್ದರೂ ಆಹ್ವಾನಿಸದೆ ಇರುವುದು ಬೇಸರ ತಂದಿದೆ. ಈ ಸಮಸ್ಯೆಗಳ ಕುರಿತು ದಲಿತ ಹಕ್ಕುಗಳ ಸಮಿತಿಯ ಪದಾಧಿಕಾರಿಗಳ ಜೊತೆಗೆ ಸಭೆ ಕರೆದು ಚರ್ಚಿಸಬೇಕು. ●



ಕೇರಳ ಚುನಾವಣೆಗಳಲ್ಲಿ ಅಪವಿತ್ರ ತ್ರಿವಳಿ ಕೂಟ

ಬಿಜೆಪಿ, ಕಾಂಗ್ರೆಸ್ ಮತ್ತು ಕೇಂದ್ರೀಯ ಸಂಸ್ಥೆಗಳು ತಾಳಮೇಳದೊಂದಿಗೆ ಎಲ್‌ಡಿಎಫ್ ಸರ್ಕಾರದ ವಿರುದ್ಧ ಒಟ್ಟಾಗಿ ಎತ್ತಿದ್ದ ಮೊದಲ ಹಂತದ ಕಳ್ಳಸಾಗಣೆ ಮತ್ತು ಭ್ರಷ್ಟಾಚಾರ ಆರೋಪಗಳನ್ನು ಕೇರಳದ ಜನರು ನಿರ್ಣಾಯಕವಾಗಿ ತಿರಸ್ಕರಿಸಿದ್ದಾರೆ. ಆ ಚುನಾವಣೆಗಳಲ್ಲಿ ಎಲ್‌ಡಿಎಫ್ ಭಾರಿ ಜಯಭೇರಿ ಬಾರಿಸಿತ್ತು. ಇದೀಗ ಮತ್ತೆ ವಿಧಾನಸಭೆ ಚುನಾವಣೆಗಳಲ್ಲಿ ಈ ಅಪವಿತ್ರ ತ್ರಿವಳಿ ಕೂಟಕ್ಕೆ ಮರೆಯಲಾರಂತಹ ಪಾಠ ಕಲಿಸಲಿದ್ದಾರೆ.

ಪ್ರಕಾಶ್ ಕಾರಟ್

ಕೇರಳ ವಿಧಾನಸಭೆ ಚುನಾವಣೆಯಲ್ಲಿ ಮೂರು ಮೈತ್ರಿಕೂಟಗಳು ಕಣದಲ್ಲಿವೆ: ಸಿಪಿಐ (ಎಂ) ನೇತೃತ್ವದ ಎಲ್‌ಡಿಎಫ್, ಕಾಂಗ್ರೆಸ್ ನೇತೃತ್ವದ ಯುಡಿಎಫ್, ಮತ್ತು ಬಿಜೆಪಿ ನಾಯಕತ್ವದ ಎನ್‌ಡಿಎ. ಕಾಂಗ್ರೆಸ್ ಮತ್ತು ಬಿಜೆಪಿಗಳೆರಡೂ ಎಲ್‌ಡಿಎಫ್ ಸರ್ಕಾರದ ಮೇಲೆ ಇಲ್ಲಸಲ್ಲದ ಸುಳ್ಳು ಆರೋಪಗಳನ್ನು ಹೊರಿಸಿ ಗುರಿ ಮಾಡುತ್ತಿವೆ. ಕಳೆದ ವರ್ಷ ಜುಲೈನಲ್ಲಿ ಚಿನ್ನ ಕಳ್ಳ ಸಾಗಣೆ ಪ್ರಕರಣದೊಂದಿಗೆ ಈ ಅಪಪ್ರಚಾರ ಅಭಿಯಾನ ಆರಂಭವಾಗಿತ್ತು. ಕಾಂಗ್ರೆಸ್ ಮತ್ತು ಬಿಜೆಪಿಯಲ್ಲದೆ ಇನ್ನೂ ಒಂದು ಕೂಟ ಕೇರಳದ ಚುನಾವಣಾ ಕಣದಲ್ಲಿ ಪ್ರತ್ಯಕ್ಷವಾಗಿದೆ!. ಅದುವೇ ಜಾರಿ ನರ್ದೇಶನಾಲಯ (ಇ.ಡಿ.), ಸಿಬಿಐ, ಕಸ್ಟಮ್ಸ್ ಇಲಾಖೆ ಮತ್ತು ರಾಷ್ಟ್ರೀಯ ತನಿಖಾ ದಳ (ಎನ್‌ಐಎ). ಕೇಂದ್ರ ಸರ್ಕಾರದ ಈ ಸಂಸ್ಥೆಗಳ ಹಸ್ತಕ್ಷೇಪ ಅಭೂತಪೂರ್ವ ರೀತಿಯಲ್ಲಿ ಹೆಚ್ಚುತ್ತಿದೆ. ಎಲ್ಲ ಕಾನೂನು ಹಾಗೂ ಸಾಂಸ್ಥಿಕ ನಿಯಮಗಳನ್ನು ಉಲ್ಲಂಘಿಸಲಾಗುತ್ತಿದೆ. ಒಕ್ಕೂಟ ತತ್ವದ ಮೂಲಭೂತ ನಿಯಮಗಳನ್ನೇ ಹೊಸಕಿ ಹಾಕಲಾಗುತ್ತಿದೆ. ಹಿಂದೆ ರಾಜ್ಯ ವಿಧಾನಸಭೆಯ ಯಾವುದೇ ಚುನಾವಣೆಗಳ ಸಂದರ್ಭದಲ್ಲಿ ಈ ರೀತಿ ಆಗಿರಲಿಲ್ಲ.

ವಿಭಿನ್ನ ಮಾದರಿ 'ಎನ್‌ಕೌಂಟರ್ ಸ್ಪೆಷಲಿಸ್ಟ್'

ಬಿಜೆಪಿ ಹಿಂದೆಲ್ಲ ಪ್ರತಿಪಕ್ಷಗಳನ್ನು ಹಣಿಯಲು ಇ.ಡಿ., ಸಿಬಿಐ ಮತ್ತು ಆದಾಯ ತೆರಿಗೆ ಇಲಾಖೆಗಳನ್ನು (ಐಟಿ) ಬಳಸಿಕೊಂಡಿದ್ದಿದೆ. ಅಮಿತ್ ಷಾ, ಕೇಂದ್ರದ ಗೃಹ ಸಚಿವರಾದ ನಂತರ ಬೇರೆಯೇ ರೀತಿಯ 'ಎನ್‌ಕೌಂಟರ್ ಸ್ಪೆಷಲಿಸ್ಟ್' ಆಗಿ ಹೊರಹೊಮ್ಮಿದ್ದಾರೆ. ಹಿಂದೆ ಯಾವುದೇ ಚುನಾವಣೆಗಳಿಗೆ ಮುಂಚೆ, ಉನ್ನತ ರಾಜಕೀಯ ಪ್ರತಿಸ್ಪರ್ಧಿಗಳನ್ನು ಕೇಂದ್ರೀಯ ಸಂಸ್ಥೆಗಳು 'ಎನ್‌ಕೌಂಟರ್' ಮಾಡುತ್ತಿದ್ದವು. ಮಹಾರಾಷ್ಟ್ರ ಚುನಾವಣೆಗೆ ಮುನ್ನ ಎನ್‌ಸಿಪಿ ಅಧ್ಯಕ್ಷ ಶರದ್ ಪವಾರ್ ಜೊತೆ ನಡೆದದ್ದೂ ಇದೇ. ಪ್ರಶ್ನಿಸಲೆಂದು ಇ.ಡಿ. ಅವರನ್ನು ಕರೆಸಿಕೊಂಡಿತ್ತು.

ಆದರೆ, ಕೇರಳದಲ್ಲಿ ಕೇಂದ್ರೀಯ ಸಂಸ್ಥೆಗಳ ಮಧ್ಯಪ್ರವೇಶ ಬೇರೆಯೇ ರೀತಿಯಲ್ಲಾಗುತ್ತಿದೆ. ಸ್ವತಃ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮತ್ತು ಎಲ್‌ಡಿಎಫ್ ಸರ್ಕಾರದ ಸಚಿವರನ್ನು ಗುರಿ ಮಾಡಲಾಗುತ್ತಿದೆ. ಕೇರಳ ಮೂಲಸೌಕರ್ಯ ಹೂಡಿಕೆ ನಿಧಿ ಮಂಡಳಿ (ಕೆಐಐಎಫ್‌ಬಿ) ಮುಂತಾದ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು, ಸರ್ಕಾರಿ ಕಾರ್ಯಕ್ರಮ ಹಾಗೂ ಮಿಷನ್‌ಗಳನ್ನು ಕೂಡ ಕೇಂದ್ರ ಗುರಿ ಮಾಡುತ್ತಿದೆ. ಚುನಾವಣೆ ಹಿನ್ನೆಲೆಯಲ್ಲಿ ಎಲ್‌ಡಿಎಫ್ ಸರ್ಕಾರ ಹಾಗೂ ರಾಜಕೀಯ ನಾಯಕತ್ವಕ್ಕೆ ಕೆಟ್ಟ ಹೆಸರು ತರುವ ಲೆಕ್ಕಾಚಾರದಿಂದ ಈ ರೀತಿ ಮಾಡಲಾಗುತ್ತಿದೆ.

ಬೆಟ್ಟ ಅಗೆದರೂ ......

ಚಿನ್ನ ಕಳ್ಳಸಾಗಣೆ ಪ್ರಕರಣದ ತನಿಖೆ ವೇಳೆ ಎನ್‌ಐಎ, ಇ.ಡಿ. ಮತ್ತು ಕಸ್ಟಮ್ಸ್ ಇಲಾಖೆಗಳು ವಿವಿಧ ಮಂತ್ರಿಗಳು ಮತ್ತು ನಾಯಕರನ್ನು ಸಿಕ್ಕಿಸಿ ಹಾಕುವ ಉದ್ದೇಶದಿಂದಲೇ ವಿವರಗಳನ್ನು ಕೆದಕುವ ಕೆಲಸದಲ್ಲಿ ತೊಡಗಿದ್ದವು. ಅಲ್ಪಸಂಖ್ಯಾತರ ಕಲ್ಯಾಣ ಖಾತೆ ಸಚಿವ ಕೆ.ಟಿ. ಜಲೀಲ್‌ರನ್ನು ಇ.ಡಿ. ತನಿಖೆಗೆ ಒಳಪಡಿಸಿತು. ಚಿನ್ನ ಬಂದ ದಿನಾಂಕಗಳು ಹಾಗೂ ರಮ್ಜಾನ್ ವೇಳೆ ವಿತರಿಸಲು ಯುಎಇ ಕಾನ್ಸುಲೇಟ್‌ನಿಂದ ಪಡೆದ ಕುರಾನ್ ಪ್ರತಿಗಳ ಬಗ್ಗೆ ಅದು ಪ್ರಶ್ನಿಸಿತು. ಕೇಂದ್ರ ಸಂಸ್ಥೆಗಳು ಬೇಕಂತಲೇ ಸೋರಿಕೆ ಮಾಡಿದ ತಪ್ಪು ಮಾಹಿತಿಗಳ ಆಧಾರದಲ್ಲಿ, ಮಂತ್ರಿಯ ರಾಜಿನಾಮೆಗಾಗಿ ಕಾಂಗ್ರೆಸ್ ಮತ್ತು ಬಿಜೆಪಿ ಬೀದಿಗಿಳಿದವು.

ಆರು ತಿಂಗಳ ತನಿಖೆ ನಡೆಸಿದ ಎನ್‌ಐಎ, 20 ಜನರ ವಿರುದ್ಧ ಚಾರ್ಜ್‌ಷೀಟ್ ಸಲ್ಲಿಸಿತು. ರಾಜ್ಯಸರ್ಕಾರದ ಮಾಜಿ ಪ್ರಮುಖ ಕಾರ್ಯದರ್ಶಿ ಶಿವಶಂಕರ್ ಅಥವಾ ಇನ್ನಾವುದೇ ರಾಜಕೀಯ ಕಾರ್ಯಕರ್ತರ ವಿರುದ್ಧ ಅದು ದೋಷಾರೋಪ ಮಾಡಲಿಲ್ಲ. ನವೆಂಬರ್‌ನಲ್ಲಿ ನಡೆದ ಸ್ಥಳೀಯ ಸಂಸ್ಥೆ ಚುನಾವಣೆಗಳ ವೇಳೆ ಕಾಂಗ್ರೆಸ್ ಮತ್ತು ಬಿಜೆಪಿಗೆ ನೆರವಾಗುವ ಏಕೈಕ ದುರುದ್ದೇಶದಿಂದ ಚಿನ್ನ ಕಳ್ಳ ಸಾಗಣೆ ಪ್ರಕರಣವನ್ನು ಬಳಸಿಕೊಳ್ಳಲಾಯಿತು.

ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಎಲ್‌ಡಿಎಫ್ ಸರ್ಕಾರವನ್ನು ಸಿಲುಕಿಸಲು ಏನೂ ಸಿಗದೆ ಹತಾಶವಾದ ಸಿಬಿಐ ಮತ್ತು ಇ.ಡಿ., ಲೈಫ್ ಮಿಷನ್‌ನಂಥ ರಾಜ್ಯ ಸರ್ಕಾರದ ಹಲವು ಯೋಜನೆಗಳ ಮೇಲೆ ಕಣ್ಣು ಹಾಕಿದವು. ಕಾಂಗ್ರೆಸ್ ಶಾಸಕರೊಬ್ಬರು ನೀಡಿದ ದೂರಿನ ಆಧಾರದಲ್ಲಿ ಸಿಬಿಐ ಮಧ್ಯಪ್ರವೇಶಿಸಿ ಲೈಫ್ ಮಿಷನ್ ಅಧಿಕಾರಿಗಳ ಮೇಲೆ ಮುಗಿ ಬಿದ್ದಿತು. ಲೈಫ್ ಮಿಷನ್ ಎಲ್‌ಡಿಎಫ್ ಸರ್ಕಾರದ ಒಂದು ಮಹತ್ವಾಕಾಂಕ್ಷೆಯ ಯೋಜನೆಯಾಗಿದ್ದು ಅದರಡಿ ಎರಡುವರೆ ಲಕ್ಷ ಬಡವರಿಗೆ ಮನೆಗಳನ್ನು ಒದಗಿಸಲಾಗಿದೆ. ಬಡ ಜನರಿಗೆ ಇಂಟರ್‌ನೆಟ್ ಸಂಪರ್ಕ ಕಲ್ಪಿಸುವ ಕೆ–ಫಾನ್ ಮುಂತಾದ ಯೋಜನೆಗಳ ಹಾಗೂ ಇಲೆಕ್ಟ್ರಿಕ್ ವಾಹನ ನೀತಿಯ ದಾಖಲೆಪತ್ರಗಳನ್ನು ಸಲ್ಲಿಸುವಂತೆ ಇ.ಡಿ. ಆಗ್ರಹಿಸಿತ್ತು. ಸರ್ಕಾರದಲ್ಲಿ ಏನಾದರೂ ಲೋಪ ಪತ್ತೆ ಹಚ್ಚುವುದು ಈ ಎಲ್ಲ ತನಿಖಾ ಸುತ್ತಾಟಗಳ ಉದ್ದೇಶವಾಗಿತ್ತು.

ಹಣಕಾಸು ಸಚಿವೆಯ ಅಪಪ್ರಲಾಪ

ವಿಧಾನಸಭೆ ಚುನಾವಣೆ ಘೋಷಣೆಯಾದ ನಂತರ ಬಿಜೆಪಿ ರ‍್ಯಾಲಿಯೊಂದರಲ್ಲಿ ಮಾತನಾಡಿದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಕೆಐಐಎಫ್‌ಬಿ ಮತ್ತು ರಾಜ್ಯ ಬಜೆಟ್ ವಿರುದ್ಧ ಇಲ್ಲಸಲ್ಲದ ಆರೋಪ ಮಾಡಿದ್ದಾರೆ. ಹಣಕಾಸು ಸಚಿವಾಲಯದಡಿ ಕಾರ್ಯ ನಿರ್ವಹಿಸುವ ಇ.ಡಿ. ಅಧಿಕಾರಿಗಳು, ವಿದೇಶ ವಿನಿಮಯ ನಿರ್ವಹಣೆ ಕಾನೂನು (ಫೆಮಾ) ಅಡಿ ಕೇಸ್ ದಾಖಲಿಸಿ ಕೆಐಐಎಫ್‌ಬಿ ಅಧಿಕಾರಿಗಳನ್ನು ವಿಚಾರಣೆಗೆ ಕರೆ ಕಳಿಸಿದರು. ಕೆಐಐಎಫ್‌ಬಿ ಮೂಲಸೌಕರ್ಯ ಯೋಜನೆಗಳಿಗೆ ಬಂಡವಾಳ ಕ್ರೋಡೀಕರಿಸಿ ವೆಚ್ಚ ಮಾಡುವ ಒಂದು ಸರ್ಕಾರಿ ಸಂಸ್ಥೆಯಾಗಿದೆ. ಅದು 20 ಸಾವಿರ ಕೋಟಿ ರೂಪಾಯಿಗೂ ಅಧಿಕ ಮೊತ್ತದಲ್ಲಿ ಹೆದ್ದಾರಿ, ಶಾಲಾ ಕಟ್ಟಡ, ಆಸ್ಪತ್ರೆ ಕಟ್ಟಡ ನಿರ್ಮಾಣ ಮತ್ತಿತರ ಕಾರ್ಯಗಳನ್ನು ಅನುಷ್ಠಾನಗೊಳಿಸಿದೆ. ಇದು ಕೇರಳದಲ್ಲಿ ಅಗಾಧ ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆ ತಂದಿದೆ. ತಲೆಬುಡವಿಲ್ಲದ ಆಪಾದನೆ ಮಾಡುವ ಮೂಲಕ ಈ ಪ್ರಕ್ರಿಯೆಯನ್ನು ಬುಡಮೇಲು ಮಾಡುವುದು ಇ.ಡಿ. ಕ್ರಮದ ಉದ್ದೇಶವಾಗಿದೆ.

ಹೊಚ್ಚಹೊಸ ದಾಳಿ ಕಸ್ಟಮ್ಸ್ ಇಲಾಖೆ ಈಚೆಗೆ ಕೇರಳ ಹೈಕೋರ್ಟ್‌ಗೆ ಒಂದು ಅಫಿಡವಿಟ್ ಸಲ್ಲಿಸುವುದರೊಂದಿಗೆ ಬಂದಿದೆ. ಚಿನ್ನ ಕಳ್ಳಸಾಗಾಟದ ಆರೋಪಿಗಳಲ್ಲಿ ಒಬ್ಬರಾದ ಸ್ವಪ್ನಾ ಸುರೇಶ್ ಅವರ ಗೌಪ್ಯ ಹೇಳಿಕೆಯೊಂದನ್ನು ಅದರಲ್ಲಿ ಉಲ್ಲೇಖಿಸಲಾಗಿದೆ. ಮುಖ್ಯಮಂತ್ರಿ, ವಿಧಾನ ಸಭಾಧ್ಯಕ್ಷರು, ಮತ್ತು ಇತರ ಮೂವರು ಸಚಿವರು ಡಾಲರ್ ಕಳ್ಳಸಾಗಣೆ ಕೇಸ್‌ನಲ್ಲಿ ಒಳಗೊಂಡಿದ್ದಾರೆಂದು ಆಕೆ ಹೇಳಿದ್ದಾರೆಂದು ಅಫಿಡವಿಟ್‌ನಲ್ಲಿ ಉಲ್ಲೇಖಿಸಲಾಗಿದೆ. ಕಸ್ಟಮ್ಸ್ ಸಲ್ಲಿಸಿದ ಅಫಿಡವಿಟ್, ಏನೇನೂ ಸಂಬಂಧವಿಲ್ಲದ ಪ್ರಕರಣಕ್ಕೆ ಸಂಬಂಧಿಸಿದ್ದಾಗಿದೆ. ಅದು ಸ್ವಪ್ನಾ ಸುರೇಶ್‌ಗೆ ನ್ಯಾಯಾಂಗ ಕಸ್ಟಡಿಯಲ್ಲಿ ಒದಗಿಸಿದ ಭದ್ರತೆಯನ್ನು ಕುರಿತಂತೆ ಕೆಳಗಣ ನ್ಯಾಯಾಲಯವೊಂದರ ಕೆಲವು ಟಿಪ್ಪಣಿಗಳ ವಿರುದ್ಧ ಜೈಲುಗಳ ಮಹಾನಿರ್ದೇಶಕರು ಹೈಕೋರ್ಟಿಗೆ ಸಲ್ಲಿಸಿದ ಅಪೀಲಿಗೆ ಸಂಬಂಧಪಟ್ಟದ್ದು. ಮುಖ್ಯಮಂತ್ರಿ ಹಾಗೂ ಇತರರನ್ನು ಕುರಿತಂತ ದಾವೆಗಳನ್ನು ಪುಷ್ಟೀಕರಿಸುವ ಯಾವುದೇ ಸಾಕ್ಷ್ಯ ಸಿಕ್ಕಿಲ್ಲವೆಂದು ಒಪ್ಪಿಕೊಂಡರೂ ಕಸ್ಟಮ್ಸ್‌ನವರ ಈ ಅಫಿಡವಿಟ್ ಮುಖ್ಯಮಂತ್ರಿಗಳು ಮತ್ತು ಇತರ ಸರಕಾರೀ ನಿರ್ವಾಹಕರನ್ನು ಸಿಲುಕಿಸಲು ದಾರಿ ಬಿಟ್ಟು ಹೋಗಿದೆ.

ಒತ್ತಡಕ್ಕೆ ಪುರಾವೆ

ಇಂಥ ಹೇಳಿಕೆ ನೀಡಲು ಸ್ವಪ್ನಾ ಸುರೇಶ್ ಮೇಲೆ ಒತ್ತಡ ಹಾಕಲಾಯಿತು ಎನ್ನುವುದಕ್ಕೆ ಸಾಕಷ್ಟು ಪುರಾವೆಯಿದೆ. ವಿದೇಶದಲ್ಲಿನ ಹಣಕಾಸು ವ್ಯವಹಾರಗಳಲ್ಲಿ ಮುಖ್ಯಮಂತ್ರಿಗಳ ಹೆಸರನ್ನು ಸಿಲುಕಿಸಲು ತನ್ನ ಮೇಲೆ ಒತ್ತಡ ಹೇರಲಾಗಿತ್ತು ಎಂದು ಆಕೆ ಹೇಳಿರುವ ದನಿ ರೆಕಾರ್ಡಿಂಗ್ ಕಳೆದ ವರ್ಷ ನವೆಂಬರ್ 18ರಂದು ಬಹಿರಂಗಕ್ಕೆ ಬಂದಿತ್ತು. ಇ.ಡಿ.ಯ ಸಹಾಯಕ ನಿರ್ದೇಶಕರೊಬ್ಬರು ಒತ್ತಡ ಹೇರಿದ್ದನ್ನು ವಿಚಾರಣೆ ವೇಳೆ ಹಾಜರಿದ್ದ ಒಬ್ಬ ಮಹಿಳಾ ಪೊಲೀಸ್ ಕಾನ್‌ಸ್ಟೇಬಲ್ ದೃಢಪಡಿಸಿದ್ದಾರೆ.

ಕೇಂದ್ರೀಯ ಸಂಸ್ಥೆಗಳುಇಂಥ ಕೊಳಕು ತಂತ್ರಗಳನ್ನು ಕೈಗೊಳ್ಳುವುದು ಮೇಲಿನವರಿಂದ ಸೂಚನೆ ಇಲ್ಲದೆ ಸಾಧ್ಯವೇ ಇಲ್ಲ. ಅನುಷ್ಠಾನ ನಿರ್ದೇಶನಾಲಯುವು (ಇ.ಡಿ.) ರಾಜಕೀಯ ವಿರೋಧಿಗಳನ್ನು ಹಣಿಯಲು ಬಿಜೆಪಿ ಸರ್ಕಾರದ ಬಳಿಯಿರುವ ದಾಳಿ ಸಾಧನವಾಗಿದೆ. ಬಹುತೇಕ ಎಲ್ಲ ಪ್ರತಿಪಕ್ಷಗಳ ನಾಯಕರೂ ಇ.ಡಿ. ವಿಚಾರಣೆಗೆ ಅಥವ ಆರೋಪಗಳಿಗೆ ಒಳಪಟ್ಟಿದ್ದಾರೆ. ಅಖಿಲೇಶ್ ಯಾದವ್ (ಸಮಾಜವಾದಿ ಪಕ್ಷ), ಭೂಪಿಂದರ್ ಹೂಡಾ ಮತ್ತು ಡಿ.ಕೆ. ಶಿವಕುಮಾರ್ (ಕಾಂಗ್ರೆಸ್), ಫರೂಕ್ ಅಬ್ದುಲ್ಲಾ (ನ್ಯಾಷನಲ್ ಕಾನ್ಫರೆನ್ಸ್), ಮೆಹಬೂಬಾ ಮುಫ್ತಿ (ಪಿಡಿಪಿ), ತೇಜಸ್ವಿ ಯಾದವ್, ಮೀಸಾ ಭಾರತಿ (ಆರ್‌ಜೆಡಿ) ... ಹೀಗೆ ಈ ಪಟ್ಟಿ ದೊಡ್ಡದಿದೆ. ಟಿಎಂಸಿಯ ಮುಕುಲ್ ರಾಯ್ ಮತ್ತು ಕಾಂಗ್ರೆಸ್‌ನ ಹಿಮಂತ ಬಿಶ್ವ ಶರ್ಮಾ ಕೂಡ ಇದೇ ರೀತಿಯ ಕಿರುಕುಳಕ್ಕೆ ಒಳಪಟ್ಟಿದ್ದರು. ಆದರೆ ಅವರು ಬಿಜೆಪಿ ಸೇರಿ ಮುಂದಿನ ಕ್ರಮದಿಂದ ತಪ್ಪಿಸಿ ಕೊಂಡರು.

ರಾಹುಲ್ ಗಾಂಧಿ ಅಂಡ್ ಕಂಪೆನಿ

ಎಲ್‌ಡಿಎಫ್ ಸರ್ಕಾರದ ವಿರುದ್ಧ ಶೀಘ್ರ ತನಿಖೆ ನಡೆಯುಬೇಕು ಹಾಗೂ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕೆಂದು ಕಾಂಗ್ರೆಸ್ ಪಕ್ಷ ದೊಡ್ಡ ದನಿಯಲ್ಲಿ ಆಗ್ರಹಿಸುತ್ತ ಬಂದಿದೆ. ರಾಹುಲ್ ಗಾಂಧಿ ಕೂಡ ಅದಕ್ಕೆ ದನಿಗೂಡಿಸಿದ್ದರು. ಹಾಗೆ ಮಾಡುವ ಮೂಲಕ ರಾಹುಲ್ ಗಾಂಧಿ ಅಂಡ್ ಕಂಪೆನಿ, ಬಿಜೆಪಿಯ ಆಟಕ್ಕೆ ಬಲಿಯಾಗಿದ್ದಾರೆ. ಮಾತ್ರವಲ್ಲದೆ ಇತರ ರಾಜ್ಯಗಳಲ್ಲಿ ಕಾಂಗ್ರೆಸ್ ನಾಯಕರ ವಿರುದ್ಧ ಇ.ಡಿ. ಹೂಡಿರುವ ಹೂಟಕ್ಕೆ ಕಾನೂನು ಸಮ್ಮತತೆ ತಂದುಕೊಟ್ಟಿದ್ದಾರೆ.

ಇ.ಡಿ.ಯು ಹಣಕಾಸು ಸಚಿವಾಲಯದ ಕಂದಾಯ ಇಲಾಖೆಯಡಿ ಕಾರ್ಯನಿರ್ವಹಿಸುವ ಸಂಸ್ಥೆ. ಅದು ಹೆಚ್ಚೆಚ್ಚಾಗಿ ಯಾವುದೇ ಕಾನೂನಿನ ಗಡಿಯಿಲ್ಲದ ರೀತಿ ಲಂಗುಲಗಾಮಿಲ್ಲದೆ ಕಾರ್ಯಾಚರಿಸುತ್ತಿದೆ. ಅದಕ್ಕೆ ಯಾವುದೇ ಶಾಸನಾತ್ಮಕ ಕಾನೂನಿನ ಬೆಂಬಲವೂ ಇಲ್ಲ. ಆದರೂ ದಾಳಿಗಳನ್ನು ನಡೆಸುವುದು, ಶೋಧ ಮಾಡುವುದು, ಬಂಧನ ಮತ್ತು ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದೇ ಮೊದಲಾದ ಅಧಿಕಾರ ಚಲಾಯಿಸುತ್ತದೆ. ಹಣದ ಮಡಿ ತಡೆ ಕಾನೂನು (ಪಿಎಂಎಲ್‌ಎ) ಮತ್ತು ಫೆಮಾ ಅಡಿಯಲ್ಲಿನ ಕೇಸ್‌ಗಳ ತನಿಖೆ ಹೆಸರಲ್ಲಿ ಇವೆಲ್ಲವನ್ನೂ ಇ.ಡಿ. ಮಾಡುತ್ತದೆ.

ಇ.ಡಿ.ಯು ಹಾಲಿ ನಿರ್ದೇಶಕ ಸಂಜಯ್ ಕುಮಾರ್ ಮಿಶ್ರಾ, ಆದಾಯ ತೆರಿಗೆ ಇಲಾಖೆಯ ಒಬ್ಬ ಮಾಜಿ ಆಯುಕ್ತರು. ಇ.ಡಿ. ನಿರ್ದೇಶಕರ ಅಧಿಕಾರ ಅವಧಿ ಎರಡು ವರ್ಷಕ್ಕೆ ನಿಗದಿಯಾಗಿರುತ್ತದೆ. ಆದರೆ ಮಿಶ್ರಾಗೆ 2020 ನವೆಂಬರ್‌ನಿಂದ ಒಂದು ವರ್ಷದ ವಿಸ್ತರಣೆ ನೀಡಲಾಗಿದೆ. ಇದರಿಂದಾಗಿ ತನ್ನ ಬಾಸ್‌ಗಳ ಆಶಯಗಳನ್ನು ಈಡೇರಿಸಲು ಅವರು ಬದ್ಧರಾಗಿದ್ದಾರೆ. ಇ.ಡಿ. ಗೆ ಒಂದು ಕಾನೂನು ಸನ್ನದ್ದು ಅಗತ್ಯ, ಈ ಮೂಲಕ ಅದು ಸೂಕ್ತ ವಿಧಿ–ವಿಧಾನಗಳನ್ನು ಅನುಸರಿಸುವಂತೆ ಮತ್ತು ತನ್ನ ಕ್ರಿಯೆಗಳಿಗೆ ಉತ್ತರದಾಯಿಯಾಗುವಂತೆ ಮಾಡಬೇಕಾಗಿದೆ ಎನ್ನುವುದನ್ನು ಕೇರಳದ ಅನುಭವವಗಳು ತೋರಿಸಿಕೊಟ್ಟಿವೆ.

ಬಿಜೆಪಿ, ಕಾಂಗ್ರೆಸ್ ಮತ್ತು ಕೇಂದ್ರೀಯ ಸಂಸ್ಥೆಗಳು ತಾಳಮೇಳದೊಂದಿಗೆ ಎಲ್‌ಡಿಎಫ್ ಸರ್ಕಾರದ ವಿರುದ್ಧ ಒಟ್ಟಾಗಿ ಎತ್ತಿದ್ದ ಮೊದಲ ಹಂತದ ಕಳ್ಳಸಾಗಣೆ ಮತ್ತು ಭ್ರಷ್ಟಾಚಾರ ಆರೋಪಗಳನ್ನು ಕೇರಳದ ಜನರು ನಿರ್ಣಾಯಕವಾಗಿ ತಿರಸ್ಕರಿಸಿದ್ದಾರೆ. ಆ ಚುನಾವಣೆಗಳಲ್ಲಿ ಎಲ್‌ಡಿಎಫ್ ಭಾರಿ ಜಯಭೇರಿ ಬಾರಿಸಿತ್ತು. ಇದೀಗ ಮತ್ತೆ ವಿಧಾನಸಭೆ ಚುನಾವಣೆಗಳಲ್ಲಿ ಈ ಅಪವಿತ್ರ ತ್ರಿವಳಿ ಕೂಟಕ್ಕೆ ಮರೆಯಲಾರಂತಹ ಪಾಠ ಕಲಿಸಲಿದ್ದಾರೆ.

ಅನು: ವಿಶ್ವ



ಕರ್ನಾಟಕದ 2021-22ರ ಬಜೆಟ್ ಬಗ್ಗೆ 'ತೆರಿಗೆ ಮುಕ್ತ ಬಜೆಟ್' ಎಂದು ಮತ್ತು ಇದೊಂದು ದೊಡ್ಡ ಸಾಧನೆ ಎನ್ನುವ ರೀತಿಯಲ್ಲಿ ಅದನ್ನು ವರ್ಣಿಸಲಾಗುತ್ತಿದೆ. ಇಲ್ಲಿರುವ ತಮಾಷೆಯನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಜಿ.ಎಸ್.ಟಿ ಅಸ್ತಿತ್ವಕ್ಕೆ ಬಂದ ಮೇಲೆ ತೆರಿಗೆ ವಿಧಿಸುವ ಅಥವಾ ತೆರಿಗೆ ದರಗಳನ್ನು ಬದಲಾಯಿಸುವ ಅಧಿಕಾರವನ್ನೇ ರಾಜ್ಯ ಸರ್ಕಾರಗಳು ಕಳೆದುಕೊಂಡಿವೆ.

ಒಟ್ಟಾರೆ ಕರ್ನಾಟಕದ ಬಜೆಟ್ ದುರ್ಬಲವಾಗಿದ್ದರೆ, ಅಭಿವೃದ್ಧಿ ಕುಂಟಿತಗೊಂಡಿದ್ದರೆ ಇದಕ್ಕೆ ಕೋವಿಡ್ ಮಹಾಸೋಂಕು ಕಾಲು ಭಾಗ ಕಾರಣವಾಗಿದ್ದರೆ, ಒಕ್ಕೂಟ ಸರ್ಕಾರವು ಮಾಡುತ್ತಿರುವ ಅನ್ಯಾಯ ಉಳಿದ ಮುಕ್ಕಾಲು ಭಾಗಕ್ಕೆ ಕಾರಣವಾಗಿದೆ. ಕರ್ನಾಟಕದ 2021-22ರ ಬಜೆಟ್ ಸಂವಿಧಾನಬದ್ಧ ಒಕ್ಕೂಟ ತತ್ವವನ್ನು ಭಾರತ ಸರ್ಕಾರ ಹೇಗೆ ಧಿಕ್ಕರಿಸುತ್ತಿದೆ ಎಂಬ ಪ್ರಶ್ನೆಯನ್ನು ನಮ್ಮ ಮುಂದಿಡುತ್ತದೆ. ಈ ಬಗ್ಗೆ ರಾಜ್ಯದಲ್ಲಿ ಹೆಚ್ಚಿನ ಚರ್ಚೆಯಾಗುವ ಅಗತ್ಯವಿದೆ. ಒಂದು ದೇಶ-ಒಂದು ಚುನಾವಣೆ'ಗಿಂತ ನಿಜಕ್ಕೂ ವಿಧಾನಸಭೆಯಲ್ಲಿ ಚರ್ಚೆಯಾಗಬೇಕಾಗಿರುವ ರಾಜ್ಯದ ಜ್ವಲಂತ ಸಮಸ್ಯೆಯೆಂದರೆ ಭಾರತ ಸರ್ಕಾರದ ಒಕ್ಕೂಟ ವಿರೋಧಿ ನೀತಿ.



ಕೃಪೆ: ಪಿ. ಮಹಮ್ಮದ್, ವಾ.ಭಾ

ರಾಜ್ಯ ಬಜೆಟ್: 2021-22

ಸಾಲದ ಬಲೆಯಲ್ಲಿ ಕರ್ನಾಟಕ

ಪ್ರೊ. ಟಿ.ಆರ್. ಚಂದ್ರಶೇಖರ

ಬಜೆಟ್ ಎನ್ನುವುದು ಒಂದು ಆರ್ಥಿಕತೆಯ ಆಯ-ವ್ಯಯಗಳ ವಿವರವಾದ ಪಟ್ಟಿ ಮಾತ್ರವಲ್ಲ. ಒಂದು ಆರ್ಥಿಕತೆಯಲ್ಲಿ ಅಭಿವೃದ್ಧಿಯ ದಿಕ್ಕು-ದಿಶೆಗಳನ್ನು ಅದು ನಿರ್ಧರಿಸುತ್ತದೆ. ಆರ್ಥಿಕತೆಯ ಸ್ಥಿತಿಗತಿ ಬಗ್ಗೆ ವಿವರಗಳನ್ನು ಅದು ಒಳಗೊಂಡಿರುತ್ತದೆ. ಅಭಿವೃದ್ಧಿ ಏಕೆ, ಎಲ್ಲಿ ಕುಂಟುತ್ತಿದೆ ಎಂಬುದರ ಸೂಚನೆಯನ್ನು ಅದು ನೀಡುತ್ತದೆ. ಆದರೆ ಮಾಧ್ಯಮಗಳು ಮತ್ತು ವ್ಯಾಪಾರಿ-ವಾಣಿಜ್ಯ ಸಂಸ್ಥೆಗಳು ಬಜೆಟ್ ಕುರಿತ ಚರ್ಚೆಯಲ್ಲಿ ತೆರಿಗೆಗಳಿಗೆ ಸಂಬಂಧಿಸಿದ ವಿವರಗಳ ಬಗ್ಗೆ ಮಾತ್ರ ಹೆಚ್ಚು ಮಹತ್ವ ನೀಡುತ್ತವೆ. ಉದಾ: ಕರ್ನಾಟಕದ 2021-22ರ ಬಜೆಟ್ ಬಗ್ಗೆ 'ತೆರಿಗೆ ಮುಕ್ತ ಬಜೆಟ್' ಎಂದು ಮತ್ತು ಇದೊಂದು ದೊಡ್ಡ ಸಾಧನೆ ಎನ್ನುವ ರೀತಿಯಲ್ಲಿ ಅದನ್ನು ವರ್ಣಿಸಲಾಗುತ್ತಿದೆ. ಇಲ್ಲಿರುವ ತಮಾಷೆಯನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಜಿ.ಎಸ್.ಟಿ ಅಸ್ತಿತ್ವಕ್ಕೆ ಬಂದ ಮೇಲೆ ತೆರಿಗೆ ವಿಧಿಸುವ ಅಥವಾ ತೆರಿಗೆ ದರಗಳನ್ನು ಬದಲಾಯಿಸುವ ಅಧಿಕಾರವನ್ನೇ ರಾಜ್ಯ ಸರ್ಕಾರಗಳು ಕಳೆದುಕೊಂಡಿವೆ. ತೈಲದ ಮೇಲಿನ ತೆರಿಗೆಗಳು ಜಿಎಸ್‌ಟಿಯ ವ್ಯಾಪ್ತಿಯಲ್ಲಿ ಇಲ್ಲದ ಕಾರಣ ಅವುಗಳ ಮೇಲೆ ಮಾತ್ರ ರಾಜ್ಯ ಸರ್ಕಾಗಳು ತೆರಿಗೆ ವಿಧಿಸಬಹುದು.

ಕರ್ನಾಟಕದ ಒಟ್ಟು ರಾಜ್ಯ ಆಂತರಿಕ ಉತ್ಪನ್ನ (ಜಿ.ಎಸ್.ಡಿ.ಪಿ) ಹಾಗೂ ಕಳೆದ ಮೂರು ವರ್ಷಗಳ ಅದರ ಬೆಳವಣಿಗೆಯ ದರವನ್ನು ಕೋಷ್ಟಕ 1ರಲ್ಲಿ ಕೊಡಲಾಗಿದೆ.

ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡಿರುವಂತೆ 2020-21ರಲ್ಲಿದ್ದ ರೂ. 18.05 ಲಕ್ಷ ಕೋಟಿಯಷ್ಟಿದ್ದ ಒಟ್ಟು ರಾಜ್ಯ ಆಂತರಿಕ ಉತ್ಪನ್ನವು 2021-22ರಲ್ಲಿ ರೂ. 17.02 ಲಕ್ಷ ಕೋಟಿಗೆ ಕುಸಿಯಲಿದೆ ಎಂದು ಬಜೆಟಿನಲ್ಲಿ ಅಂದಾಜಿಸಲಾಗಿದೆ. ಇಲ್ಲಿನ ಕುಸಿತದ ಪ್ರಮಾಣ ಶೇ.(-)5.7. ಇದನ್ನು ಸರಿಪಡಿಸುವಲ್ಲಿ 2021-22ರ ಬಜೆಟ್ಟಿನಲ್ಲಿ ಏನು ಪ್ರಯತ್ನ ನಡೆಸಲಾಗಿದೆ ಎಂಬುದನ್ನು ಪರಿಶೀಲಿಸುವ ಅಗತ್ಯವಿದೆ.

1. ಮೊದಲನೆಯದಾಗಿ ಈ ಸರ್ಕಾರವು 2021-22ರಲ್ಲಿ ಸಾರ್ವಜನಿಕ ವೆಚ್ಚವನ್ನು ಹೆಚ್ಚಿಸುವಲ್ಲಿ ಪೂರ್ಣವಾಗಿ ಎಡವಿದೆ. ಬಜೆಟ್ ಕುರಿತ ಚರ್ಚೆಯಲ್ಲಿ ಮುಖ್ಯವಾಗಿ ಪರಿಗಣಿಸಬೇಕಾದ ಸಂಗತಿಯೆಂದರೆ ಅಲ್ಲಿನ ಸಾರ್ವಜನಿಕ ವೆಚ್ಚ. ಇದರ ಬೆಳವಣಿಗೆಯು 2016-17 ರಿಂದಲೂ ಸರಾಸರಿ ಶೇ. 10ಕ್ಕಿಂತ ಅಧಿಕವಿತ್ತು. ಆದರೆ 2020-21 ರಿಂದ 2021-22ರಲ್ಲಿ ಇದರ ಬೆಳವಣಿಗೆಯು ಶೇ. 3.79ಕ್ಕಿಳಿದಿದೆ. ಈ ಸಾರ್ವಜನಿಕ ವೆಚ್ಚದ ಕನಿಷ್ಠ ಬೆಳವಣಿಗೆಯಿಂದ ಆರ್ಥಿಕ ಪುನಶ್ಚೇತನ ಹೇಗೆ ನಡೆಯಬಹುದು ಎಂಬುದನ್ನು ಯಾರೂ ಊಹಿಸಿಕೊಳ್ಳಬಹುದು. ಆರ್ಥಿಕ ಪುನಶ್ಚೇತನ ಯಾತನಮಯವಾಗಲಿದೆ.
2. ನಮ್ಮ ರಾಜ್ಯದಲ್ಲಿ ಸನಾತನ ಅಸಮಾನತೆಯಿಂದ ಮತ್ತು ಚಾರಿತ್ರಿಕವಾಗಿ ಕಳಂಕ ಹೊತ್ತುಕೊಂಡು ದುಸ್ಥಿತಿ ಅನುಭವಿಸುತ್ತಿರುವ ಪ(ರಿಶಿಷ್ಟ) ಜಾ.(ತಿ) ಮತ್ತು ಪ. ಪಂ.(ಗಡ) ಸಮುದಾಯಗಳ ಪ್ರಮಾಣ ಒಟ್ಟು ಜನಸಂಖ್ಯೆಯಲ್ಲಿ ಶೇ.24.1 ರಷ್ಟಿದೆ(ಜನಗಣತಿ 2011). ಈ ವರ್ಗದ ಅಭಿವೃದ್ಧಿಗಾಗಿ ಚಾಲ್ತಿಯಲ್ಲಿರುವ ಕಾರ್ಯಕ್ರಮಗಳು ಪ. ಜಾ. ಮತ್ತು ಬುಡಕಟ್ಟು ಉಪಯೋಜನೆಗಳು. ಇದಕ್ಕೆ 2017-18ರಲ್ಲಿ ರೂ. 28,703 ಕೋಟಿ, 2019-20ರಲ್ಲಿ ರೂ. 30,444 ಕೋಟಿ ನೀಡಲಾಗಿತ್ತು. ಆದರೆ ಬಿ. ಎಸ್. ಯಡಿಯೂರಪ್ಪ ಸರ್ಕಾರವು ಈ ಉಪಯೋಜನೆಗಳಿಗೆ 2020-21ರಲ್ಲಿ ನೀಡಿದ್ದ ಮೊತ್ತ 27,699 ಕೋಟಿಗೆ ಕಡಿತ ಮಾಡಿದ್ದರೆ ಈಗ 2021-22ರಲ್ಲಿ ರೂ. 26,004 ಕೋಟಿ ಗೆ ಕಡಿತಗೊಳಿಸಿದೆ. ಈ ವರ್ಗದ ಜನರ ಬದುಕನ್ನು ಉತ್ತಮಪಡಿಸದೆ ಆರ್ಥಿಕ ಅಭಿವೃದ್ಧಿ ಸಾಧ್ಯವೆ? ಏಕೆಂದರೆ ರಾಜ್ಯದ ಕೃಷಿಯ ನಿಜದುಡಿಮೆಯ ಮೂಲ ಇವರಾಗಿದ್ದಾರೆ. ಏಕೆಂದರೆ ರಾಜ್ಯದಲ್ಲಿನ ಒಟ್ಟು ಭೂರಹಿತ ದಿನಗೂಲಿ ದುಡಿಮೆಗಾರರಲ್ಲಿ(71.55 ಲಕ್ಷ)ಇವರ ಪ್ರಮಾಣ ಶೇ. 41.5(29.91 ಲಕ್ಷ). ಇದರಲ್ಲಿ ಅರ್ಧಕ್ಕಿಂತ ಹೆಚ್ಚು ಮಹಿಳೆಯರಿದ್ದಾರೆ. ಈ ದುಡಿಮೆಗಾರರ ಬದುಕು ಉತ್ತಮವಾಗದಿದ್ದರೆ ಆರ್ಥಿಕತೆಯಲ್ಲಿ ಅಭಿವೃದ್ಧಿ ಕುಂಟುತಗೊಳ್ಳುತ್ತದೆ. ಈ ಬಜೆಟ್ಟಿನಲ್ಲಿ ಪ. ಜಾ. ಮತ್ತು ಪ. ಪಂ. ಉಪಯೋಜನೆಗಳಿಗೆ ಅನುದಾನವನ್ನು ಕಡಿತ ಮಾಡಿ ಅಭಿವೃದ್ಧಿಗೆ ಕಂಟಕವನ್ನುಂಟು ಮಾಡಲಾಗಿದೆ.


ಕೋಷ್ಟಕ 1: ಕರ್ನಾಟಕದ ಒಟ್ಟು ರಾಜ್ಯ ಆಂತರಿಕ ಉತ್ಪನ್ನ (ಜಿಎಸ್‌ಡಿಪಿ) ಹಾಗೂ ಅದರ ಬೆಳವಣಿಗೆಯ ದರ

ವರ್ಷ	2018-19	2019-20	2020-21	2021-22*
ಜಿ.ಎಸ್.ಡಿ.ಪಿ (ಲಕ್ಷ ಕೋಟಿಗಳಲ್ಲಿ)	14.08	16.98	18.05	17.02
ವಾರ್ಷಿಕ ಬೆಳವಣಿಗೆ (ಶೇಕಡ)	--	20.59	6.3	(-)5.7

* ಬಜೆಟ್ ಅಂದಾಜು ಮೂಲ: ಕರ್ನಾಟಕ ಸರ್ಕಾರ, ಬಜೆಟ್ ಸಂಪುಟಗಳು

3. ರಾಜ್ಯದಲ್ಲಿ ಮಹಿಳೆಯರನ್ನು ಮತ್ತು ಮಕ್ಕಳನ್ನು ಕಾಡುತ್ತಿರುವ ಅಪೌಷ್ಟಿಕತೆಯ ಪ್ರಮಾಣ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ 4ನೆಯ(2015-16) ಮತ್ತು 5ನೆಯ ಸುತ್ತುಗಳಲ್ಲಿ(2019-2020) ಏರಿಕೆಯಾಗಿರುವುದನ್ನು ಸರ್ಕಾರವು ಗಮನಿಸಿಲ್ಲ. ಈ ಬಜೆಟ್ಟಿನಲ್ಲಿ ಅಪೌಷ್ಟಿಕತೆ ನಿವಾರಣೆ ಬಗ್ಗೆ ನಿರ್ದಿಷ್ಟ ಕಾರ್ಯಕ್ರಮಗಳಿಲ್ಲ. ಕಳೆದ 5 ವರ್ಷಗಳಲ್ಲಿ 6 ರಿಂದ 59 ತಿಂಗಳು ವಯೋಮಾನದ ಒಟ್ಟು ಮಕ್ಕಳಲ್ಲಿ ಅನಿಮಿಯ ಎದುರಿಸುತ್ತಿರುವ ಮಕ್ಕಳ ಪ್ರಮಾಣ 2015-16ರಲ್ಲಿ ಶೇ. 60.9 ರಷ್ಟಿದ್ದುದು 2019-2020ರಲ್ಲಿ ಶೇ. 65.5 ಕ್ಕೇರಿದ್ದರೆ 15 ರಿಂದ 49 ವರ್ಷಗಳ ವಯೋಮಾನಮದ ಒಟ್ಟು ಮಹಿಳೆಯರಲ್ಲಿ ಅನಿಮಿಯ ಪ್ರಮಾಣವು ಕಳೆದ ಐದು ವರ್ಷಗಳಲ್ಲಿ ಶೇ. 44.8 ರಿಂದ ಶೇ. 47.8 ಕ್ಕೇರಿದೆ. ಇದಕ್ಕಿಂತ ಆಘಾತಕಾರಿ ಸಂಗತಿಯೆಂದರೆ ರಾಜ್ಯದಲ್ಲಿನ ಅತಿಹಿಂದುಳಿದ ಕಲಬುರಗಿ(ಶೇ.75.1), ರಾಯಚೂರು(ಶೇ.73.6), ಯಾದಗಿರಿ(ಶೇ.76), ಕೊಪ್ಪಳ(ಶೇ.70)ಜಿಲ್ಲೆಗಳಲ್ಲಿ ಶೇ.75 ರಷ್ಟು ಮಕ್ಕಳು ಅನಿಮಿಯ ಎದುರಿಸುತ್ತಿದ್ದಾರೆ. ಇದರ ಬಗ್ಗೆ ಬಜೆಟ್ 2021-22ರಲ್ಲಿ ವಿಶೇಷ ಕಾರ್ಯಕ್ರಮಗಳಿಲ್ಲ. ಈ ಜಿಲ್ಲೆಗಳನ್ನೊಳಗೊಂಡ ಪ್ರದೇಶಕ್ಕೆ 'ಕಲ್ಯಾಣ ಕರ್ನಾಟಕ' ಎಂಬ ಹೆಸರಿಡಲಾಗಿದೆ. ಆದರೆ ಅಲ್ಲಿನ ಮಕ್ಕಳ ಕಲ್ಯಾಣ ಕೇವಲ ಗಗನಕುಸಮವಾಗಿದೆ. ಮಹಿಳಾ ಬಜೆಟ್ ಎಂಬುದು ಕೇವಲ ಅಲಂಕಾರಕ್ಕಿದ್ದಂತೆ ಕಾಣುತ್ತದೆ.

ಈ ಬಜೆಟ್ಟಿನಲ್ಲಿ ನಗರಪ್ರದೇಶದ, ಉನ್ನತ ವರಮಾನದ, ಉದ್ಯಮ ನಡೆಸಬಲ್ಲ ಮಹಿಳೆಯರಿಗಾಗಿ ವಿಶೇಷ ಯೋಜನೆಗಳನ್ನು ಘೋಷಿಸಲಾಗಿದೆ. ಆದರೆ ರಾಜ್ಯದಲ್ಲಿನ ಸಾಗುವಳಿ ಮಾಡುವ ಮತ್ತು ಭೂರಹಿತ ಕೃಷಿ ದಿನಗೂಲಿ ಮಾಡಿ ಬದುಕುತ್ತಿರುವ 56 ಲಕ್ಷ ಮಹಿಳೆಯರಿಗೆ ಬಜೆಟ್ಟಿನಲ್ಲಿ ಯಾವ ಕಾರ್ಯಕ್ರಮಗಳೂ ಇಲ್ಲ. ಇದು ಈ ಬಜೆಟ್ಟಿನ ದೊಡ್ಡ ವೈಫಲ್ಯವಾಗಿದೆ.



ಕೃಪೆ: ಪಿ. ಮಹಮ್ಮದ್, ವಾ.ಭಾ

4. ಈ ಬಜೆಟ್ಟಿನಲ್ಲಿ ಸರ್ಕಾರ ಎತ್ತುತ್ತಿರುವ ಸಾಲ ರೂ. 71,331 ಕೋಟಿ. ಇದು ಒಟ್ಟು ಸಾರ್ವಜನಿಕ ವೆಚ್ಚವಾದ ರೂ. 2,46,207 ಕೋಟಿಯಲ್ಲಿ ಶೇ. 28.97 ರಷ್ಟಾಗುತ್ತದೆ. ಸಾರ್ವಜನಿಕ ಹಣಕಾಸು ಶಾಸ್ತ್ರದಲ್ಲಿನ ಮೊದಲ ಪಾಠವೆಂದರೆ ಸರ್ಕಾರಕ್ಕೆ ಸಂಪನ್ಮೂಲದ ಪ್ರಮುಖ ಮೂಲ ತೆರಿಗೆಗಳು. ಆದರೆ ಒಕ್ಕೂಟ(ಭಾರತ) ಸರ್ಕಾರದ ವಿತ್ತಮಂತ್ರಿಗಳು ತಮ್ಮ 2021-22ರ ಬಜೆಟ್ ಭಾಷಣದಲ್ಲಿ ನಾವು ಇಂದು ಸಂಪನ್ಮೂಲಕ್ಕೆ ತೆರಿಗೆಗಳನ್ನು ಅವಲಂಬಿಸದೆ ಸಾಲ ಮತ್ತು ಆಸ್ತಿ ಮಾರಾಟವನ್ನು (ಮಾನಿಟೈಸೇಶನ್ ಆಫ್ ಅಸೆಟ್ಸ್), ನೆಚ್ಚಿಕೊಂಡಿದ್ದೇವೆ ಎಂದು ಹೇಳಿದ್ದಾರೆ (ಒಕ್ಕೂಟ ಬಜೆಟ್ 2021-22 ಭಾಷಣ. ಪ್ಯಾರ 141) ಅದರಂತೆ ಬಿಎಸ್.ವೈಅವರು ಕೂಡ ತಮ್ಮ ಬಜೆಟ್ಟಿನಲ್ಲಿ ಸಂಪನ್ಮೂಲಕ್ಕೆ ಸಾಲದ ಮೊರೆ ಹೋಗಿದ್ದಾರೆ.
5. ಹಣಕಾಸು ನಿರ್ವಹಣೆಯಲ್ಲಿ ಶಿಸ್ತನ್ನು ಸಾಧಿಸಿಕೊಳ್ಳುವುದಕ್ಕಾಗಿ ರಾಜ್ಯವು 2002 ರಲ್ಲಿ ಕರ್ನಾಟಕ ವಿತ್ತೀಯ ಜವಾಬ್ದಾರಿ ಕಾಯಿದೆಯನ್ನು(ಕೆ.ಎಫ್.ಆರ್.ಎ) ಜಾರಿಗೆ ತಂದಿತು. ಅದರಲ್ಲಿನ ಸಾರ್ವಜನಿಕ ಹಣಕಾಸಿಗೆ ಸಂಬಂಧಿಸಿದ ಮೂರು ಷರತ್ತುಗಳೆಂದರೆ ರೆವಿನ್ಯೂ ಖಾತೆಯಲ್ಲಿ ಆಧಿಕ್ಯವನ್ನು ಕಾಯ್ದುಕೊಳ್ಳಬೇಕು. ಕೊರತೆ ಕಾಣಬಾರದು. ಎರಡನೆಯದು ವಿತ್ತೀಯ ಕೊರತೆಯು ಜಿ.ಎಸ್.ಡಿ.ಪಿ ಯ ಶೇ.3ನ್ನು ಮೀರಬಾದರು. ಮೂರನೆಯದಾಗಿ ಒಟ್ಟು ಸಾರ್ವಜನಿಕ ಋಣವು ಜಿ.ಎಸ್.ಡಿ.ಪಿ ಯ ಶೇ. 25ನ್ನು ಮೀರಬಾರದು. ಈ ಮೂರು ಮಾನದಂಡಗಳನ್ನು ಕರ್ನಾಟಕವು ಜತನದಿಂದ ಪಾಲಿಸುತ್ತಾ ಬಂದಿತ್ತು. ಆದರೆ 2021-22ರಲ್ಲಿ ಮೂರರಲ್ಲಿಯೂ ಕರ್ನಾಟಕ ವೈಫಲ್ಯವನ್ನು ಅನುಭವಿಸಿದೆ. ಒಟ್ಟಾರೆ ಒಂದು ಬಗೆಯ ಕಳಂಕವನ್ನು ಹೊತುಕೊಳ್ಳುವಂತಾಗಿದೆ. ಕಳೆದ 18 ವರ್ಷಗಳಿಂದ ಸತತವಾಗಿ ರಾಜ್ಯವು ರೆವಿನ್ಯೂ ಖಾತೆಯಲ್ಲಿ ಕೊರತೆಯುಂಟಾಗದಂತೆ ಹಣಕಾಸನ್ನು ನಿರ್ವಹಿಸುತ್ತಾ ಬಂದಿದೆ. ಆದರೆ 2020-21ರಲ್ಲಿ ರೆವಿನ್ಯೂ ಕೊರತೆ ಜಿ.ಎಸ್.ಡಿ.ಪಿ ಯ ಶೇ. 1.08 ರಷ್ಟಾಗಿದೆ. ಇದೇ ರೀತಿಯಲ್ಲಿ ವಿತ್ತೀಯ ಕೊರತೆಯನ್ನು ರಾಜ್ಯವು ಜಿ.ಎಸ್.ಡಿ.ಪಿ ಯ ಶೇ. 3 ರೊಳಗೆ ಕಾಯ್ದುಕೊಂಡು ಬಂದಿತ್ತು. ಆದರೆ 2021-22ರಲ್ಲಿ ಇದು ಶೇ. 3.23 ರಷ್ಟಾಗಿದೆ. ಎಲ್ಲಕ್ಕಿಂತ ಆತಂಕಕಾರಿ ಕಳಂಕವೆಂದರೆ ಸಾರ್ವಜನಿಕ ಋಣ ಮಿತಿಮೀರಿ ಬೆಳಯುತ್ತಿರುವುದು. ಸಾರ್ವಜನಿಕ ಋಣವು 2019-20ರಲ್ಲಿ ಜಿಎಸ್‌ಡಿಪಿಯ ಶೇ. 15.90 ರಷ್ಟಿತ್ತು. ಇದು 2020-21ರಲ್ಲಿ ಶೇ. 21.07ಕ್ಕೇರಿ 2021-22ರಲ್ಲಿ ಇದು ಶೇ. 25.85 ರಷ್ಟಾಗುತ್ತದೆ. ಮೂರು ಮಾನದಂಡಗಳಲ್ಲಿಯೂ ಕರ್ನಾಟಕವು ವಿಫಲವಾಗಿದೆ. ಇದೇ ಏನು

ಪುಟ 10 ಕ್ಕೆ

ಜನತೆಯ ಮೇಲೆ ಹೊರೆ ಹೇರಿದ ಬಜೆಟ್

ಮುಖ್ಯ ಮಂತ್ರಿ ಯಡಿಯೂರಪ್ಪನವರು ಇಂದು ಮಂಡಿಸಿದ 2021–22 ರ 2,46,207 ಕೋಟಿ ರೂಗಳ ರಾಜ್ಯ ಬಜೆಟ್ ಕರ್ನಾಟಕ ರಾಜ್ಯದ ಸಂಕಷ್ಠವನ್ನು ಮತ್ತಷ್ಟು ಹೆಚ್ಚಿಸಲು ಪೂರಕವಾಗಿದೆಯೇ ಹೊರತು ಸಂಕಷ್ಠ ನಿವಾರಣೆಗೆ ಯಾವುದೇ ರೀತಿಯಲ್ಲಿ ಸಹಕಾರಿಯಾಗಿಲ್ಲವೆಂದು ಭಾರತ ಕಮ್ಯುನಿಷ್ಠ ಪಕ್ಷ (ಮಾರ್ಕ್ಸ್‌ವಾದಿ) ರಾಜ್ಯ ಸಮಿತಿಯು ಬಲವಾಗಿ ಖಂಡಿಸಿದೆ. ಇದು ರಾಜ್ಯದ ಜನತೆಯ ಮೇಲೆ ಹೊಸ 71,332 ಕೋಟಿ ರೂ.ಗಳ ಭಾರವನ್ನು ಹೊರಿಸಿದೆ.

ಅದಾಗಲೇ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಜಾರಿಗೆ ತಂದ ಜಾಗತೀಕರಣ, ಉದಾರೀಕರಣ ಹಾಗೂ ಖಾಸಗೀಕರಣದ ನೀತಿಗಳಿಂದ ರಾಜ್ಯವು ಗಂಭೀರವಾದ ಆರ್ಥಿಕ ಬಿಕ್ಕಟ್ಟಿಗೊಳಗಾಗಿದೆ. ಕಳೆದ 3–4 ವರ್ಷಗಳಿಂದ ಸತತವಾಗಿ ಬರಗಾಲ ಹಾಗೂ ಅತೀವೃಷ್ಠಿಗಳು ರಾಜ್ಯವನ್ನು ಬಾಧಿಸಿವೆ. ಕಳೆದ ವರ್ಷದಿಂದ ಕೋವಿಡ್–19 ಹಾಗೂ ಲಾಕ್‌ಡೌನ್‌ಗಳು ಮತ್ತಷ್ಟು ಸಂಕಷ್ಠವನ್ನುಂಟು ಮಾಡಿವೆ.

ಇದರಿಂದ ರಾಜ್ಯದ ರೈತರು, ಕೂಲಿಕಾರರು, ಕಸುಬುದಾರರು, ಕಾರ್ಮಿಕರು, ದಲಿತರು ಮತ್ತು ಮಹಿಳೆಯರು ನಲುಗಿ ಹೋಗಿದ್ದಾರೆ. ತಲಾ ಆದಾಯ ಮತ್ತಷ್ಠು ಕುಸಿದು ಹೋಗಿದೆ. ಇವುಗಳಿಂದಾಗಿ ಬದುಕುವವುದಕ್ಕೋಸ್ಕರ ಬಡವರಿಂದ ಶ್ರೀಮಂತರ ಕೈಗೆ ಅವರ ಆಸ್ತಿಗಳು ವರ್ಗಾವಣೆಯಾಗಿವೆ. ಶ್ರೀಮಂತರು ಶ್ರೀಮಂತರಾದರೇ ಬಡವರು ಮತ್ತಷ್ಟು ಕೆಟ್ಟ ಬಡತನಕ್ಕೀಡಾಗಿದ್ದಾರೆ.

ಇದರ ಮೇಲೆ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಜಾರಿಗೆ ತಂದ ಲೂಟಿಕೋರ ಕಾರ್ಪೋರೇಟ್ ಕಂಪನಿಗಳ ಪರವಾದ ಕೃಷಿ ಹಾಗೂ ಕಾರ್ಮಿಕ ವಿರೋಧಿ ಕಾಯ್ದೆಗಳು ರೈತರು ಹಾಗೂ ಕಾರ್ಮಿಕರ ಉದ್ಯೋಗಗಳನ್ನು ಅಪಹರಿಸುವ ಮತ್ತು ಗ್ರಾಹಕರು ಲೂಟಿಗೊಳಗಾಗುವ ಭೀತಿಯನ್ನು ನಿರ್ಮಿಸಿವೆ. ಇದು ಮಾತ್ರವಲ್ಲಾ, ಕಳೆದ ಮಾರ್ಚ್ 1 ರಂದು ಮಂಡಿಸಿದ ಕೇಂದ್ರ ಸರಕಾರದ ಬಜೆಟ್ ಜನತೆಯ ಮೇಲೆ ದೊಡ್ಡ ತೆರಿಗೆಯ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆಯ ಭಾರವನ್ನು ಹೇರಿದೆ.

ರೈತರ ಆತ್ಮಹತ್ಯೆಗಳನ್ನು ತಡೆಯಲಾಗಲೀ ಹಾಗೂ ಅವರು ಸಾಲಗಾರರಾಗುವುದನ್ನು ತಡೆಯುವ ಕ್ರಮಗಳಾಗಲೀ ಬಜೆಟ್‌ನಲ್ಲಿ ಇಲ್ಲ. ಈ ವರ್ಷವು ರಾಜ್ಯದ ಪ್ರಮುಖ ಬೆಳೆಗಳಿಗೆ ಬೆಂಬಲ ಬೆಲೆಗಳಿಲ್ಲದೇ ಲೂಟಿಗೊಳಗಾಗಿದ್ದಾರೆ.

ಕೃಷಿ ಕೂಲಿಕಾರರ ಸಂಖ್ಯೆಯು ಗ್ರಾಮೀಣ ಪ್ರದೇಶದಲ್ಲಿ ಲಾಕ್‌ಡೌನ್ ಹಾಗೂ ಕೋವಿಡ್ ಕಾರಣದಿಂದ ಹೆಚ್ಚಳಗೊಂಡಿದೆ. ಬರಗಾಲ, ಅತೀವೃಷ್ಟಿ ಹಾಗೂ ಕೋವಿಡ್ ಮತ್ತು ಲಾಕ್‌ಡೌನ್ ಕಾರಣದಿಂದ ಉದ್ಯೋಗಾವಕಾಶಗಳು ಕೃಷಿಯಲ್ಲಿ ಕುಂಠಿತಗೊಂಡಿವೆ. ಉದ್ಯೋಗ ಖಾತ್ರಿಯು ತಲಾ ಕುಟುಂಬಕ್ಕೆ ಸರಾಸರಿ 50 ದಿನಗಳು ದೊರೆಯುತ್ತಿಲ್ಲ. ಕಾರ್ಮಿಕರಿಗೆ ಕನಿಷ್ಟ ವೇತನದ ಹೆಚ್ಚಳವಿಲ್ಲ.

ಕೋವಿಡ್ ಬಾಧೆಯ ಪರಿಹಾರವೂ ಇದರಲ್ಲಿ ಇಲ್ಲವಾಗಿದೆ. ಹೀಗಾಗಿ ಈ ಬಜೆಟ್ ಅಭಿವೃದ್ಧಿಗೆ ಪೂರಕವಾಗಿಲ್ಲ ಬದಲಿಗೆ ರಾಜ್ಯದ ಜನತೆಯ ಮೇಲೆ ದೊಡ್ಡ ಸಾಲದ ಹೊರೆಯನ್ನು ಹೇರುವ ಮೂಲಕ ಮತ್ತಷ್ಟು ಮಾರಕವಾಗಿದೆ.

ದಲಿತರು, ಮಹಿಳೆಯರಿಗೆ ನೀಡಿದ ಹಣದಲ್ಲಿ ಅವರೊಳಗಿನ ಶ್ರೀಮಂತರಿಗೆ ನೆರವಾಗುವ ಇಂಗಿತವನ್ನು ತೋರಿದೆ.



ದುಡಿಯುವ ಜನರನ್ನು ಕಡೆಗಣಿಸಿದ ರಾಜ್ಯ ಬಜೆಟ್

ಮುಖ್ಯಮಂತ್ರಿ ಯಡಿಯೂರಪ್ಪನವರು ಇಂದು ಮಂಡಿಸಿರುವ 2021–2022ರ ಸಾಲಿನ ಬಜೆಟ್ ರಾಜ್ಯದ ದುಡಿಯುವ ಜನರನ್ನು ಕಡೆಗಣಿಸಿದೆ. ಕೊರೋನಾ ಸಂಕಷ್ಟ ಮತ್ತು ಲಾಕ್‌ಡೌನ್ ಸಂಕಷ್ಟಗಳಿಗೆ ಪರಿಹಾರ ಒದಗಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ಖಂಡಿಸಿದೆ.

ಸಿಐಟಿಯು ರಾಜ್ಯ ಅಧ್ಯಕ್ಷರಾದ ಎಸ್.ವರಲಕ್ಷ್ಮಿ ಮತ್ತು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂರವರು ಪತ್ರಿಕಾ ಹೇಳಿಕೆ ಬಿಡುಗಡೆಗೊಳಿಸಿದ ಸಿಐಟಿಯು ಸಂಘಟನೆಯು ಕೊರೋನಾ ಸಾಂಕ್ರಾಮಿಕ ಮತ್ತು ಲಾಕ್‌ಡೌನ್‌ನಿಂದ ರಾಜ್ಯದ ದುಡಿಯುವ ಜನರು ತಮ್ಮ ಜೀವನಾಧಾರವನ್ನು ಕಳೆದುಕೊಂಡು ಈಗಲೂ ಸಹ ಪೂರ್ಣ ಪ್ರಮಾಣದಲ್ಲಿ ಪುನಶ್ಚೇತನಗೊಳ್ಳದೆ ನಲುಗಿದ್ದಾರೆ. ಅವರಿಗೆ ಯಾವುದೇ ರೀತಿಯ ಪರಿಹಾರ ನೀಡದೇ ಕ್ರೂರತೆ ವಹಿಸಿರುವ ಬಿಜೆಪಿ ಸರಕಾರದ ರಾಜ್ಯ ಬಜೆಟ್ ಇದಾಗಿದೆ.

ರಾಜ್ಯದ ದುಡಿಯುವ ವಿವಿಧ ವಿಭಾಗದ ಕಾರ್ಮಿಕರು ರಾಜ್ಯ ಸರ್ಕಾರದ ಮುಂದಿರಿಸಿದ್ದ 32 ಅಂಶದ ಬೇಡಿಕೆಗಳನ್ನು ಪರಿಗಣಿಸಿ ನೀಡಲು ಇದ್ದ ಅವಕಾಶವನ್ನು ತಿರಸ್ಕರಿಸಿದೆ.

ರಾಜ್ಯದ 2 ಲಕ್ಷ 46 ಸಾವಿರ 207 ಕೋಟಿ ರೂ.ಗಳ ಬಜೆಟ್‌ನಲ್ಲಿ ಆರ್ಥಿಕ ಅಭಿವೃದ್ದಿಗೆ ಉತ್ತೇಜನಕ್ಕೆ ಎಂದು ಮೀಸಲಿಟ್ಟಿರುವ 58,529 ಕೋಟಿ ರೂ.ಗಳ ಅನುದಾನವನ್ನು ಹೇಗೆ ಯಾರಿಗೆ ನೀಡಲಾಗುತ್ತದೆ ಅದರ ಮೂಲಗಳೇನು? ಎಂಬುದರ ಯಾವುದೇ ವಿವರವನ್ನು ಮುಖ್ಯಮಂತ್ರಿಗಳು ನೀಡದೇ ಸದರಿ ಅನುದಾನವನ್ನು ಕನ್ನಡಿಯೊಳಗಿನ ಗಂಟಾಗಿರಿಸಿದ್ದಾರೆ.

ಕುಂಠಿತಗೊಂಡಿರುವ ಆರ್ಥಿಕ ಅಭಿವೃದ್ದಿಯನ್ನು ಪುನಶ್ಚೇತನಗೊಳ್ಳಲು ದುಡಿಯುವ ಜನರಿಗೆ ಹಣ ಒದಗಿಸಿಕೊಳ್ಳುವ ಶಕ್ತಿಯನ್ನು ಉತ್ತೇಜಿಸುವುದು ಇಂದಿನ ತುರ್ತಾಗಿದೆ. ಅದಕ್ಕಾಗಿ ರಾಷ್ಟ್ರ ಹಾಗೂ ರಾಜ್ಯದ ರೈತ – ಕಾರ್ಮಿಕ – ಸಂಘಟನೆಗಳು ಆದಾಯ ತೆರಿಗೆಯಿಂದ ಹೊರಗಿರುವ ಕೃಷಿ ಕುಟುಂಬಕ್ಕೆ 7500 ರೂ. ನೇರ ನಗದು ವರ್ಗಾವಣೆಯನ್ನು 6 ತಿಂಗಳ ಕಾಲ ಮಾಡಬೇಕೆಂದು ಹಾಗೂ ತಲಾ 10 ಕೆ.ಜಿ. ಆಹಾರ ಧಾನ್ಯವನ್ನು ಉಚಿತವಾಗಿ ನೀಡಬೇಕೆಂದು ಒತ್ತಾಯಿಸುತ್ತಿವೆ.

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕೆಲಸವನ್ನು 200 ರೂ. ದಿಂದ ರೂ.700 ಗಳಿಗೆ ಹೆಚ್ಚಿಸಿ ದಿನಗೂಲಿ ನಿಗದಿಗೊಳಿಸಿ ನಗರ ಪ್ರದೇಶಗಳಿಗೆ ವಿಸ್ತರಿಸಬೇಕೆಂದು ಒತ್ತಾಯಿಸುತ್ತಿವೆ. ಆದರೆ ರಾಜ್ಯ ಬಿಜೆಪಿ ಸರ್ಕಾರವು ಈ ಯಾವುದರ ಬಗ್ಗೆಯೂ ಕಿಂಚಿತ್ತು ಗಮನ ಹರಿಸದೇ ಆರ್ಥಿಕ ಪುನಶ್ಚೇತನಕ್ಕೆ ಇದ್ದ ಅವಕಾಶವನ್ನು ಕಳೆದುಕೊಂಡಿದೆ.

ದುಡಿಯುವ ಜನರ ಜೀವನಾಧಾರ ಸೃಷ್ಟಿಗೆ

ಪುಟ 10 ಕ್ಕೆ


ಕಾರ್ಪೋರೇಟ್ ಲೂಟಿ ಮುಂದುವರೆಸಲು ಬಿಡುವ, ರೈತ–ಕೂಲಿಕಾರರ ವಿರೋಧಿ ಬಜೆಟ್

ಕರ್ನಾಟಕ ರಾಜ್ಯದ ಬಿಜೆಪಿ ಸರಕಾರವು ಮಂಡಿಸಿದ 2021–2022ರ ಬಜೆಟ್ ರಾಜ್ಯದ ರೈತರು, ಕೃಷಿಕೂಲಿಕಾರರು ಮತ್ತು ಕಸುಬುದಾರ ಗ್ರಾಮೀಣ ಜನತೆಯ ಪಾಲಿಗೆ ತೀವ್ರ ನಿರಾಸೆಯನ್ನು ತಂದಿದೆ. ಇದು ಕೃಷಿ ಬಿಕ್ಕಟ್ಟನ್ನು ನಿವಾರಿಸಲು ಯಾವುದೇ ರೀತಿಯಲ್ಲಿ ಪೂರಕವಾಗಿಲ್ಲ ಬದಲಿಗೆ ಅದನ್ನು ಮತ್ತಷ್ಠು ಆಳಗೊಳಿಸಲು ನೆರವಾಗುತ್ತದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘ ದ ರಾಜ್ಯ ಸಮಿತಿ ಅಧ್ಯಕ್ಷರಾದ ಜಿ.ಸಿ.ಬಯ್ಯಾರೆಡ್ಡಿ ಬಲವಾಗಿ ಖಂಡಿಸಿದ್ದಾರೆ.

ರಾಜ್ಯ ಕಾರ್ಯದರ್ಶಿ ಯು. ಬಸವರಾಜುರವರು ಮಾತನಾಡಿ, "ಕೇಂದ್ರ ಮತ್ತು ರಾಜ್ಯ ಸರಕಾರಗಳು ಜಾರಿಗೆ ತಂದ ಜಾಗತೀಕರಣ, ಉದಾರೀಕರಣ ಹಾಗೂ ಖಾಸಗೀಕರಣದ ನೀತಿಗಳಿಂದ ರಾಜ್ಯವು ಗಂಭೀರವಾದ ಕೃಷಿ ಬಿಕ್ಕಟ್ಟಿನಲ್ಲಿದೆ. ಕಳೆದ ಮೂರ್‍ನಾಲ್ಕು ವರ್ಷಗಳಿಂದ ಸತತವಾಗಿ ಬರಗಾಲ ಹಾಗೂ ಅತಿವೃಷ್ಠಿಗಳು ರಾಜ್ಯದಲ್ಲಿ ಬಾಧಿಸಿವೆ. ಕಳೆದ ವರ್ಷದಿಂದ ಕೋವಿಡ್–19 ಸಾಂಕ್ರಾಮಿಕ ರೋಗ ಹರಡುವಿಕೆ ಹಾಗೂ ಪೂರ್ವಯೋಜಿತ ತಯಾರಿಗಳನ್ನು ಕೈಗೊಳ್ಳದ ಕೇಂದ್ರದ ಬಿಜೆಪಿ ಸರಕಾರವು ಏಕಾಏಕಿಯಾಗಿ ಜಾರಿಗೆ ತಂದ ಲಾಕ್ ಡೌನ್ ಪರಿಣಾಮವಾಗಿ ದೇಶದ ರೈತರು ಒಳಗೊಂಡು ಇಡೀ ರಾಜ್ಯದ ಜನತೆಗೆ ಹೆಚ್ಚಿನ ಸಂಕಷ್ಠವನ್ನುಂಟು ಮಾಡಿತು. ಈ ಬಗ್ಗೆ ರಾಜ್ಯ ಬಜೆಟ್‌ನಲ್ಲಿ ಸಂಪೂರ್ಣವಾಗಿ ಕಡೆಗಣಿಸಿದೆ" ಎಂದು ವಿವರಿಸಿದರು.

ಮುಂದುವರೆದು ಮಾತನಾಡಿದ ಅವರು "ಇದರಿಂದ ರಾಜ್ಯದ ರೈತರು, ಕೂಲಿಕಾರರು, ಕಸುಬುದಾರರು, ಕಾರ್ಮಿಕರು, ದಲಿತರು ಮತ್ತು ಮಹಿಳೆಯರು ನಲುಗಿ ಹೋಗಿದ್ದಾರೆ. ತಲಾ ಆದಾಯ ಮತ್ತಷ್ಠು ಕುಸಿದು ಹೋಗಿದೆ. ಇವುಗಳಿಂದಾಗಿ ಬದುಕುವುದಕ್ಕೋಸ್ಕರ ಬಡವರಿಂದ ಶ್ರೀಮಂತರ

ಪುಟ 10 ಕ್ಕೆ



ಬಲಾಢ್ಯರ ಬಜೆಟ್ – ಕೂಲಿಕಾರರನ್ನು ಸಂಪೂರ್ಣವಾಗಿ ಕಡೆಗಣಿಸಿದೆ

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು ಮಂಡಿಸಿದ 2021–2022ರ ಸಾಲಿನ ಬಜೆಟ್ ನಲ್ಲಿ ಸರ್ಕಾರವು ಕೃಷಿ ಕೂಲಿಕಾರರನ್ನು ಕಡೆಗಣಿಸಿದ್ದು ಖಂಡನಾರ್ಹವಾಗಿದೆ ಎಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ(ಎಐಎಡಬ್ಲ್ಯೂಯು) ವು ತೀವ್ರವಾಗಿ ಆಕ್ಷೇಪ ವ್ಯಕ್ತಪಡಿಸಿದೆ.

ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ ಹಾಗೂ ರಾಜ್ಯ ಕಾರ್ಯದರ್ಶಿ ಚಂದ್ರಪ್ಪ ಹೋಸ್ಕೇರಾರವರು ಜಂಟಿ ಹೇಳಿಕೆ ನೀಡಿದ್ದು, "ಕಳೆದ ಫೆಬ್ರವರಿ 25 ರಂದು ರಾಜ್ಯಾದ್ಯಂತ ಗ್ರಾಮೀಣ ಕೆಲಸಗಾರರು ಪ್ರತಿಭಟನೆ ಮಾಡುವ ಮೂಲಕ ಕೇರಳ, ತ್ರಿಪುರ, ತಮಿಳುನಾಡು ಮಾದರಿಯಲ್ಲಿ ಕರ್ನಾಟಕ ರಾಜ್ಯದಲ್ಲಿಯೂ ಕೃಷಿಕೂಲಿಕಾರರಿಗೆ ಸಮಗ್ರ ಕಾನೂನೊಂದನ್ನು ಅಂಗೀಕರಿಸಿ ಕಟ್ಟಡ ಕಾರ್ಮಿಕರು, ಹಮಾಲಿ ಕಾರ್ಮಿಕರು ಮೊದಲಾದವರಿಗೆ ಇರುವಂತೆ ಕೃಷಿ ಕೂಲಿಕಾರರಿಗೂ ಕಲ್ಯಾಣ ನಿಧಿಯೊಂದನ್ನು ಸ್ಥಾಪನೆ ಮಾಡಬೇಕೆಂದು ಆಗ್ರಹಿಸಿ ರಾಜ್ಯ ಸರಕಾರಕ್ಕೆ ಮನವಿ ಪತ್ರಗಳನ್ನು ಕಳುಹಿಸಲಾಗಿತ್ತು" ಎಂದು ಉಲ್ಲೇಖಿಸಿದ್ದಾರೆ.

ರಾಜ್ಯದಲ್ಲಿ ಒಂದು ಕೋಟಿಗೂ ಹೆಚ್ಚಿನ ಸಂಖ್ಯೆಯಲ್ಲಿರುವ ಬಡ ಕೂಲಿಕಾರರು ಬಹುತೇಕ ದಲಿತರಾಗಿದ್ದು ಅವರಿಗೆ ಕಾಯಂ ಕೆಲಸದ ಭರವಸೆ ಇಲ್ಲ, ಖಚಿತ ಆದಾಯವಿಲ್ಲ, ವಾಸಕ್ಕೆ ಮನೆ ಇಲ್ಲ, ಕನಿಷ್ಠ ವೇತನ, ತುಟ್ಟಿಭತ್ಯೆ, ಇಎಫ್, ಪಿಎಫ್ ಮೊದಲಾದ ಕಾರ್ಮಿಕ ಹಕ್ಕುಗಳನ್ನು ನೀಡುವುದು ಸಮಗ್ರಹ ಕಾನೂನನ್ನು ಬಜೆಟ್ ನಲ್ಲಿ ಘೋಷಿಸಬೇಕೆಂದು ಸಲ್ಲಿಸಿದ್ದ ಮನವಿಯನ್ನು ಸರ್ಕಾರ ಗಣನೆಗೆ ತೆಗೆದುಕೊಳ್ಳದೆ ಅನ್ಯಾಯ ಮಾಡಿದೆ.

ಈ ಸಾಲಿನ ಯಡಿಯೂರಪ್ಪರವರ ಬಜೆಟ್ ಸಂಪೂರ್ಣವಾಗಿ ಬಡ, ದಲಿತ ಕೂಲಿಕಾರರ ವಿರೋಧಿಯಾಗಿದೆ ಎಂದು ಕೃಷಿ ಕೂಲಿಕಾರ ಸಂಘಟನೆ ತಿಳಿಸಿದೆ.


ಶಿಕ್ಷಣ ಕ್ಷೇತ್ರವನ್ನು ಕಡೆಗಣಿಸಿದ ರಾಜ್ಯ ಬಜೆಟ್: ಎಸ್‌ಎಫ್‌ಐ

ರಾಜ್ಯದ ಬಿಜೆಪಿ ಸರ್ಕಾರವು 2021-2022ರ ಸಾಲಿನ ಬಜೆಟ್‌ನಲ್ಲಿ ಕೇವಲ 29,688 ಕೋಟಿ ರೂಪಾಯಿ, ಅಂದರೆ ಶೇಕಡಾ 11ರಷ್ಟು ಹಣ ಮಾತ್ರ ನೀಡುವುದರ ಮೂಲಕ ತನ್ನ ಶಿಕ್ಷಣ ವಿರೋಧಿ, ವಿದ್ಯಾರ್ಥಿ ದ್ರೋಹಿ ನೀತಿಯನ್ನು ಮುಂದುವರೆಸಿದೆ ಎಂದು ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್.ಎಫ್.ಐ.) ಸಂಘಟನೆ ಆರೋಪಿಸಿದೆ.

ಕಳೆದ ವರ್ಷದ ಬಜೆಟ್ ಗಾತ್ರಕ್ಕೆ ಹೋಲಿಸಿದರೆ ಈ ವರ್ಷದ ಬಜೆಟ್ ನಲ್ಲಿ 70 ಕೋಟಿ ಹಣ ಅಂದ್ರೆ 0.3% ಹಣವನ್ನು ಶಿಕ್ಷಣ ಕ್ಷೇತ್ರಕ್ಕೆ ಕಡಿತ ಮಾಡಲಾಗಿದೆ. ಇದೇ ಸಂದರ್ಭದಲ್ಲಿ ಯಡಿಯೂರಪ್ಪ ಸರ್ಕಾರ ಮತ್ತೆ ಮಠ ಮಾನ್ಯಗಳಿಗೆ, ಜಾತಿವಾರು ಪ್ರತಿಮೆಗಳ ನಿರ್ಮಾಣಕ್ಕಾಗಿ ಸಾವಿರಾರು ಕೋಟಿ ರೂಪಾಯಿ ಹಣವನ್ನು ಮೀಸಲಿಡುವುದರ ಮೂಲಕ ಬಿಜೆಪಿ ಸರ್ಕಾರಕ್ಕೆ ಶಿಕ್ಷಣ ವ್ಯವಸ್ಥೆಯ ಸಮಗ್ರ ಅಭಿವೃದ್ಧಿಯ ಬಗ್ಗೆ ಯಾವುದೇ ದೂರದೃಷ್ಟಿಕೋನ ಮತ್ತು ಅಭಿವೃದ್ಧಿ ಕಣ್ಣೋಟ ಇಲ್ಲ ಎಂಬುದು ಈ ಬಜೆಟ್ ನಲ್ಲಿ ಮತ್ತೊಮ್ಮೆ ಸಾಬೀತಾಗಿದೆ ಎಂದು ಎಸ್.ಎಫ್.ಐ. ರಾಜ್ಯಾಧ್ಯಕ್ಷರಾದ ಅಮರೇಶ್ ಕಡಗದ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ರಾಜ್ಯ ಕಾರ್ಯದರ್ಶಿ ಕೆ.ವಾಸುದೇವರೆಡ್ಡಿ ರವರು "2020ನೇ ವರ್ಷ ಕೋವಿಡ್-19 ಸಾಂಕ್ರಾಮಿಕ ರೋಗದಿಂದ ಇಡೀ ವರ್ಷ ಶೈಕ್ಷಣಿಕ ಸಮಸ್ಯೆಗಳನ್ನು ಮತ್ತಷ್ಟು ತೀವ್ರವಾಗಿತ್ತು. ಈ ಸಂದರ್ಭದಲ್ಲಿ ರಾಜ್ಯದ ವಿದ್ಯಾರ್ಥಿ ಸಮುದಾಯಕ್ಕೆ ಖಾಲಿ ಉಳಿದಿರುವ ಶಿಕ್ಷಕ, ಉಪನ್ಯಾಸಕರ ಹುದ್ದೆಗಳ ಭರ್ತಿಯಾಗಬೇಕು, ವಿಶ್ವವಿದ್ಯಾಲಯಗಳಿಗೆ ಅನುದಾನ ಬಿಡುಗಡೆ ಮಾಡಬೇಕು. ವಿಶೇಷವಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯ ಉಳಿಸಬೇಕು, ವಿದ್ಯಾರ್ಥಿ ವೇತನ, ಅಗತ್ಯ ತರಗತಿ ಕೊಠಡಿ,ಉಚಿತ ಲ್ಯಾಪ್ ಟ್ಯಾಪ್, ಉಚಿತ ಬಸ್ ಪಾಸ್, ಹಾಸ್ಟೆಲ್ ವಿದ್ಯಾರ್ಥಿಗಳ ಮಾಸಿಕ ಆಹಾರ ಭತ್ಯೆ ಕನಿಷ್ಠ 3500/-ರೂ ಹೆಚ್ಚಿಸಬೇಕೆಂದು ರಾಜ್ಯದ ವಿದ್ಯಾರ್ಥಿ ಸಮುದಾಯವನ್ನು ಸಂಘಟಿಸಿ ಶಿಕ್ಷಣದ ಸಮಗ್ರ ಅಭಿವೃದ್ಧಿಗಾಗಿ ರಾಜ್ಯ ಬಜೆಟ್ ನಲ್ಲಿ 30% ಮೀಸಲಿಡಬೇಕು ಎಂದು ಇಡೀ ರಾಜ್ಯಾದ್ಯಂತ ಹೋರಾಟಗಳನ್ನು ನಡೆಸಿದರು ವಿದ್ಯಾರ್ಥಿ ಸಮುದಾಯ ಎಸ್.ಎಫ್.ಐ ಸಂಘಟನೆ ಮೂಲಕ ತೀವ್ರತರವಾದ ಹೋರಾಟವನ್ನು ನಡೆಸಿದರೂ ಸಹ ಈ ರಾಜ್ಯ ಸರ್ಕಾರ ಶಿಕ್ಷಣ ಕ್ಷೇತ್ರಕ್ಕೆ ನಿರ್ಲಕ್ಷತೆ ತೋರಿದೆ" ಎಂದು ಆರೋಪಿಸಿದರು.

ಬಿಜೆಪಿ ಸರ್ಕಾರದ ಪ್ರತಿ ಬಾರಿಯೂ ಶಿಕ್ಷಣ ಕ್ಷೇತ್ರಕ್ಕೆ ಹಣ ಕಡಿತ ಮಾಡುವ ಪರಿಪಾಠವನ್ನು ಮುಂದುವರಿಸಿದ್ದು, ರಾಜ್ಯದ ವಿದ್ಯಾರ್ಥಿ ಸಮುದಾಯಕ್ಕೆ ದ್ರೋಹ ಬಗೆದಿದೆ. ಶಿಕ್ಷಣ ವಿರೋಧಿ ನೀತಿ ಅನುಸರಿಸುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ಇನ್ನಷ್ಟು ಹೋರಾಟಗಳನ್ನು ತೀವ್ರಗೊಳಿಸಲು ರಾಜ್ಯದ ವಿದ್ಯಾರ್ಥಿ ಸಮುದಾಯಕ್ಕೆ ಎಸ್‌ಎಫ್‌ಐ ಕರ್ನಾಟಕ ರಾಜ್ಯ ಸಮಿತಿ ಕರೆ ನೀಡಿದೆ. ■



ದುಡಿಯುವ ಜನರನ್ನು ಕಡೆಗಣಿಸಿದ ರಾಜ್ಯ ಬಜೆಟ್.... ಪುಟ 9 ರಿಂದ

ಮತ್ತು ಸಂರಕ್ಷಣೆಗೆ ಯಾವುದೇ ಯೋಜನೆಗಳನ್ನು ರೂಪಿಸಿಲ್ಲ ಮಾತ್ರವಲ್ಲದೇ ಸ್ವ ಉದ್ಯೋಗಗಳಿಗಿದ್ದ ಅನುದಾನ ಕಡಿತಗೊಳಿಸುವ ಮೂಲಕ ನಿರುದ್ಯೋಗ ಹೆಚ್ಚಳಕ್ಕೆ ನಾಂದಿ ಮಾಡಿಕೊಟ್ಟಿದೆ.

ಆಡಳಿತ ಸುಧಾರಣೆ ಮತ್ತು ಸಾರ್ವಜನಿಕ ವಲಯಕ್ಕೆ ಮೀಸಲಿರುವ 52519 ಕೋಟಿ ರೂ.ಗಳ ಅನುದಾನ ಬಳಕೆಯ ವಿವರವನ್ನು ನೀಡಿರುವುದಿಲ್ಲ ಸದರಿ ಅನುದಾನದಲ್ಲಿ ಸ್ಕೀಂ ನೌಕರರಾದ ಅಂಗನವಾಡಿ, ಬಿಸಿಯೂಟ, ಆಶಾ, ಮತ್ತು ಸರ್ಕಾರಿ ಇಲಾಖೆಗಳಲ್ಲಿ ಸ್ಥಳೀಯ ಆಡಳಿತದಲ್ಲಿ ಹೊರಗುತ್ತಿಗೆಯಾಗಿರುವ ವೇತನ ಹೆಚ್ಚಳಕ್ಕೆ ಬಳಸಬೇಕೆಂದು ಸಿಐಟಿಯು ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ.

ಸದರಿ ಅನುದಾನವನ್ನು ಪಂಚಾಯತ್ ನೌಕರರ ವೇತನಕ್ಕೆ ಅಗತ್ಯವಿರುವ ಹಣವನ್ನು ಮೀಸಲಿರಿಸಬೇಕೆಂದು ಆಗ್ರಹಿಸಿದೆ. ಬೆಲೆ ಏರಿಕೆಯ ಬವಣೆಯಿಂದ ಬಸವಳಿದಿರುವ ದುಡಿಯುವ ಜನರಿಗೆ ಪೆಟ್ರೋಲ್ - ಡಿಸೇಲ್‌ನ ಸುಂಕ ಕಡಿಮೆ ಗೊಳಿಸುವ ಕ್ರಮಗಳನ್ನು ಕೈಗೊಂಡು ಪರಿಹಾರ ನೀಡುವಲ್ಲಿ ಪರಿಹಾರ ನೀಡದೆ ವಂಚಿಸಿದ ರಾಜ್ಯ ಬಿಜೆಪಿ ಸರ್ಕಾರ ತನ್ನ ರಾಜಕೀಯ ಹಿತಾಸಕ್ತಿಗಾಗಿ ಜಾತಿವಾರು ನಿಗಮಗಳಾಗಿ ಹಣ ಮೀಸಲಿರಿಸಿ ದುಡಿಯುವ ಜನರನ್ನು ಜಾತಿವಾರು ವಿಭಜಕ ಕ್ರಮಕ್ಕೆ ಬಿಜೆಪಿ ಸರ್ಕಾರಕ್ಕೆ ಮುಂದಾಗಿದೆ ಎಂದು ಸಿಐಟಿಯು ಟೀಕಿಸಿದೆ.

ತೆರಿಗೆ ಹೆಚ್ಚಳ ಮಾಡಿಲ್ಲವೆಂಬ ಬಡಾಯಿಕೊಚ್ಚಿಕೊಳ್ಳುತ್ತಲೇ ಕರ ಸಮಾಧಾನ ಯೋಜನೆ 2021 ಜಾರಿಗೆ ಮುಂದಾಗಿ ಪ್ರಸಕ್ತ ಸಾಲಿನಲ್ಲಿ ಕೊರೋನಾ ಸಂಕಷ್ಟದ ಸಂದರ್ಭದಲ್ಲಿ 7,6473 ರೂ. ಕೋಟಿಗಳ ತೆರಿಗೆ ಸಂಗ್ರಹಣೆಯ ಗುರಿ ಹೊಂದಿ ಜಿಎಸ್‌ಟಿ ಪೂರ್ವದ ತೆರಿಗೆ ಹಂತಕ್ಕೆ ಸಂಗ್ರಹವನ್ನು ತಲುಪಿಸುವ ಗುರಿ ಹೊಂದಿರುವ ನಯ ವಂಚಕ ಬಜೆಟ್ ಆಗಿದೆ. ■

ರಾಜ್ಯ ಬಜೆಟ್: 2021-22 ಸಾಲದ ಬಲೆಯಲ್ಲಿ ಕರ್ನಾಟಕ....... ಪುಟ 8 ರಿಂದ

ರಾಜ್ಯದ ಸಾಧನೆ!?

6. ಕರ್ನಾಟಕದ ಆರ್ಥಿಕ ಮತ್ತು ಬಜೆಟ್ ಸಂಬಂಧ ಹಣಕಾಸಿನ ನಿರ್ವಹಣೆಯಲ್ಲಿನ ವೈಫಲ್ಯಕ್ಕೆ ಕೋವಿಡ್ ಮಹಾಸೋಂಕು ಎಷ್ಟು ಕಾರಣವೋ ಒಕ್ಕೂಟ(ಭಾರತ) ಸರ್ಕಾರವು ರಾಜ್ಯದ ಬಗ್ಗೆ ತೋರುತ್ತಿರುವ ಮಲತಾಯಿ ಧೋರಣೆಯೂ ಅಷ್ಟೇ ಕಾರಣ. ಉದಾ: ಒಕ್ಕೂಟ ಸರ್ಕಾರದಿಂದ ತೆರಿಗೆ ವರ್ಗಾವಣೆ ಮತ್ತು ಸಹಾಯಾನುದಾನಗಳ ಮೂಲಕ ರಾಜ್ಯಕ್ಕೆ 2018-19ರಲ್ಲಿ ದೊರೆತ ಹಣ ರೂ. 54,814 ಕೋಟಿ. ಆದರೆ ಇದು 2020-21ರಲ್ಲಿ ರೂ. 34,197 ಕೋಟಿಗಿಳಿದು 2021-22ರಲ್ಲಿ ರೂ. 39810 ಕೋಟಿಗೆರಿದೆ. ಈ ವರ್ಗಾವಣೆಯು ರಾಜ್ಯದ 2018-19ರಲ್ಲಿ ಜಿ.ಎಸ್.ಡಿ.ಪಿ ಯ ಶೇ. 3.89 ರಷ್ಟಿತ್ತು, ಇದು 2021-22ರಲ್ಲಿ ಶೇ. 2.33ಕ್ಕಿಳಿದಿದೆ.
7. ರಾಜ್ಯವು ಎದುರಿಸುತ್ತಿರುವ ಆರ್ಥಿಕ ಬಿಕ್ಕಟ್ಟು ಮತ್ತು ಬಜೆಟ್ ಹಣಕಾಸು ದುಸ್ಥಿತಿಗೆ ಮತ್ತೊಂದು ಕಾರಣವೆಂದರೆ 15ನೆಯ ಹಣಕಾಸು ಆಯೋಗವು ರಾಜ್ಯಕ್ಕೆ ತನ್ನ ಶಿಫಾರಸ್ಸಿನಲ್ಲಿ ಮಾಡಿರುವ ಅನ್ಯಾಯ. ಉದಾ. 14ನೆಯ ಹಣಕಾಸು ಆಯೋಗವು ಒಕ್ಕೂಟದ ಹಂಚಬಹುದಾದ ತೆರಿಗೆ ರಾಶಿಯಲ್ಲಿ ರಾಜ್ಯದ ಪಾಲನ್ನು ಹಿಂದಿನ ಶೇ. 4.713 ರಿಮದ ಶೇ. 3.646 ಕ್ಕಿಳಿಸಿದೆ. 14ನೆಯ ಹಣಕಾಸು ಆಯೋಗವು 2015-16 ರಿಂದ 2019-202 ಐದು ವರ್ಷಗಳಿಗೆ ರಾಜ್ಯಕ್ಕೆ ಒಕ್ಕೂಟದ ಹಂಚಬಹುದಾದ ತೆರಿಗೆ ರಾಶಿಯಲ್ಲಿನ ಮಾಡಿದ್ದ ಹಣ ರೂ. 1.86 ಲಕ್ಷ ಕೋಟಿ (ವಾರ್ಷಿಕ ರೂ. 37215 ಕೋಟಿ). ಆದರೆ 15ನೆಯ ಆಯೋಗದ ಶಿಫಾರಸ್ಸಿನ ಪ್ರಕಾರ 2021-22 ರಿಂದ 2025-26ರವರೆಗೆ ದೊರೆಯುವ ಮೊತ್ತ ರೂ. 1.54 ಲಕ್ಷ ಕೋಟಿ(ವಾರ್ಷಿಕ ರೂ. 30815 ಕೋಟಿ). ಆಯೋಗಗಳು ಅನುಸರಿಸುವ ಸಾಮಾನ್ಯ ನೀತಿಯೆಂದರೆ ರಾಜ್ಯಗಳು ಹಿಂದಿನ ವರ್ಷಗಳಲ್ಲಿ ಪಡೆಯುತ್ತಿದ್ದ ಅನುದಾನಕ್ಕಿಂತ ಮುಂದಿನ ವರ್ಷಗಳಲ್ಲಿನ ಪಡೆಯುವ ಅನುದಾನ ಕಡಿಮೆಯಾಗಬಾರದು ಎಂಬುದಾಗಿದೆ. ಆದರೆ 15ನೆಯ ಹಣಕಾಸು ಆಯೋಗವು ಇದನ್ನು ಪಾಲಿಸಿಲ್ಲ. ಇದರಿಂದ ರಾಜ್ಯಕ್ಕೆ ದೊಡ್ಡ ಅನ್ಯಾಯವಾಗಿದೆ.

ಪೆಟ್ರೋಲ್-ಡೀಸೆಲ್ ಮೇಲಿನ ತೆರಿಗೆಗಳಲ್ಲಿಯೂ ರಾಜ್ಯಗಳಿಗೆ ಅನ್ಯಾಯವಾಗುತ್ತಿದೆ. ಈ ತೆರಿಗೆ ಜಿ.ಎಸ್.ಟಿ ವ್ಯಾಪ್ತಿಯಲ್ಲಿ ಇಲ್ಲದ ಕಾರಣ ಅದರ ಸಂಗ್ರಹವನ್ನು ರಾಜ್ಯಗಳ ಜೊತೆ ಒಕ್ಕೂಟ (ಭಾರತ) ಸರ್ಕಾರವು ಕೇಂದ್ರವು ಹಂಚಿಕೊಳ್ಳುತ್ತಿಲ್ಲ. ಈ ತೆರಿಗೆ ಮೂಲಕ ಅದು ಅತಿದೊಡ್ಡ ಪ್ರಮಾಣದಲ್ಲಿ ರೆವಿನ್ಯೂ ಪಡೆಯುತ್ತಿದೆ.

ಒಟ್ಟಾರೆ ಕರ್ನಾಟಕದ ಬಜೆಟ್ ದುರ್ಬಲವಾಗಿದ್ದರೆ, ಅಭಿವೃದ್ಧಿ ಕುಂಟಿತಗೊಂಡಿದ್ದರೆ ಇದಕ್ಕೆ ಕೋವಿಡ್ ಮಹಾಸೋಕು ಕಾಲು ಭಾಗ ಕಾರಣವಾಗಿದ್ದರೆ, ಒಕ್ಕೂಟ ಸರ್ಕಾರವು ಮಾಡುತ್ತಿರುವ ಅನ್ಯಾಯ ಉಳಿದ ಮುಕ್ಕಾಲು ಭಾಗ ಕಾರಣವಾಗಿದೆ. ಕರ್ನಾಟಕದ 2021-22ರ ಬಜೆಟ್ ಸಂವಿಧಾನಬದ್ಧ ಒಕ್ಕೂಟ ತತ್ವವನ್ನು ಭಾರತ ಸರ್ಕಾರ ಹೇಗೆ ಧಿಕ್ಕರಿಸುತ್ತಿದೆ ಎಂಬ ಪ್ರಶ್ನೆಯನ್ನು ನಮ್ಮ ಮುಂದಿಡುತ್ತದೆ. ಈ ಬಗ್ಗೆ ರಾಜ್ಯದಲ್ಲಿ ಹೆಚ್ಚಿನ ಚರ್ಚೆಯಾಗುವ ಅಗತ್ಯವಿದೆ. 'ಒಂದು ದೇಶ-ಒಂದು ಚುನಾವಣೆ'ಗಿಂತ ನಿಜಕ್ಕೂ ವಿಧಾನಸಭೆಯಲ್ಲಿ ಚರ್ಚೆಯಾಗಬೇಕಾಗಿರುವ ರಾಜ್ಯದ ಜ್ವಲಂತ ಸಮಸ್ಯೆಯೆಂದರೆ ಭಾರತ ಸರ್ಕಾರದ ಒಕ್ಕೂಟ ವಿರೋಧಿ ನೀತಿ. ಈ ನನ್ನ ಲೇಖನವು ಇಂತಹ ಒಕ್ಕೂಟ ತತ್ವದ ವೈಫಲ್ಯದ ಹಿನ್ನೆಲೆಯಲ್ಲಿ ಕೆಲವು ಪ್ರಶ್ನೆಗಳನ್ನು ಚರ್ಚೆಯ ದೃಷ್ಟಿಯಿಂದ ಇಲ್ಲಿ ಎತ್ತಲಾಗಿದೆ. ●

ರೈತ-ಕೂಲಿಕಾರರ ವಿರೋಧಿ ಬಜೆಟ್....... ಪುಟ 9 ರಿಂದ

ಕೈಗೆ ಅವರ ಆಸ್ತಿಗಳು ವರ್ಗಾವಣೆಯಾಗಿವೆ. ಶ್ರೀಮಂತರು ಶ್ರೀಮಂತರಾದರು, ಬಡವರು ಮತ್ತಷ್ಟು ಕೆಟ್ಟ ಬಡತನಕ್ಕೀಡಾಗಿದ್ದಾರೆ.

ಪ್ರತಿದಿನ ಸಂಕಷ್ಟದಿಂದ ಪಾರಾಗದ ರೈತರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಕೂಲಿಕಾರರು ಹಾಗೂ ಬಡವರು, ದಲಿತರು, ಮಹಿಳೆಯರು, ಮಕ್ಕಳ ಅಪೌಷ್ಠಿಕತೆಯ ಸಾವುಗಳು ದಿನೇ ದಿನೇ ಹೆಚ್ಚುತ್ತಲೇ ಇವೆ" ಎಂದರು.

ಕೇಂದ್ರ ಹಾಗೂ ರಾಜ್ಯ ಸರಕಾರಗಳು ಜಾರಿಗೆ ತಂದ ಲೂಟಿಕೋರ ಕಾರ್ಪೋರೇಟ್ ಕಂಪನಿಗಳ ಪರವಾದ ಕೃಷಿ ಹಾಗೂ ಕಾರ್ಮಿಕ ವಿರೋಧಿ ಕಾಯ್ದೆಗಳು, ವಿದ್ಯುತ್ ರಂಗದ ಖಾಸಗೀಕರಣದ ಮಸೂದೆ, ರೈತರು ಹಾಗೂ ಕಾರ್ಮಿಕರ ಉದ್ಯೋಗಗಳನ್ನು ಅಪಹರಿಸುವ ಮತ್ತು ಗ್ರಾಹಕರು ಲೂಟಿಗೊಳಗಾಗುವ ಭೀತಿಯನ್ನು ನಿರ್ಮಿಸಿವೆ. ಜನತೆಯನ್ನು ಕತ್ತಲೆಗೆ ದೂಡಲಿವೆ. ಇದು ಮಾತ್ರವಲ್ಲಾ, ಕಳೆದ ಫೆಬ್ರವರಿ 01ರಂದು ಮಂಡಿಸಿದ ಕೇಂದ್ರ ಸರಕಾರದ ಬಜೆಟ್ ಜನತೆಯ ಮೇಲೆ ದೊಡ್ಡ ತೆರಿಗೆಯ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆಯ ಭಾರವನ್ನು ಹೇರಿದೆ. ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಹಾಗೂ ಸಾರಿಗೆ ವೆಚ್ಚಗಳು, ಹೋಟೆಲ್ ತಿಂಡಿಗಳ ಬೆಲೆಗಳು ತಕ್ಷಣವೇ ಏರಿಕೆ ಕಂಡಿವೆ.

ರೈತರ ಆತ್ಮಹತ್ಯೆಗಳನ್ನು ತಡೆಯಲಾಗಲೀ ಅಥವಾ ಅವರು ಸಾಲದ ಸುಳಿಯಲ್ಲಿ ಸಿಲುಕದಂತೆ ತಡೆಯುವ ಕ್ರಮಗಳಾಗಲಿ ಈ ಬಜೆಟ್ ಪರಿಹಾರ ಒದಗಿಸಲಿಲ್ಲ. ಈ ವರ್ಷವು ರಾಜ್ಯದ ಪ್ರಮುಖ ಬೆಳೆಗಳಾದ ತೊಗರಿ, ಕಡಲೆ, ಜೋಳ, ಮೆಕ್ಕೆಜೋಳ, ಸಜ್ಜೆ, ಭತ್ತ, ಹತ್ತಿ, ಮೆಣಸಿನಕಾಯಿ ಮುಂತಾದವುಗಳಿಗೆ ಬೆಂಬಲ ಬೆಲೆಗಳಿಲ್ಲದೇ ಬೆಳೆ ಬೆಳೆದ ರೈತರು ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದಾರೆ.

ಕೃಷಿ ಕೂಲಿಕಾರರ ಸಂಖ್ಯೆಯು ಗ್ರಾಮೀಣ ಪ್ರದೇಶದಲ್ಲಿ ಲಾಕ್ ಡೌನ್ ಹಾಗೂ ಕೋವಿಡ್ ಕಾರಣದಿಂದ ಹೆಚ್ಚಳಗೊಂಡಿದೆ. ಅಲ್ಲದೆ, ಬರಗಾಲ, ಅತಿವೃಷ್ಟಿಯ ಕಾರಣದಿಂದ ಉದ್ಯೋಗಾವಕಾಶಗಳು ಕೃಷಿಯಲ್ಲಿ ಕುಂಠಿತಗೊಂಡಿವೆ.

ಉದ್ಯೋಗ ಖಾತ್ರಿಯು ತಲಾ ಕುಟುಂಬಕ್ಕೆ ಸರಾಸರಿ 50 ದಿನಗಳು ದೊರೆಯುತ್ತಿಲ್ಲ. ಕೂಲಿಕಾರರ ವೇತನವನ್ನು ಕಾರ್ಮಿಕ ಇಲಾಖೆ ಪ್ರಕಟಿಸಿದಂತೆ 424 ರೂ.ಗಳಿಗೆ ಹೆಚ್ಚಿಸಲಿಲ್ಲ. ಕಾರ್ಮಿಕರಿಗೆ ಕನಿಷ್ಠ ವೇತನದ ಹೆಚ್ಚಳವಿಲ್ಲ. ಕೋವಿಡ್ ಬಾಧೆಯ ಪರಿಹಾರವೂ ಇದರಲ್ಲಿ ಇಲ್ಲವಾಗಿದೆ.

ಹೀಗಾಗಿ, ಈ ಬಜೆಟ್ ಅಭಿವೃದ್ಧಿಗೆ ಪೂರಕವಾಗಿಲ್ಲ. ಬದಲಿಗೆ, ರಾಜ್ಯದ ಜನತೆಯ ಮೇಲೆ ದೊಡ್ಡ ಸಾಲದ ಹೊರೆಯನ್ನು ಹೇರುವ ಮೂಲಕ ಮತ್ತಷ್ಟು ಸಂಕಷ್ಟಕ್ಕೀಡು ಮಾಡಿದೆ.

ಬಜೆಟ್‌ನಲ್ಲಿ ದಲಿತರು, ಮಹಿಳೆಯರಿಗೆ ನೀಡಿದ ಹಣವು ಅವರ ಜನಸಂಖ್ಯೆಗನುಗುಣವಾಗಿಲ್ಲ ಮಾತ್ರವಲ್ಲಾ, ಕಳೆದ ಬಾರಿಗಿಂತ ಕಡಿಮೆ ಹಣ ಒದಗಿಸಲಾಗಿದೆ. ಅದರಲ್ಲಿ ಅವರೊಳಗಿನ ಶ್ರೀಮಂತರಿಗೆ ನೆರವಾಗುವ ಇಂಗಿತವನ್ನು ತೋರಿದೆ.

ಶಿಕ್ಷಣಕ್ಕೆ ಕೇವಲ ಶೇ.11 ರಷ್ಟು ಮಾತ್ರವೇ ಒದಗಿಸಿದ್ದರೂ ಅದು ಕಳೆದ ಬಾರಿಗಿಂತ ಕಡಿಮೆಯಾಗಿದೆ. ಸಾರ್ವಜನಿಕ ಶಿಕ್ಷಣ ಮತ್ತು ಆರೋಗ್ಯ ಹಾಗೂ ದಲಿತರು, ಮಹಿಳೆಯರಿಗೆ ಕಡಿತ ಮಾಡಿ ಮಠ ಮಾನ್ಯಗಳಿಗೆ ನೀಡುವ ಸಂಕುಚಿತ ಜಾತಿ ರಾಜಕಾರಣಕ್ಕೆ ಕ್ರಮವಹಿಸಲಾಗಿದೆ. ಸಮುದಾಯಗಳ ಅಭಿವೃದ್ಧಿಯ ಹೆಸರಿನಲ್ಲಿ ನೀಡಲಾಗಿರುವ ಸಾವಿರಾರು ಕೋಟಿ ರೂ ಹಣ ನಿಜ ಫಲಾನುಭವಿಗಳಿಗೆ ಸಿಗದೇ ಗುಳುಂ ಮಾಡಲಷ್ಟೇ ಉಪಯುಕ್ತವಾಗಿದೆ ಎಂದು ಹೇಳಿಕೆಯಲ್ಲಿ ಪ್ರಕಟಿಸಿದ್ದಾರೆ. ■

1926-29: ಹೋರಾಟ ತೀಕ್ಷ್ಣಗೊಂಡ, ವಿಸ್ತರಣೆಗೊಂಡ ಅವಧಿ



ಭಾರತದಲ್ಲಿ ಕಾರ್ಮಿಕ ಸಂಘಗಳು ರೂಪಗೊಳ್ಳಲು ಪ್ರಾರಂಭಿಸಿದಾಗ ಮತ್ತು ದೇಶದ ಅನೇಕ ಭಾಗಗಳಲ್ಲಿ ಚಳವಳಿ ಸ್ಫೋಟಗೊಂಡಾಗ, ಟ್ರೇಡ್ ಯೂನಿಯನ್ ಚಳವಳಿಯನ್ನು ಆರ್ಥಿಕ ಬೇಡಿಕೆಗಳ ಕಿರಿದಾದ ಪರಿಧಿಯಲ್ಲಿ ಸೀಮಿತಗೊಳಿಸುವ ಮತ್ತು ರಾಜಕೀಯ ಪಾತ್ರವನ್ನು ನಿರ್ವಹಿಸಲು ಅವಕಾಶ ನೀಡಬಾರದು ಎನ್ನುವ ಉದ್ದೇಶದಿಂದ ಭಾರತದ ಟ್ರೇಡ್ ಯೂನಿಯನ್ ಕಾಯ್ದೆ, 1926 ಬಂತು. 1929ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಂಪೂರ್ಣ ಸ್ವಾತಂತ್ರ್ಯ ತನ್ನ ಗುರಿಯೆಂದು ಘೋಷಿಸಿದ್ದು ಜನಗಳಲ್ಲಿ ಹೊಸ ಭರವಸೆಗಳು ಮತ್ತು ಆಕಾಂಕ್ಷೆಗಳನ್ನು ಹುಟ್ಟಿಸಿತು. ಆದ್ದರಿಂದ ಇದು ಕಾರ್ಮಿಕರ ಹೋರಾಟಗಳು ತೀಕ್ಷ್ಣಗೊಂಡ, ವಿಸ್ತಾರಗೊಂಡ ಅವಧಿ. ವಿವಿಧ ಕೈಗಾರಿಕೆಗಳಲ್ಲಿ, ಮುಂಬೈಯಲ್ಲಿ ಹತ್ತಿ, ಬಂಗಾಳದಲ್ಲಿ ಸೆಣಬು, ಜಮ್ಷೆಡ್ಪುರದಲ್ಲಿ ಉಕ್ಕು, ರೈಲ್ವೆಗಳು ಮತ್ತು ಹಲವಾರು ಇತರ ಕಾರ್ಮಿಕರಲ್ಲಿ ಕುದಿಯುತ್ತಿದ್ದ ಅಸಮಾಧಾನದಿಂದಾಗಿ ದೇಶಾದ್ಯಂತ ಬೃಹತ್ ಮುಷ್ಕರ ಕಾರ್ಯಾಚರಣೆಗಳು ಈ ಅವಧಿಯಲ್ಲಿ ನಡೆದವು.

ಮೂಲ ಲೇಖಕರು: **ಸುಕೋಮಲ್ ಸೇನ್** ಸಂಗ್ರಹ-ಅನುವಾದ: ಸಿ.ಆರ್.ಶಾನಭಾಗ

1926 ರಿಂದ 1929 ರ ವರ್ಷಗಳು ಭಾರತದ ಕಾರ್ಮಿಕ-ವರ್ಗದ ಚಳವಳಿಯಲ್ಲಿ ವಿಶೇಷ ಘಟನೆಗಳ ಅವಧಿಯಾಗಿದೆ.

ಈ ವರ್ಷಗಳಲ್ಲಿ ದೊಡ್ಡ ಮುಷ್ಕರಗಳು ನಡೆದವು. ಈ ಮುಷ್ಕರಗಳನ್ನು 'ಕಮ್ಯುನಿಸ್ಟ್ ಪಿತೂರಿಗಳು' ಎಂದು ಕರೆಯಲು ಸರ್ಕಾರ ಪ್ರಯತ್ನಿಸಿದರೂ, ಅನೇಕ ಸಂದರ್ಭಗಳಲ್ಲಿ ಕಮ್ಯುನಿಸ್ಟರ ನೇತೃತ್ವದಲ್ಲಿ ನಡೆದ ಈ ಹೋರಾಟಗಳು, ವಾಸ್ತವವಾಗಿ, ದಮನಕಾರಿ ಸಮಸ್ಯೆಗಳಿಂದ ಬಳಲುತ್ತಿದ್ದ ಕಾರ್ಮಿಕ ವರ್ಗದ ಅಸಮಾಧಾನದ ತೀಕ್ಷ್ಣವಾದ ಅಭಿವ್ಯಕ್ತಿಯಾಗಿದ್ದವು. ಹೋರಾಟಗಳ ತೀಕ್ಷ್ಣತೆ, ಕಾರ್ಮಿಕ ವರ್ಗದ ದೃಷ್ಟಿಕೋನವನ್ನು ಇನ್ನಷ್ಟು ವಿಸ್ತರಿಸಲು ಕೆಲಸ ಮಾಡಿತು. ಕಾರ್ಮಿಕ ವರ್ಗ ಮತ್ತು ಜನಸಾಮಾನ್ಯರಲ್ಲಿ ಹೊಸ ಜಾಗೃತಿ ಮತ್ತು ಸ್ವತಂತ್ರ ರಾಜಕೀಯ ಹೋರಾಟಕ್ಕೆ ಅವರ ಸಿದ್ಧತೆ ಸಾಮ್ರಾಜ್ಯಶಾಹಿಗಳ ವಿರುದ್ಧ ಮಾತ್ರವಲ್ಲದೆ ಸ್ಥಳೀಯ ಶೋಷಕರ ವಿರುದ್ಧವೂ ನಿರ್ದೇಶಿಸಲ್ಪಟ್ಟಿತು.

ವೇಗವಾಗಿ ಮುನ್ನಡೆಯುತ್ತಿದ್ದ ಕಾರ್ಮಿಕ-ವರ್ಗದ ಆಂದೋಲನವನ್ನು ನಿಯಂತ್ರಿಸುವ ಉದ್ದೇಶದಿಂದ, ಸರ್ಕಾರ 'ಇಂಡಿಯನ್ ಟ್ರೇಡ್ ಯೂನಿಯನ್ ಆಕ್ಟ್, 1926', 'ಕಾರ್ಮಿಕ ವಿವಾದ ಕಾಯ್ದೆ' ಮತ್ತು 'ಸಾರ್ವಜನಿಕ ಸುರಕ್ಷತಾ ಕಾಯ್ದೆ'ಗಳನ್ನು ಜಾರಿಗೆ ತಂದಿತು..

1927 ರ ಕರೆನ್ಸಿ ಮಸೂದೆ ಭಾರತದ ಆರ್ಥಿಕತೆಗೆ ಗಂಭೀರ ಹೊಡೆತವಾಯಿತು. ಇಪ್ಪತ್ತರ ದಶಕದ ಆರಂಭದ ಸುಂಕ ವ್ಯವಸ್ಥೆಯನ್ನು ಕೈಬಿಡಲು ಸರ್ಕಾರದ ತೆರಿಗೆ ನೀತಿಯನ್ನು ಬದಲಾಯಿಸಲಾಯಿತು, ಇದು ಭಾರತದಲ್ಲಿ ಕೈಗಾರಿಕೀಕರಣವನ್ನು ಕುಂಠಿತಗೊಳಿಸಲು ಮತ್ತು ಸಾಮ್ರಾಜ್ಯಶಾಹಿ ಆದ್ಯತೆಯ ಯುಗಕ್ಕೆ ಮುಚ್ಚುಮರೆಯಿಲ್ಲದೆ ಮರಳಲು ಉದ್ದೇಶಿಸಿತ್ತು.

ಈ ಹೊಸ ಆರ್ಥಿಕ ಆಕ್ರಮಣಕ್ಕೆ ಅನುಗುಣವಾಗಿ, 1927ರ ನವೆಂಬರ್‌ನಲ್ಲಿ ಲಂಡನ್‌ನಲ್ಲಿ ಬ್ರಿಟಿಷ್ ಕ್ಯಾಬಿನೆಟ್ ಇನ್ನೂ ಕೆಲವು ಆಡಳಿತಾತ್ಮಕ ಸುಧಾರಣೆಗಳನ್ನು ಶಿಫಾರಸು ಮಾಡಲು ಸೈಮನ್ ಆಯೋಗದ ನೇಮಕವನ್ನು ಘೋಷಿಸಿತು. ಬ್ರಿಟಿಷ್ ರಾಜಕಾರಣಿ ಸರ್ ಜಾನ್ ಸೈಮನ್ ನೇತೃತ್ವದ ಆಯೋಗದಲ್ಲಿ ಭಾರತದ ಯಾವುದೇ ಪ್ರಾತಿನಿಧ್ಯವಿದ್ದಿಲ್ಲ.. ಕಾಂಗ್ರೆಸ್ ಆಯೋಗವನ್ನು ತಿರಸ್ಕರಿಸಿತು ಮತ್ತು ಅದರ ನಡವಳಿಕೆಗಳನ್ನು ಬಹಿಷ್ಕರಿಸಲು ನಿರ್ಧರಿಸಿತು..

ಈ ಆಯೋಗದ ವಿರುದ್ಧ ದೇಶಾದ್ಯಂತ ಸಾಮೂಹಿಕ ಪ್ರದರ್ಶನಗಳು ನಡೆದವು ಮತ್ತು 1928 ರ ಫೆಬ್ರವರಿ 3 ರಂದು ಆಯೋಗದ ಸದಸ್ಯರು ಮುಂಬೈಯಲ್ಲಿ ಇಳಿಯುವಾಗ, ಸಾವಿರಾರು ಜನರು 'ಸೈಮನ್ ಗೋ ಬ್ಯಾಕ್' ಎಂದು ಕೂಗುತ್ತಾ ಸಿಟ್ಟಿನಿಂದ ಪ್ರದರ್ಶನವನ್ನು ನಡೆಸಿದರು.

ಈ ಹಂತದಲ್ಲಿ ಅತ್ಯಂತ ಮಹತ್ವದ ಬೆಳವಣಿಗೆಯೆಂದರೆ ರಾಷ್ಟ್ರೀಯ ರಾಜಕೀಯ ಹೋರಾಟದ ಈ ಅಲೆಯಲ್ಲಿ ಕಾರ್ಮಿಕ ವರ್ಗದ ಬೃಹತ್ ಭಾಗವಹಿಸುವಿಕೆ. ಕಾರ್ಮಿಕ-ವರ್ಗ ಸ್ವತಂತ್ರ ಶಕ್ತಿಯಾಗಿ ಹೊರಹೊಮ್ಮಿದ್ದು, ಭಾರತದ ರಾಷ್ಟ್ರೀಯ ಹೋರಾಟದಲ್ಲಿ ಹೊಸ ಚೈತನ್ಯವನ್ನು ಹುಟ್ಟುಹಾಕಿತು. ರಾಜಕೀಯ ಹೋರಾಟದ ನಾಯಕತ್ವಕ್ಕೆ ಬರಲು ಕಾರ್ಮಿಕ ವರ್ಗಕ್ಕೆ ಇನ್ನೂ ಸಾಧ್ಯವಾಗಿರಲಿಲ್ಲ, ಆದರೆ ಅದರಲ್ಲಿ ಅದರ ಧೀರ ಪಾಲ್ಗೊಳ್ಳುವಿಕೆ ಮತ್ತು ಹಲವಾರು ಆರ್ಥಿಕ ಹೋರಾಟಗಳು ಮತ್ತು ಸಮರಶೀಲ ಕಾರ್ಮಿಕ ಸಂಘಗಳನ್ನು ನಿರ್ಮಿಸುವುದು ತನ್ನದೇ ಆದ ನಾಯಕತ್ವವನ್ನು ಅಭಿವೃದ್ಧಿಪಡಿಸುವ ಪ್ರಕ್ರಿಯೆಯನ್ನು ರೂಪಿಸಿತು.

1929 ರ ಲಾಹೋರ್ ಅಧಿವೇಶನವು ಸಂಪೂರ್ಣ ಸ್ವಾತಂತ್ರ್ಯವನ್ನು ಕಾಂಗ್ರೆಸ್ಸಿನ ಗುರಿಯೆಂದು ಘೋಷಿಸಿತು ಮತ್ತು ತೆರಿಗೆ-ಪಾವತಿಸದಿರುವುದು(ಕರ ನಿರಾಕರಣೆ ಚಳುವಳಿ) ಸೇರಿದಂತೆ ನಾಗರಿಕ ಅವಿಧೇಯತೆಯ ಕಾರ್ಯಕ್ರಮವನ್ನು(ಕಾನೂನುಭಂಗ ಚಳುವಳಿಯನ್ನು) ಸೂಕ್ತ ಸಮಯದಲ್ಲಿ ಪ್ರಾರಂಭಿಸಲು ಕಾಂಗ್ರೆಸ್ ಸಮಿತಿಗೆ ಅಧಿಕಾರ ನೀಡಿತು. ಜನವರಿ 26, 1930 ರಂದು ಭಾರತದಾದ್ಯಂತ ಮೊದಲ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಹೊಸ ಭರವಸೆಗಳು ಮತ್ತು ಆಕಾಂಕ್ಷೆಗಳು ಹುಟ್ಟಿಕೊಂಡವು. ಜನರು ಪೂರ್ಣ ಸ್ವಾತಂತ್ರ್ಯವನ್ನು ಗಳಿಸಲು ನಿರ್ಧರಿಸಿದರು.

ಭಾರತದ ಟ್ರೇಡ್ ಯೂನಿಯನ್ ಕಾಯ್ದೆ 1926

ಭಾರತದಲ್ಲಿ ಸಂಘಟಿತ ಟ್ರೇಡ್ ಯೂನಿಯನ್ ಆಂದೋಲನವು ಯುದ್ಧದ ಅಂತ್ಯದ ವೇಳೆಗೆ ರೂಪುಗೊಂಡಿದ್ದರೂ, ಭಾರತದ ಟ್ರೇಡ್ ಯೂನಿಯನ್ ಕಾಯ್ದೆಯನ್ನು 1926 ರಲ್ಲಿ ಮಾತ್ರ ಅಂಗೀಕರಿಸಲಾಯಿತು. ಆದರೆ ಈ ಕಾಯ್ದೆಯನ್ನು ಸಹ ಕಾರ್ಮಿಕ ಸಂಘಗಳು ಅದರ ವಿರುದ್ಧ ಪ್ರತಿಭಟಿಸಬೇಕಾದ ರೀತಿಯಲ್ಲಿ ಮಾಡಲಾಯಿತು. 1913 ರಲ್ಲಿ ಭಾರತ ಅಪರಾದ ಸಂಹಿತೆ(ಐ.ಪಿ.ಸಿ.)ಯ ತಿದ್ದುಪಡಿಯ ಮೂಲಕ ಕಾರ್ಮಿಕ ಸಂಘಗಳನ್ನು ವಾಸ್ತವಿಕವಾಗಿ ಅಕ್ರಮ ಸಂಸ್ಥೆಗಳಿಗೆ ಇಳಿಸಲಾಯಿತು. 1921 ರಲ್ಲಿ ಬಿ. ಪಿ. ವಾಡಿಯಾ ಅವರ ಮೇಲೆ ಕಾನೂನು ಕ್ರಮ ಜರುಗಿಸಿದ ಘಟನೆಯ ನಂತರ ಕಾರ್ಮಿಕ ಸಂಘಗಳಿಗೆ ಸಂಬಂಧಿಸಿದಂತೆ ಕಾನೂನುಗಳನ್ನು ರೂಪಿಸಲು ಬೇಡಿಕೆಗಳನ್ನು ಎತ್ತಲಾಯಿತು. ಅಲ್ಲಿಯವರೆಗೂ ಟ್ರೇಡ್ ಯೂನಿಯನ್ ಚಟುವಟಿಕೆಗಳ ವಿಷಯದಲ್ಲಿ ಟ್ರೇಡ್ ಯೂನಿಯನ್ ಕಾರ್ಯಕರ್ತರನ್ನು ರಕ್ಷಿಸಲು ಯಾವುದೇ ಕಾನೂನು ಇರಲಿಲ್ಲ. ವಾಡಿಯಾ ವಿರುದ್ಧ ಕಾನೂನು ಕ್ರಮ ಜರುಗಿಸಿದ ನಂತರ ಎಐಟಿಯುಸಿ ಲಂಡನ್‌ನಲ್ಲಿದ್ದ ವರ್ಕರ್ಸ್ ವೆಲ್ಫೇರ್ ಲೀಗ್ ಆಫ್ ಇಂಡಿಯಾ ಮೂಲಕ ಈ ವಿಷಯವನ್ನು ಬ್ರಿಟಿಷ್ ಸರ್ಕಾರದೊಂದಿಗೆ ಚರ್ಚಿಸಲು ಪ್ರಯತ್ನಿಸಿತು. ಅದರಂತೆ, ಶಾಪುರ್ಜಿ ಸಕ್ಲತವಾಲಾ ನೇತೃತ್ವದ ಬ್ರಿಟಿಷ್ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ನಿಯೋಗವು ಮಾರ್ಚ್ 22, 1921 ರಂದು ಭಾರತದ ಗೃಹಕಾರ್ಯದರ್ಶಿ ಮೊಂಟೆಗು ಅವರನ್ನು ಭೇಟಿಯಾಯಿತು. ಆದರೆ 1921-22ರ ಅವಧಿಯಲ್ಲಿ ಚಳುವಳಿ ಕ್ಷೀಣಿಸಿದ ನಂತರ, ಈ ವಿಷಯವನ್ನು ಮುಂದುವರಿಸಲು ಸರ್ಕಾರವು ಹೆಚ್ಚು ಒಲವು ತೋರಲಿಲ್ಲ.



1921 ರಲ್ಲಿ ಶಾಸನಸಭೆಯ ನಾಮಕರಣ ಸದಸ್ಯರಾದ ಎನ್. ಎಂ. ಜೋಶಿ ಅವರು ಕಾರ್ಮಿಕ ಸಂಘಗಳ ನೋಂದಣಿಗೆ ಶಾಸನ ರಚಿಸುವಂತೆ ಮತ್ತು ಟ್ರೇಡ್ ಯೂನಿಯನ್ ಪದಾಧಿಕಾರಿಗಳನ್ನು ನಿಷ್ಕಪಟ ಟ್ರೇಡ್ ಯೂನಿಯನ್ ಚಟುವಟಿಕೆಗಳಿಗೆ ಸಿವಿಲ್ ಮತ್ತು ಕ್ರಿಮಿನಲ್ ಹೊಣೆಗಾರಿಕೆಯಿಂದ ರಕ್ಷಿಸುವಂತೆ ಒತ್ತಾಯಿಸಿ ಗೊತ್ತುವಳಿ ಮಂಡಿಸಿದರು. ಸಾಮ್ರಾಜ್ಯಶಾಹಿ ಆಡಳಿತಗಾರರು ಈ ನಿರ್ಣಯವನ್ನು ಬಲವಾಗಿ ವಿರೋಧಿಸಿದರು. ತರುವಾಯ, ಅಸೆಂಬ್ಲಿ ಸರ್ ಥಾಮಸ್ ಹಾಲೆಂಡ್ ಮಂಡಿಸಿದ ಮಾರ್ಪಡಿಸಿದ ನಿರ್ಣಯವನ್ನು ಅಂಗೀಕರಿಸಿತು, ಇದು ಕಾರ್ಮಿಕ ಸಂಘಗಳ ನೋಂದಣಿಗೆ ಮಾತ್ರ ಅವಕಾಶವಿರುವ ಮತ್ತು ಟ್ರೇಡ್ ಯೂನಿಯನ್ ಕಾರ್ಯಕರ್ತರಿಗೆ ಯಾವುದೇ ಕಾನೂನುಬದ್ಧ ರಕ್ಷಣೆಯಿಲ್ಲದ ಶಾಸನವನ್ನು ಜಾರಿಗೆ ತರಲು ಶಿಫಾರಸು ಮಾಡಿತು. ಈ ಮೂಲ ಮಾರ್ಪಾಡು ಜೋಶಿಯವರ ನಿರ್ಣಯದ ಎರಡೂ ಉದ್ದೇಶಗಳನ್ನು ಸಂಪೂರ್ಣವಾಗಿ ಸೋಲಿಸಿತು.

ಭಾರತದ ಟ್ರೇಡ್ ಯೂನಿಯನ್ ಕಾಯ್ದೆ 1926 ರ ನಿಬಂಧನೆಗಳ ಮೂಲಕ ಸಂಘಗಳ ನೋಂದಣಿ ಮತ್ತು ಅವರ ಸಂವಿಧಾನ ಮತ್ತು ಲೆಕ್ಕಪರಿಶೋಧಿತ ಖಾತೆಗಳನ್ನು ಸರ್ಕಾರಕ್ಕೆ ಸಲ್ಲಿಸುವದನ್ನು ಕಡ್ಡಾಯಗೊಳಿಸಲಾಯಿತು. ಈ ಕಾಯ್ದೆಯು ಸಂಘದ ಕಾರ್ಯಕಾರಿ ಸಮಿತಿಯಲ್ಲಿ 'ಹೊರಗಿನವರ ಸಂಖ್ಯೆ, ಒಟ್ಟು ಸಂಖ್ಯೆಯ ಶೇ.50 ಕ್ಕೆ ಮೀರಬಾರದು' ಉಳಿದವು ಆ ಕೈಗಾರಿಕೆಯಲ್ಲಿ ಕೆಲಸ ಮಾಡುವ ಕಾರ್ಮಿಕರದಾಗಿರಬೇಕು ಎಂದು ವಿಧಿಸಿತು. ಈ ಕಾಯಿದೆಯು ಸಂಘದ ಸಾಮಾನ್ಯ ನಿಧಿಯನ್ನು ತನ್ನ ಆಶಯಗಳಿಗಾಗಿ ಖರ್ಚು ಮಾಡುವ ಹಕ್ಕನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಿತು ಮತ್ತು ನಾಗರಿಕ ಮತ್ತು ರಾಜಕೀಯ ಉದ್ದೇಶಗಳಿಗಾಗಿ ಅದರ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಿತು.

ಇಂಡಿಯನ್ ಟ್ರೇಡ್ ಯೂನಿಯನ್ ಆಕ್ಟ್ 1926 ಆ ಸಮಯದಲ್ಲಿ ಇಂಗ್ಲೆಂಡ್‌ನಲ್ಲಿ ಚಾಲ್ತಿಯಲ್ಲಿದ್ದ ಸಂಬಂಧಿತ ಕಾಯ್ದೆಗಿಂತ ಬಹಳ ಭಿನ್ನವಾಗಿತ್ತು. ಸಂಘಗಳ ಚಟುವಟಿಕೆಗಳ ಮೇಲೆ ಮತ್ತು ಅವರ ನಿಧಿಯ ಬಳಕೆಯ ಮೇಲೆ ಕಠಿಣವಾದ ನಿರ್ಬಂಧಗಳನ್ನು ಹೇರುವುದು ಮತ್ತು ಟ್ರೇಡ್ ಯೂನಿಯನ್ ಚಟುವಟಿಕೆಗಳನ್ನು ನಡೆಸಲು ನಾಗರಿಕ ಮತ್ತು ಕ್ರಿಮಿನಲ್ ಹೊಣೆಗಾರಿಕೆಯಿಂದ ಟ್ರೇಡ್ ಯೂನಿಯನ್ ಕಾರ್ಯಕರ್ತರಿಗೆ ವಿನಾಯಿತಿ ನೀಡಲು ನಿರಾಕರಿಸುವುದು ಇವೆಲ್ಲ ಬ್ರಿಟಿಶ್ ಸರ್ಕಾರದ ವಸಾಹತುಶಾಹಿ ವಿಧಾನವನ್ನು ಸೂಚಿಸಿತು. ಭಾರತದ ಕಾರ್ಮಿಕ ಸಂಘಗಳು ಈ ಕಾಯಿದೆಯ ಉದ್ದೇಶಗಳ ವಿರುದ್ಧ ತೀವ್ರ ಪ್ರತಿಭಟನೆ ನಡೆಸಿದವು.

1927 ರಲ್ಲಿ ದೆಹಲಿಯಲ್ಲಿ ನಡೆದ ಎಐಟಿಯುಸಿಯ ಏಳನೇ ಅಧಿವೇಶನವು ಈ ಕಾಯ್ದೆಯನ್ನು ತೀವ್ರವಾಗಿ ಟೀಕಿಸಿತು. ಯೂನಿಯನ್ ನಿಧಿಯ ಬಳಕೆಗೆ ನಿರ್ಬಂಧ ಹೇರುವ ನಿಬಂಧನೆಗಳನ್ನು ವಿಶೇಷವಾಗಿ ವಿರೋಧಿಸಲಾಯಿತು. ಇಂಗ್ಲೆಂಡ್‌ನಂತೆಯೇ, ಭಾರತದಲ್ಲಿಯೂ ಸಹ ಟ್ರೇಡ್ ಯೂನಿಯನ್ ನಿಧಿ ಅಧಿಕೃತ ನಿರ್ಬಂಧಗಳಿಂದ ಮುಕ್ತವಾಗಿರಬೇಕು ಎಂದು ಮತ್ತಷ್ಟು ಒತ್ತಾಯಿಸಲಾಯಿತು.

1928 ರಲ್ಲಿ ಎನ್. ಎಂ. ಜೋಶಿ ಅವರು ವಿಧಾನಸಭೆಯಲ್ಲಿ ನೋಂದಾಯಿಸದ ಸಂಘಗಳಿಗೆ ಕಾನೂನು ಸೌಲಭ್ಯಗಳನ್ನು ಕೋರಿ ಮಸೂದೆಯನ್ನು ಮಂಡಿಸಿದರು, ಆದರೆ ಮಸೂದೆಯನ್ನು ಸೋಲಿಸಲಾಯಿತು. ಕಾರ್ಮಿಕ ಸಂಘಗಳ ಮೇಲೆ ಕಟ್ಟುನಿಟ್ಟಿನ ನಿಯಂತ್ರಣವನ್ನು ಸಾಧಿಸುವ ಸರ್ಕಾರದ ಉದ್ದೇಶವು ಮೂರು ವರ್ಷಗಳ ನಂತರ ಕೈಗಾರಿಕಾ ವಿವಾದ ಕಾಯ್ದೆಯನ್ನು ಅಂಗೀಕರಿಸುವ ಸಮಯದಲ್ಲಿ ಮತ್ತಷ್ಟು ಹೊರಹೊಮ್ಮಿತು.

ಆ ಕಾಲದ ಕಾರ್ಮಿಕ ಮುಖಂಡರು ನೋಂದಾಯಿತ ಮತ್ತು ನೋಂದಾಯಿಸದ ಸಂಘಗಳ ನಡುವಿನ ತಾರತಮ್ಯದ ವಿರುದ್ಧ ಮತ್ತು ವಿಶೇಷವಾಗಿ ನೋಂದಾಯಿಸದ ಸಂಘಗಳನ್ನು ವಾಸ್ತವಿಕವಾಗಿ ಕಾನೂನುಬಾಹಿರಗೊಳಿಸುವ ಪ್ರಯತ್ನದ ವಿರುದ್ಧ ಜೋರಾಗಿ ಧ್ವನಿಯೆತ್ತಿದ್ದರು. ಭಾರತದ ಟ್ರೇಡ್ ಯೂನಿಯನ್ ಚಳವಳಿಯ ಶೈಶವಾವಸ್ಥೆಯಲ್ಲಿ ನೋಂದಾಯಿಸದ ಸಂಘಗಳ ಅಸ್ತಿತ್ವವು ಸ್ವಾಭಾವಿಕವಾಗಿದೆ ಮತ್ತು ಆದ್ದರಿಂದ ಈ ಸಂಘಗಳಿಗೆ ಕಾನೂನಿನ ರಕ್ಷಣೆಯನ್ನು ವಿಸ್ತರಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ ಎಂದು ಅವರು ಪರಿಗಣಿಸಿದರು. ಈ ಅಭಿಪ್ರಾಯವನ್ನು ಬೆಂಬಲಿಸಿ ಕಾರ್ಮಿಕ ಮುಖಂಡರಲ್ಲಿ ಇಬ್ಬರು, ಲಾಲಾ ಲಜಪತ್ ರಾಯ್ ಮತ್ತು ಎನ್. ಎಂ. ಜೋಶಿಯವರು ವಿಧಾನಸಭೆಯಲ್ಲಿ ತೀವ್ರವಾಗಿ ಮಾತನಾಡಿದರು.

ವಾಸ್ತವದಲ್ಲಿ, ಭಾರತದಲ್ಲಿ ಕಾರ್ಮಿಕ ಸಂಘಗಳು ರೂಪಗೊಳ್ಳಲು ಪ್ರಾರಂಭಿಸಿದಾಗ ಮತ್ತು ದೇಶದ ಅನೇಕ ಭಾಗಗಳಲ್ಲಿ ಚಳವಳಿ ಸ್ಫೋಟಗೊಂಡಾಗ, ಟ್ರೇಡ್ ಯೂನಿಯನ್ ಚಳವಳಿಯನ್ನು ಆರ್ಥಿಕ ಬೇಡಿಕೆಗಳ ಕಿರಿದಾದ ಪರಿಧಿಯಲ್ಲಿ ಸೀಮಿತಗೊಳಿಸುವ ಮತ್ತು ರಾಜಕೀಯ ಪಾತ್ರವನ್ನು ನಿರ್ವಹಿಸಲು ಅದಕ್ಕೆ ಅನುಮತಿಸಬಾರದು ಎನ್ನುವ ಸಾಮ್ರಾಜ್ಯಶಾಹಿ ಸರ್ಕಾರದ ತಂತ್ರಗಳು, ಆತಂಕ ಮತ್ತು ಭೀತಿಯಿಂದ ಕೂಡಿದ್ದವು. ಕಾರ್ಮಿಕ ವರ್ಗವು ಯಾವುದೇ ರೀತಿಯಲ್ಲಿ ರಾಷ್ಟ್ರೀಯ ವಿಮೋಚನಾ ಆಂದೋಲನಕ್ಕೆ ಸೇರಬಾರದು ಎಂದು ಭಯಭೀತರಾಗಿದ್ದ ಸಾಮ್ರಾಜ್ಯಶಾಹಿಗಳು ಬಯಸಿದ್ದರು. ಮತ್ತು ಈ ಉದ್ದೇಶವು ಟ್ರೇಡ್ ಯೂನಿಯನ್ ಕಾಯ್ದೆಯಲ್ಲಿ ವಿವಿಧ ನಿರ್ಬಂಧಿತ ನಿಬಂಧನೆಗಳನ್ನು ಅಳವಡಿಸಲು ಸರ್ಕಾರಕ್ಕೆ ಕಾರಣವಾಯಿತು. ರಾಜಕೀಯ ಉದ್ದೇಶಗಳಿಗಾಗಿ ಯೂನಿಯನ್ ನಿಧಿಯನ್ನು ಖರ್ಚು ಮಾಡುವುದನ್ನು ನಿಷೇಧಿಸುವ ನಿಬಂಧನೆ, ಈ ಕ್ರಮಗಳ ಜಾರಿಯು ಭಾರತದ ಟ್ರೇಡ್ ಯೂನಿಯನ್ ಆಂದೋಲನದ ಮುಕ್ತ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಸಾಮ್ರಾಜ್ಯಶಾಹಿ ಸರ್ಕಾರದ ನೇರ ಹಸ್ತಕ್ಷೇಪಕ್ಕೆ ಸಮನಾಗಿತ್ತು.

ಕಾರ್ಮಿಕ ವರ್ಗದ ಆರ್ಥಿಕ ಪರಿಸ್ಥಿತಿ

ಕೈಗಾರಿಕೆ ಮತ್ತು ಕೈಗಾರಿಕಾ ಕೇಂದ್ರದ ವ್ಯತ್ಯಾಸಕ್ಕೆ ಅನುಗುಣವಾಗಿ ಕಾರ್ಮಿಕರ ವೇತನಕ್ಕೆ ಸಂಬಂಧಿಸಿದಂತೆ ಸರಿಯಾದ ಸಂಖ್ಯಾಶಾಸ್ತ್ರೀಯ ದತ್ತಾಂಶವನ್ನು ಸಂಗ್ರಹಿಸುವ ಯಾವುದೇ ವ್ಯವಸ್ಥೆಯು ಆರಂಭಿಕ ಅವಧಿಯಲ್ಲಿ ಇರಲಿಲ್ಲ. ಆದರೆ ಕಾರ್ಮಿಕರ ಬಡತನಕ್ಕೆ ಯಾವುದೇ ಮಿತಿಯಿರಲಿಲ್ಲ ಎಂದು ವಿವಿಧ ಸಮಿತಿಗಳು, ಆಯೋಗಗಳು ಮತ್ತು ಅಧಿಕೃತ ವೀಕ್ಷಕರು ಒಪ್ಪಿಕೊಂಡರು. ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾದ ವರದಿಗಳು ಸಹ ಅದೇ ಕಥೆಯನ್ನು ಹೇಳುತ್ತಿದ್ದವು. 1934 ರಲ್ಲಿ ಮೊದಲ ಬಾರಿಗೆ ಮುಂಬೈ ಕಾರ್ಮಿಕ ಕಚೇರಿ ಜವಳಿ ಕಾರ್ಮಿಕರ ವೇತನ ದರಗಳ ಗಣತಿಯನ್ನು ನಡೆಸಿತು. ಈ ಜನಗಣತಿಯು

ಪುಟ 14 ನೋಡಿ

ಅಚ್ಛೇದಿನ್‌ಗಳಲ್ಲಿ ಎಲ್.ಪಿ.ಜಿ. ಬೆಲೆ ದುಪ್ಪಟ್ಟು; ಪೆಟ್ರೋಲ್-ಡೀಸೆಲ್ ಸುಂಕ ಐದೂವರೆ ಪಟ್ಟು!

ಕೇಂದ್ರ ತೈಲ ಮಂತ್ರಿ ಧರ್ಮೇಂದ್ರ ಪ್ರಸಾದ್ ಮಾರ್ಚ್ 8ರಂದು ಲೋಕಸಭೆಯಲ್ಲಿ ಕೊಟ್ಟ ಅಂಕಿ–ಅಂಶಗಳ ಪ್ರಕಾರ ಕಳೆದ ಏಳು ವರ್ಷಗಳಲ್ಲಿ ಅಡುಗೆ ಅನಿಲದ ಬೆಲೆ ಎರಡು ಪಟ್ಟು ಅಗಿದೆ. ಇದೇ ವೇಳೆಯಲ್ಲಿ ಅಡುಗೆ ಅನಿಲದ ಮೇಲಿನ ವಿಧಿಸಿದ ತೆರಿಗೆಗಳಿಂದ ಕೇಂದ್ರ ಸರಕಾರ ಸಂಗ್ರಹಿಸಿರುವ ಮೊತ್ತದಲ್ಲಿ 459% ಏರಿಕೆಯಾಗಿದೆ.

ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ ಮಂತ್ರಿಗಳು ನೀಡಿದ ಅಧಿಕೃತ ಅಂಕಿ–ಅಂಶಗಳು ಹೀಗಿವೆ:

- ಮಾರ್ಚ್ 1, 2014 ರಲ್ಲಿ ಅಂದರೆ 2014ರ ಲೋಕಸಭಾ ಚುನಾವಣೆಗಳು ನಡೆಯುವ ವೇಳೆಗೆ 14.2 ಕೆ.ಜಿ. ಅಡುಗೆ ಅನಿಲದ ಸಿಲಿಂಡರ್‌ನ ಬೆಲೆ ರೂ.410.5. ಮಾರ್ಚ್ 1, 2021 ರಂದು ಅದು ರೂ. 819 ಆಗಿದೆ. ಇದೇ ಡಿಸೆಂಬರ್ 2020ಲ್ಲೂ ಅದರ ಬೆಲೆ ಇದ್ದದ್ದು ರೂ. 594.
- ಪಡಿತರದ ಮೂಲಕ ಬಡವರಿಗೆ ಹಂಚುವ ಸೀಮೆ ಎಣ್ಣೆ ಬೆಲೆ ಮಾರ್ಚ್ 2014ರಲ್ಲಿ ರೂ.14.96 ಇತ್ತು. ಮಾರ್ಚ್ 2021ರಲ್ಲಿ ಇದು ರೂ.35.35. ಅಂದರೆ ಎರಡು ಪಟ್ಟಿಗಿಂತಲೂ ಹೆಚ್ಚು.



ನೀವು ಆಕೆಗೆ ಉಚಿತ ಗ್ಯಾಸ್ ಸಿಲಿಂಡರ್ ಕೊಡುವ ವರೆಗೆ ಇದ್ದಲು ಹೊಗೆಯಿಂದಾಗಿ ಆಕೆಗೆ ಕಣ್ಣಿರು ಬರುತ್ತಿತ್ತು.
ಈಗ ಅವಳಿಗೆ ಗ್ಯಾಸ್ ಬೆಲೆಗಳನ್ನು ನೋಡಿ ಕಣ್ಣೀರು ಬರುತ್ತಿದೆ..
ವ್ಯಂಗ್ಯಚಿತ್ರ: ಅಲೋಕ್ ನಿರಂತರ್

ಕಳೆದ ಎರಡು ವರ್ಷಗಳಲ್ಲಿ ಸಣ್ಣ ಬೆಲೆಯೇರಿಕೆಗಳು ಅಡುಗೆ ಅನಿಲ ಮತ್ತು ಪಡಿತರ ಸೀಮೆ ಎಣ್ಣೆಯ ಮೇಲಿನ ಸಬ್ಸಿಡಿಗಳನ್ನು ನಿರ್ಮೂಲ ಮಾಡಿವೆ!

"ಸರಕಾರ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಅನುಕ್ರಮವಾಗಿ ಜೂನ್ 26,2010 ರಿಂದ ಮತ್ತು ಅಕ್ಟೋಬರ್ 19. 2014ರಿಂದ ಮಾರುಕಟ್ಟೆ ನಿರ್ಧಾರಿತಗೊಳಿಸಿತು" ಎಂದು ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದರು. ಅಂದರೆ ಹಿಂದಿನ ಯುಪಿಎ ಸರಕಾರ ಪೆಟ್ರೋಲ್ ಬೆಲೆಗಳನ್ನು ತೈಲ ಮಾರಾಟ ಕಂಪನಿಗಳು ನಿರ್ಧರಿಸಲು ಬಿಟ್ಟಿತು. ಅದರಿಂದ ಆದ ಬೆಲೆಯೇರಿಕೆಗಳನ್ನು ಆಗ ಪ್ರತಿಪಕ್ಷವಾಗಿದ್ದ ಬಿಜೆಪಿ ಕಟುವಾಗಿ ವಿರೋಧಿಸುತ್ತಿದ್ದರೂ, ಅದು ಅಧಿಕಾರಕ್ಕೆ ಬಂದ ಮೇಲೆ ಈ ರೀತಿಯ ಬೆಲೆ ನಿರ್ಧಾರವನ್ನು ವಾಪಾಸು ತೆಗೆದುಕೊಳ್ಳುವ ಬದಲು ಅದನ್ನು ಮುಂದುವರಿಸಿದ್ದೇ ಅಲ್ಲದೆ, ಸರಕು ಸಾಗಾಣಿಕೆ ಹೆಚ್ಚಾಗಿ ಅವಲಂಬಿಸಿರುವ ಡೀಸೆಲ್ ಬೆಲೆಗಳಿಗೂ ಅದನ್ನು ವಿಸ್ತರಿಸಿತು!

ಬೆಲೆಯೇರಿಕೆಗಳ ಹೊಣೆಯನ್ನು ಈ ರೀತಿ ತೈಲ ಮಾರಾಟ ಕಂಪನಿಗಳ ಮೇಲೆ ಹೊರಿಸುತ್ತಲೇ, ಇವುಗಳ ಮೇಲಿನ ಅಬಕಾರಿ ಸುಂಕಗಳನ್ನು ನವಂಬರ್ 2014ರಿಂದ ಜನವರಿ 2016ರ ನಡುವೆ 9 ಬಾರಿ ಏರಿಸಿತು.

ಇದರಿಂದಾಗಿ, ಈ 15 ತಿಂಗಳ ಅವಧಿಯಲ್ಲಿ, ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಗಳು ಇಳಿಯುತ್ತಿದ್ದರೂ, ಅದರ ಪ್ರಯೋಜನ ಭಾರತದ ಬಳಕೆದಾರಿಗೆ ಸಿಗದಂತಾಯಿತು;

ಪೆಟ್ರೋಲ್ ಮೇಲಿನ ಸುಂಕದಲ್ಲಿ ಲೀಟರಿಗೆ ರೂ.11.77 ಮತ್ತು ಡೀಸೆಲ್ ಮೇಲೆ ರೂ.13.47 ರಷ್ಟು ಏರಿತು.

ಅಕ್ಟೋಬರ್ 2017ರಲ್ಲಿ ಸುಂಕವನ್ನು ಲೀಟರಿಗೆ ರೂ.2, ಒಂದು ವರ್ಷದ ನಂತರ ಮತ್ತೆ ರೂ.1.50ರಷ್ಟು ಇಳಿಸಿದರೂ, ಜುಲೈ 2019ರಲ್ಲಿ ಮತ್ತೆ ಲೀಟರಿಗೆ ರೂ.2ರಂತೆ ಏರಿಸಿತು. ಮತ್ತೆ ಮಾರ್ಚ್ 2020ರಲ್ಲಿ ಲೀಟರಿಗೆ ರೂ.3, ಮತ್ತು ಮೇ 2020ರಲ್ಲಿ ಪೆಟ್ರೋಲ್ ಮೇಲೆ ಲೀಟರಿಗೆ ರೂ.10 ಮತ್ತು ಡೀಸೆಲ್ ಮೇಲೆ ರೂ.13 ರಂತೆ ಏರಿಸಿತು.

- ಕಳೆದ ಏಳು ವರ್ಷಗಳಲ್ಲಿ 12 ಬಾರಿ ಸುಂಕಗಳನ್ನು ಏರಿಸಿದ ಪರಿಣಾಮವಾಗಿ ಈಗ ಕೇಂದ್ರ ಸರಕಾರ ಪೆಟ್ರೋಲ್ ಮೇಲೆ ಲೀಟರಿಗೆ ರೂ.32.90 ಮತ್ತು ಡೀಸೆಲ್ ಮೇಲೆ ರೂ. 31.98 ಸುಂಕ



ವ್ಯಂಗ್ಯಚಿತ್ರ: ಪಿ. ಮಹಮ್ಮದ್

ವಿಧಿಸುತ್ತಿದೆ.

- ಇದರಿಂದಾಗಿ, ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಅಬಕಾರಿ ಸುಂಕಗಳಿಂದ ಕೇಂದ್ರ ಸರಕಾರ 2013ರಲ್ಲಿ ರೂ.52, 537 ಕೋಟಿ ಸಂಗ್ರಹಿಸಿದ್ದರೆ, 2019–20ರಲ್ಲಿ ಇದು ರೂ. 2.13 ಲಕ್ಷ ಕೋಟಿ ಗೇರಿತು. 2020–21ರಲ್ಲಿ ಈ 11 ತಿಂಗಳಲ್ಲೇ ಅದು ರೂ.2.94 ಲಕ್ಷ ಕೋಟಿ ಎಂದು ಮಂತ್ರಿಗಳು ಸಲ್ಲಿಸಿರುವ ಅಂಕಿ–ಅಂಶಗಳು ಹೇಳುತ್ತವೆ. ಅಂದರೆ ಐದೂವರೆ ಪಟ್ಟಿಗಿಂತಲೂ ಹೆಚ್ಚು!
- ಪೆಟ್ರೋಲ್, ಡೀಸೆಲ್, ವಿಮಾನ ಇಂಧನ, ನೈಸರ್ಗಿಕ ಇಂಧನ ಮತ್ತು ಕಚ್ಚಾತೈಲದ ಮೇಲಿನ ಅಬಕಾರಿ ಸುಂಕಗಳಿಂದ ಎಪ್ರಿಲ್ 2020 ರಿಂದ ಜನವರಿ 2021ರ 10 ತಿಂಗಳ ಅವಧಿಯಲ್ಲಿ ರೂ.3.01 ಲಕ್ಷ ಕೋಟಿ ಸಂಗ್ರಹಿಸಿದೆ.

ಮುಖ್ಯ ನ್ಯಾಯಾಧೀಶರಿಗೆ ಪತ್ರ: ನಿಂದನೆಯೂ ಇಲ್ಲ,ದ್ವೇಷವೂ ಇಲ್ಲ

ತದ್ವಿರುದ್ಧವಾಗಿ ಬಾರ್ ಕೌನ್ಸಿಲ್ ನಿರ್ಣಯ ಭಯಪಡಿಸುವುದಕ್ಕಾಗಿ ಎನ್ನಬಹುದು-ಬೃಂದಾ ಕಾರಟ್

ಎರಡು ಮೊಕದ್ದಮೆಗಳಲ್ಲಿ ಸುಪ್ರಿಂ ಕೋರ್ಟಿನ ಮುಖ್ಯ ನ್ಯಾಯಾಧೀಶರ ಟಿಪ್ಪಣಿಗಳ ಬಗ್ಗೆ ಸಿಪಿಐ(ಎಂ) ಪೊಲಿಟ್ ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಅವರು ಬರೆದ ಪತ್ರದ ವಿರುದ್ಧ ಬಾರ್ ಕೌನ್ಸಿಲ್ ಆಫ್ ಇಂಡಿಯಾ ಒಂದು ನಿರ್ಣಯವನ್ನು ಅಂಗೀಕರಿಸಿ ಮಾರ್ಚ್ 4ರಂದು ಪತ್ರಿಕೆಗಳಿಗೆ ಬಿಡುಗಡೆ ಮಾಡಿದೆ. ಇದೊಂದು ಅಭೂತಪೂರ್ವ ನಡೆ. ಇದರಲ್ಲಿ ಬೃಂದಾ ಅವರ ಮೇಲೆ ಹಲವು ವೈಯಕ್ತಿಕ ಆರೋಪಗಳನ್ನೂ ಹಾಕಲಾಗಿದೆ. ಈ ನಿರ್ಣಯದ ಕುರಿತು ಬೃಂದಾ ಕಾರಟ್ ಬಾರ್ ಕೌನ್ಸಿಲ್‌ನ ಅಧ್ಯಕ್ಷ ಎಂ.ಕೆ.ಮಿಶ್ರ ಅವರಿಗೆ ಪತ್ರ ಬರೆದಿದ್ದಾರೆ.

ಬಾರ್ ಕೌನ್ಸಿಲ್‌ನ ಈ ನಿರ್ಣಯದಲ್ಲಿ ಅದೇಕೋ ಕೆಲವು ವಾಕ್ಯಗಳನ್ನು ಬ್ಲಾಕ್ ಔಟ್ ಮಾಡಲಾಗಿದೆ. ಇದರಲ್ಲಿ ಬೃಂದಾ ಕಾರಟ್ ಹೆಸರನ್ನು ಅತ್ಯಂತ ಹೀನಾಯ ರಿತಿಯಲ್ಲಿ ಹಲವೆಡೆಗಳಲ್ಲಿ ಪ್ರಸ್ತಾಪಿಸಲಾಗಿದೆ. ಆದರೆ ತಾನು ಬಾರ್ ಕೌನ್ಸಿಲ್‌ನ ಅಧ್ಯಕ್ಷರಿಗೆ ಈ ಪತ್ರ ಬರೆಯುತ್ತಿರುವುದು ಇಂತಹ ಅಲ್ಪತನದ ವೈಯಕ್ತಿಕ ಆರೋಪಗಳಿಗೆ ಉತ್ತರಿಸಲು ಅಲ್ಲ, ಬದಲಾಗಿ, ಈ ನಿರ್ಣಯದಲ್ಲಿ ಎತ್ತಿರುವ ಹಲವು ಪ್ರಶ್ನೆಗಳು ನ್ಯಾಯಕ್ಕಾಗಿ ಹೋರಾಟದ ಮೇಲೆ ಹೆಚ್ಚಿನ ಪರಿಣಾಮ ಬಿರುವಂತದ್ದು ಎಂಬ ಕಾರಣಕ್ಕಾಗಿ. ಮಹಿಳೆಯರ ಹಕ್ಕುಗಳು ಮತ್ತು ದಮನಿತರಿಗೆ ನ್ಯಾಯಕ್ಕಾಗಿ ಒಬ್ಬ ವ್ಯಕ್ತಿಯ ಕೆಲಸದ ದಾಖಲೆಯೇ ತಾನಾಗಿ ಬಹಳಷ್ಟು ಹೇಳುತ್ತದೆ. ಆದರೂ ಒಂದು ಶಾಸನಬದ್ಧ ಸಂಸ್ಥೆಯಾದ ಬಾರ್ ಕೌನ್ಸಿಲ್‌ನ ಪಾತ್ರದ ಸಂದರ್ಭದಲ್ಲಿ ಇದನ್ನು ಪರೀಕ್ಷಿಸಬೇಕಾಗಿದೆ ಎಂಬುದನ್ನು ತಮ್ಮ ಪತ್ರದ ಆರಂಭದಲ್ಲಿ ಅವರು ಕೌನ್ಸಿಲ್‌ನ ಅಧ್ಯಕ್ಷರ ಗಮನಕ್ಕೆ ತಂದಿರುವ ಬೃಂದಾ ಕಾರಟ್, ಬಾರ್ ಕೌನ್ಸಿಲ್‌ನ ಈ ನಿರ್ಣಯದ ಕೆಲವು ಪದಗಳು ಭಯಪಡಿಸುವುದಕ್ಕಾಗಿ ಎಂದು ಭಾವಿಸಬಹುದು, ಒಬ್ಬ ವ್ಯಕ್ತಿ ಅಥವ ವ್ಯಕ್ತಿಗಳನ್ನು ಭಯಪಡಿಸುವುದು ಮತ್ತು ಬೆದರಿಸುವುದು ಬಾರ್ ಕೌನ್ಸಿಲ್‌ನ ವಿಧಿ–ವಿಧಾನದೊಳಗೆ ಇದೆಯೇ ಎಂದು ಪತ್ರದ ಕೊನೆಯಲ್ಲಿ ತೀವ್ರ ಸಂದೇಹ ವ್ಯಕ್ತಪಡಿಸಿದ್ದಾರೆ.

ಈ ಪತ್ರದಲ್ಲಿ ಬೃಂದಾ ಅವರು ಮುಖ್ಯವಾಗಿ ನಾಲ್ಕು ಅಂಶಗಳನ್ನು ಎತ್ತಿದ್ದಾರೆ. ಅವು ಹೀಗಿವೆ:

1. ನ್ಯಾಯಾಧೀಶರ ಟಿಪ್ಪಣಿಗಳಿಗ ಕಾನೂನಾತ್ಮಕ ಪಾವಿತ್ರ್ಯ ಇದ್ದಿರಲಿಕ್ಕಿಲ್ಲ, ಆದರೆ ಪ್ರತಿಗಾಮಿ ಸಾಮಾಜಿಕ ನಿಲುವುಗಳಿಗೆ ಅವು ನ್ಯಾಯಬದ್ಧತೆ ಒದಗಿಸುತ್ತವೆ.

ಮುಖ್ಯ ನ್ಯಾಯಾಧೀಶರರಿಗೆ ಬರೆದ ಪತ್ರದಲ್ಲಿ ಪ್ರಸ್ತಾಪಿಸಿದ ಟಿಪ್ಪಣಿಗಳು ಒಂದು ತೀರ್ಪಿನ ಭಾಗವೇನೂ ಅಲ್ಲ, ಅವು ನ್ಯಾಯಾಲಯದ ಆದೇಶದ ಭಾಗವಾಗಿ ಬಂದಿರದಿರುವಾಗ ಏಕಿಷ್ಟು ಬೊಬ್ಬೆ ಎಂದು ಈ ನಿರ್ಣಯ ಅಬ್ಬರದಿಂದ ಪ್ರಶ್ನಿಸುತ್ತದೆ. ಆದರೆ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಪ್ರಸಾರಗೊಂಡಿರುವ ಮುಖ್ಯ ನ್ಯಾಯಾಧೀಶರ ಟಿಪ್ಪಣಿಗಳ ಕುರಿತ ವರದಿಗಳನ್ನು ಈ ನಿರ್ಣಯ ಎಲ್ಲೂ ನಿರಾಕರಿಸಿಲ್ಲ. ಅವು ಒಂದು ತೀರ್ಪಿನ ಭಾಗವಾಗಿವೆಯೋ ಇಲ್ಲವೋ ಎಂಬುದು ಇಲ್ಲಿ ಗೌಣ. ಇಂತಹ ಟಿಪ್ಪಣಿಗಳನ್ನು ನ್ಯಾಯಾಲಯದಲ್ಲಿ ಬಹಿರಂಗವಾಗಿ ಮಾಡಲಾಗಿದೆ, ಮತ್ತು ಅವು ವ್ಯಾಪಕವಾಗಿ ವರದಿಯಾಗಿವೆ ಎಂಬ ಸಂಗತಿಯೇ ಸಮಾಜದ ಮೇಲೆ ತನ್ನದೇ ಪರಿಣಾಮವನ್ನು ಬೀರುತ್ತದೆ. ಅತ್ಯಾಚಾರದ ಆರೋಪಿಯೊಬ್ಬನಿಗೆ ಸಂತ್ರಸ್ತೆಯನ್ನು ಮದುವೆಯಾಗುತ್ತೀಯಾ ಎಂಬಂತಹ ಉನ್ನತ ಅಧಿಕಾರಸ್ಥರ ಟಿಪ್ಪಣಿಗಳು ಕ್ರಿಮಿನಲ್‌ಗಳಿಂದ ಸಂತ್ರಸ್ತರಾದವರ ಮೇಲೆ, ವಿಶೇಷವಾಗಿ ಈ ಪ್ರಕರಣದಲ್ಲಿ ಒಬ್ಬ ಅಪ್ರಾಪ್ತ ವಯಸ್ಕಳ ವಿರುದ್ಧ ಅಪರಾದದ ಅಗಾಧತೆಯನ್ನು ದುರ್ಬಲಗೊಳಿಸುವಲ್ಲಿ ಅತ್ಯಂತ ಹಾನಿಕಾರಕ ಪರಿಣಾಮವನ್ನು ಬೀರುತ್ತದೆ. ಟಿಪ್ಪಣಿಗಳಿಗ ಕಾನೂನಾತ್ಮಕ ಪಾವಿತ್ರ್ಯ ಇದ್ದಿರಲಿಕ್ಕಿಲ್ಲ, ಆದರೆ ಪ್ರತಿಗಾಮಿ ಸಾಮಾಜಿಕ ನಿಲುವುಗಳಿಗೆ ಅವು ನ್ಯಾಯಬದ್ಧತೆ ಒದಗಿಸುತ್ತವೆ. ಇದನ್ನೇ ಮುಖ್ಯ ನ್ಯಾಯಾಧೀಶರಿಗೆ ಬರೆದ ಪತ್ರದಲ್ಲಿ ಉಲ್ಲೇಖಿಸಿರುವುದು. ಬಾರ್ ಕೌನ್ಸಿಲ್ ನಿಜವಾಗಿಯೂ ಪ್ರತಿಕ್ರಿಯಿಸ ಬಯಸಿದ್ದರೆ, ಅದು ಇದುವರೆಗಿನ ಅತ್ಯುತ್ತಮ ನ್ಯಾಯಾಂಗ ಆಚರಣೆಗಳನ್ನು ಮತ್ತು ಮಾನಕಗಳನ್ನು ಎತ್ತಿ ಹಿಡಿಯಬೇಕಾಗಿತ್ತು ಮತ್ತು ಇಂತಹ ಟಿಪ್ಪಣಿಗಳ ನಕಾರಾತ್ಮಕ ಪರಿಣಾಮಗಳನ್ನು ಸಂಬಂಧಪಟ್ಟ ಕೋರ್ಟಿನೊಂದಿಗೆ ಎತ್ತಬೇಕಾಗಿತ್ತು.

2. ನ್ಯಾಯಾಂಗ ಪ್ರಕ್ರಿಯೆಗಳು ಅಪರಾಧ ಸಂತ್ರಸ್ತರ ಹಿತಗಳನ್ನು ನ್ಯಾಯ ಪ್ರಕ್ರಿಯೆಯ ಕೇಂದ್ರದಲ್ಲಿಡಬೇಕಾದ ಅಗತ್ಯವಿದೆಯೇ ಹೊರತು, ಅಪರಾಧ ಎಸಗಿದವರ ಹಿತವನ್ನಲ್ಲ ಎಂಬುದನ್ನು ಇಂತಹ ಹಿರಿಯ ವಕೀಲರುಗಳ ಒಂದು ಮಂಡಳಿಗೆ ಕಂಡಿಲ್ಲ ಏಕೆ ಎಂಬುದು ಪರೀಕ್ಷಿಸಬೇಕಾದ ಸಂಗತಿ

ಬಾರ್ ಕೌನ್ಸಿಲ್ ನಿರ್ಣಯ ಅತ್ಯಾಚಾರಿಯ ತಂದೆ–ತಾಯಿ ಮತ್ತು ಅಪ್ರಾಪ್ತವಯಸ್ಕಳ ನಡುವೆ ಒಂದು "ಲಿಖಿತ ಒಪ್ಪಂದ"ದ ಮಾತಾಡುತ್ತದೆ. ಇಂತಹ ಒಂದು ಒಪ್ಪಂದ ಯಾವುದೇ ರೀತಿಯಲ್ಲಿ ಕಾನೂನಾತ್ಮಕವೇ? ಯಾವ ಕಾನೂನಿನ ಅಡಿಯಲ್ಲಿ ಆ ಹುಡುಗಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದಳು ಎಂದು ಬಾರ್ ಕೌನ್ಸಿಲ್‌ಗೆ ತಿಳಿದಿಲ್ಲವೇ? ಮದುವೆಯ ಆಹ್ವಾನವನ್ನು ಆಕೆ ತಿರಸ್ಕರಿಸಿದಳು ಎಂದು ಬಾರ್ ಕೌನ್ಸಿಲ್‌ಗೆ ತಿಳಿದಿಲ್ಲವೇ? ಮತ್ತು ಅತ್ಯಂತ ಮಹತ್ವದ ಪ್ರಶ್ನೆಯೆಂದರೆ, ಆಕೆ ಅಪ್ರಾಪ್ತವಯಸ್ಕಳಾಗಿದ್ದಾಗ ಆಕೆಯ ಪರವಾಗಿ ಇಂತಹದೊಂದು ಒಪ್ಪಂದವನ್ನು ಮಾಡಿಕೊಂಡಿದ್ದರೂ, ಆಕೆ ಈಗ ವಯಸ್ಕಳಾಗಿರುವಾಗ, ಅತ್ಯಾಚಾರಿಯನ್ನು ಮದುವೆಯಾಗುತ್ತೀಯಾ ಎಂದು ಕೇಳುವ ಮೊದಲು, ಆಕೆಯ ಅಭಿಪ್ರಾಯವನ್ನು ಕೇಳುವುದು ನ್ಯಾಯಾಲಯದ ಕರ್ತವ್ಯವಾಗಿರಲಿಲ್ಲವೇ? ಅಪ್ರಾಪ್ತವಯಸ್ಕ ಸಂತ್ರಸ್ತೆಯ ಬಗ್ಗೆ ಯಾವುದೇ ರೀತಿಯ ಸಂವೇದನೆಯನ್ನು ಬಾರ್ ಕೌನ್ಸಿಲ್ ನಿರ್ಣಯ ತೋರಿಸುತ್ತಿಲ್ಲ ಎಂಬುದು ನಿಜಕ್ಕೂ ವ್ಯಥೆ ಪಡಬೇಕಾದ ಸಂಗತಿ. ನ್ಯಾಯಾಂಗ ಪ್ರಕ್ರಿಯೆಗಳು, ವಿಶೇಷವಾಗಿ ಅಪ್ರಾಪ್ತವಯಸ್ಕಳ ಮೇಲೆ ಅತ್ಯಾಚಾರದ ಪ್ರಕರಣಗಳಲ್ಲಿ, ಸಂತ್ರಸ್ತರ ಹಿತಗಳನ್ನು ನ್ಯಾಯ ಪ್ರಕ್ರಿಯೆಯ ಕೇಂದ್ರದಲ್ಲಿಡಬೇಕಾದ ಅಗತ್ಯವಿದೆಯೇ ಹೊರತು, ಅಪರಾಧ ಎಸಗಿದವರ ಹಿತವನ್ನಲ್ಲ ಎಂಬುದನ್ನು ಇಂತಹ ಹಿರಿಯ ವಕೀಲರುಗಳ ಒಂದು ಮಂಡಳಿಗೆ ಕಂಡಿಲ್ಲ ಏಕೆ ಎಂಬುದು ಪರೀಕ್ಷಿಸಬೇಕಾದ ಸಂಗತಿ.

3. ಒಂದು ಅಭಿಪ್ರಾಯ "ದುರುದ್ದೇಶಪೂರಿತ" ಎಂದು ಕಳಂಕ ಹಚ್ಚುವ ಹಕ್ಕು ಬಾರ್ ಕೌನ್ಸಿಲ್ ಗೆ ಇದೆಯೇ?

ಔರಂಗಾಬಾದ್ ಹೈಕೋರ್ಟ್ ಕೆಳಗಿನ ಕೋರ್ಟ್ ನೀಡಿದ್ದ ಜಾಮೀನನ್ನು ತಿರಸ್ಕರಿಸಿತು. ಆತ ಅಪೀಲು ಹೋಗಿರದಿದ್ದರೆ ಬಂಧಿತನಾಗುತ್ತಿದ್ದ. ಆದರೆ ಸುಪ್ರಿಂ ಕೋರ್ಟ್ ಆತನಿಗೆ "ರೆಗ್ಯುಲರ್ ಜಾಮೀನಿ"ಗೆ ಅರ್ಜಿ ಸಲ್ಲಿಸಲು ಒಂದು ತಿಂಗಳ ರಕ್ಷಣೆ ಕೊಟ್ಟಿದೆ. ಇದನ್ನು "ಮೆಚ್ಚಬೇಕಾಗಿದೆ" ಎಂದು ಬಾರ್ ಕೌನ್ಸಿಲ್ ನಿರ್ಣಯ ಹೇಳುತ್ತದೆ. ಒಂದು ತಿಂಗಳ ಸಮಯ ಕೊಟ್ಟಿರುವುದು ತಕ್ಷಣ ಬಂಧನದ ವಿರುದ್ಧ ಎಂಬುದೊಂದು ಖಚಿತ ಅಭಿಪ್ರಾಯ. ಈ ವಿಷಯದಲ್ಲಿ ಒಂದು ಅಭಿಪ್ರಾಯ "ದುರುದ್ದೇಶಪೂರಿತ" ಎಂದು ಕಳಂಕ ಹಚ್ಚುವ ಹಕ್ಕು ಬಾರ್ ಕೌನ್ಸಿಲ್‌ಗೆ ಇಲ್ಲ.

4. ಅರ್ಜಿದಾರಳ ವಿರುದ್ಧ ಮಾನಹಾನಿಕರ ಟಿಪ್ಪಣಿಗಳನ್ನು ಮಾಡುವುದು ಆಕ್ಷೇಪಣೀಯ

ಮುಖ್ಯ ನ್ಯಾಯಾಧೀಶರಿಗೆ ಬರೆದ ಪತ್ರದಲ್ಲಿ ಉಲ್ಲೇಖಿಸಿದ ಎರಡನೇ ಪ್ರಕರಣದಲ್ಲಿ, ಬಾರ್ ಕೌನ್ಸಿಲ್ ಸುಪ್ರೀಂ ಕೋರ್ಟಿಗೆ ಅಪೀಲು ಸಲ್ಲಿಸಿರುವ ಅರ್ಜಿದಾರಳ ವಿರುದ್ಧ ಮಾನಹಾನಿಕರ ಟಿಪ್ಪಣಿಗಳನ್ನು ಮಾಡಿದೆ. ಆಕೆಯ ಪ್ರತಿಷ್ಠೆಯ ಮೇಲೆ ದಾಳಿ ಮಾಡಿದೆ. ಇದು ಆಕ್ಷೇಪಣೀಯ ಎನ್ನಬೇಕಾಗುತ್ತದೆ. ಇಲ್ಲಿರುವ ಪ್ರಶ್ನೆ ಒಂದು ನಿರ್ದಿಷ್ಟ ಪ್ರಕರಣ ತಪ್ಪೋ ಸರಿಯೋ ಎಂಬುದಲ್ಲ. ಇಲ್ಲಿರುವುದು ಕೋರ್ಟ್ ಮಾಡಿರುವ ಸಾಮಾನ್ಯ ಸ್ವರೂಪದ ಟಿಪ್ಪಣಿಗಳ, ಗಂಡ ಮತ್ತು ಹೆಂಡತಿ ನಡುವೆ ಅಥವ ಒಟ್ಟಿಗೆ ಇರುವವರ ನಡುವಿನ ಸಂಬಂಧಗಳನ್ನು ಕುರಿತ ವಿಷಯ. ಇಲ್ಲಿಯೂ ಕೂಡ ನ್ಯಾಯಾಲಯ "ಗಂಡ ಎಷ್ಟೇ ಪಾಶವಿಕನಾಗಿದ್ದರೂ.." ಎಂಬಿತ್ಯಾದಿ ಟಿಪ್ಪಣಿಗಳನ್ನು ಮಾಡಿಲ್ಲ ಎಂದೇನೂ ಹೇಳುವುದಿಲ್ಲ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಇದು ಗಂಡಂದಿರನ್ನು ಕುರಿತ ಒಂದು ಸಾರ್ವತ್ರಿಕ ಟಿಪ್ಪಣಿ, ವೈವಾಹಿಕ ಅತ್ಯಾಚಾರವೂ ಸೇರಿದಂತೆ ಕೌಟುಂಬಿಕ ಹಿಂಸಾಚಾರದ ಪ್ರಕರಣಗಳ ಮೇಲೆ ಗಂಭೀರ ಪರಿಣಾಮ ಬೀರುವಂತದ್ದು. ಅತ್ಯಾಚಾರ ಎಂಬುದು ಮಹಿಳೆಯ ಒಪ್ಪಿಗೆಯಿಲ್ಲದ ಲೈಂಗಿಕ ಸಂಭೋಗದ ಒಂದು ಬಲಾತ್ಕಾರದ ಕೃತ್ಯ. ನಿಜ, ಪ್ರಸ್ತುತ ಭಾರತದಲ್ಲಿ ವೈವಾಹಿಕ ಅತ್ಯಾಚಾರದ ವಿರುದ್ಧ ಕಾನೂನು ಇಲ್ಲ. ಅರ್ಜಿ ನ್ಯಾಯಾಲಯದ ಮುಂದಿದೆ. ಆದರೆ "ಗಂಡ ಎಷ್ಟೇ ಪಾಶವಿಕನಾಗಿದ್ದರೂ" ಎಂಬಂತಹ ಟಿಪ್ಪಣಿಗಳನ್ನು ಸರ್ವೋಚ್ಚ ನ್ಯಾಯಾಲಯ ಮಾಡುವುದು ಪಾಶವೀಯತೆಗೆ ಪರವಾನಿಗೆ ಕೊಡುತ್ತದೆ.

ಬಾರ್ ಕೌನ್ಸಿಲ್ ಭಾರತದ ಮುಖ್ಯ ನ್ಯಾಯಾಧೀಶರಿಗೆ ಬೃಂದಾ ಕಾರಟ್ ಪತ್ರ ಮತ್ತು ಅದನ್ನು ಮಾಧ್ಯಮಗಳಲ್ಲಿ ವರದಿ ಮಾಡಿರುವುದು "ಅನುಚಿತ ನಿಂದನೆ" ಎಂದು ವರ್ಣಿಸಿದೆ. "ಇಂತಹ ದ್ವೇಷಪೂರ್ಣ ದಾಳಿ ಮಾಡುವ ಅಭ್ಯಾಸವನ್ನು ನಿಲ್ಲಿಸಲು ತಕ್ಷಣದ ಕ್ರಮಗಳನ್ನು ಕೈಗೊಳ್ಳಬೇಕು" ಎಂದೂ ನಿರ್ಣಯ ಹೇಳಿದೆ. ತನ್ನ ಪತ್ರದಲ್ಲಾಗಲೀ, ಮಾಧ್ಯಮಗಳಲ್ಲಿ ಅದರ ವರದಿಯಲ್ಲಾಗಲೀ ನಿಂದನೆಯೂ ಇಲ್ಲ, ದ್ವೇಷವೂ ಇಲ್ಲ, ತದ್ವಿರುದ್ಧವಾಗಿ ಬಾರ್ ಕೌನ್ಸಿಲ್‌ನ ನಿರ್ಣಯದ ಕೆಲವು ಪದಗಳು ಭಯಪಡಿಸುವುದಕ್ಕಾಗಿ ಎಂದು ಭಾವಿಸಬಹುದು. ಈ ರೀತಿ ಒಬ್ಬ ವ್ಯಕ್ತಿ ಅಥವ ವ್ಯಕ್ತಿಗಳನ್ನು ಈ ರೀತಿ ಭಯಪಡಿಸುವುದು ಮತ್ತು ಬೆದರಿಸುವುದು ಬಾರ್ ಕೌನ್ಸಿಲ್‌ನ ವಿಧಿ–ವಿಧಾನದೊಳಗೆ ಇದೆಯೇ ಎಂದು ಬಾರ್ ಕೌನ್ಸಿಲ್‌ನ ಅಧ್ಯಕ್ಷರಿಗೆ ಬರೆದ ಪತ್ರದ ಕೊನೆಯಲ್ಲಿ ಬೃಂದಾ ಕಾರಟ್ ತೀವ್ರ ಸಂದೇಹ ವ್ಯಕ್ತಪಡಿಸಿದ್ದಾರೆ.

ಜನಾಂದೋಲನ ಶ್ರೇಷ್ಠ ಗುರು

ಒಂದು ವಿಭಜಕವಲ್ಲದ, ಅಂದರೆ ಬೇರೊಂದು ಜನ ವಿಭಾಗದ ವಿರುದ್ಧವಲ್ಲದ ಜನಾಂದೋಲನದಲ್ಲಿ ಭಾಗವಹಿಸುವುದು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಮತ್ತು ಐಕ್ಯತೆಯ ಪಾಠವನ್ನು ಕಲಿಸುತ್ತವೆ. ಜನ-ಜೀವನವನ್ನು ಉತ್ತಮಗೊಳಿಸಲು ನಡೆಸುವ ಒಂದು ಆಂದೋಲನ ಇದಕ್ಕೊಂದು ಒಳ್ಳೆಯ ಉದಾಹರಣೆ. ಒಬ್ಬ ಶ್ರೇಷ್ಠ ಗುರು ಮಾಡಬಹುದಾದ ಕೆಲಸವನ್ನು ಇಂತಹ ಆಂದೋಲನ ಮಾಡುತ್ತದೆ. ಇಂತಹ ಜನಾಂದೋಲನಗಳು ತಮ್ಮ ಉತ್ತುಂಗದಲ್ಲಿ ರಾಜಕೀಯ ಕ್ರಾಂತಿಯ ಸ್ವರೂಪವನ್ನು ಪಡೆಯುತ್ತವೆ. ಅಂತಹ ಸಂದರ್ಭಗಳಲ್ಲಿ ಸಾಮಾಜಿಕ, ಆರ್ಥಿಕ ಮತ್ತಿತರ ಸಮಸ್ಯೆಗಳ ಬಗ್ಗೆ ಅಪಾರ ಮಟ್ಟದ ಚಿಂತನ-ಮಂಥನಗಳು ನಡೆಯುತ್ತವೆ. ಈ ಪ್ರಕ್ರಿಯೆಯಲ್ಲಿ ಹೋರಾಟಗಾರರ ಮನೋಭಾವದಲ್ಲಿ ಆಮೂಲಾಗ್ರ ಬದಲಾವಣೆ ಬರುತ್ತದೆ. ವಾಸ್ತವವಾಗಿ ಹೇಳುವುದಾದರೆ, ಕ್ರಾಂತಿಯ ಯಶಸ್ಸು ಅವಲಂಬಿಸಿರುವುದು ಈ ಬದಲಾವಣೆಯ ಅಂಶವನ್ನೇ. ಅತ್ಯಂತ ಮಹತ್ವದ ಈ ಅಂಶವನ್ನು ಜನರು ಕ್ರಾಂತಿಯ ಪ್ರಕ್ರಿಯೆಯಲ್ಲಿ ಸ್ವತಃ ಪಾಲ್ಗೊಳ್ಳುವ ಮೂಲಕ ಕಲಿಯುತ್ತಾರೆ.

ರೈತ ಪ್ರತಿಭಟನೆಯಂತಹ ಒಂದು 'ಜನಾಂದೋಲನ'ವು ಜನರ ನಿರ್ದಿಷ್ಟ ಮಟ್ಟದ ಪ್ರಜ್ಞೆಯನ್ನು ಎತ್ತರಕ್ಕೆ ಏರಿಸುತ್ತದೆ. ಅದಕ್ಕೆ ಕಾರಣವೆಂದರೆ, ರೈತ ಚಳುವಳಿಯು ಜನರನ್ನು ಸರ್ವ-ಸಮಾನ ಜಾತ್ಯತೀತ ಉದ್ದೇಶಗಳ ಮೇಲೆ ಒಂದುಗೂಡಿಸುತ್ತದೆ. ಇದಕ್ಕೆ ತದ್ವಿರುದ್ಧವಾಗಿ, ಬಿಜೆಪಿಯೊಂದಿಗೆ ಸಂಬಂಧ ಹೊಂದಿದ ಹೋರಾಟ/ಚಳುವಳಿಗಳು ಜನರ ಈಗಿರುವ ಮಟ್ಟದ ಪ್ರಜ್ಞೆಯನ್ನು ಎತ್ತರಿಸುವುದರ ಬದಲಾಗಿ, ಸಮಾಜದಲ್ಲಿ ತಲೆ ಎತ್ತಿದ ಅನಿಷ್ಟ ನಡವಳಿಕೆಗಳನ್ನು ಮತ್ತು ದೋಷಗಳನ್ನು ಚಾಣಾಕ್ಷತೆಯಿಂದ ಸಮರ್ಥಿಸುತ್ತವೆ; ಈಗಾಗಲೇ ಮನೆ ಮಾಡಿಕೊಂಡಿರುವ ಅನೈಕಮತ್ಯವನ್ನು ಉಲ್ಬಣಗೊಳಿಸುತ್ತವೆ; ಜನರ ಈಗಿರುವ ಹಿಂದುಳಿದ ಮಟ್ಟದ ಪ್ರಜ್ಞೆಯನ್ನು ಬಲಪಡಿಸುತ್ತವೆ ಮತ್ತು ಸಮಾಜದಲ್ಲಿ ಉಂಟಾಗಿರುವ ಬಿರುಕುಗಳ ಮೇಲೆ ಆಟ ಆಡುತ್ತವೆ.



ಆರ್‌ಎಸ್‌ಎಸ್ ವಸಾಹತುಶಾಹಿ-ವಿರೋಧಿ ಹೋರಾಟದಿಂದ ದೂರ ಉಳಿದದ್ದು ಆಕಸ್ಮಿಕವೇನಲ್ಲ. ವಸಾಹತುಶಾಹಿ-ವಿರೋಧಿ ಹೋರಾಟವು ದೇಶದಲ್ಲಿ ಒಂದು ಹೊಸ ಜಾಗೃತಿಯನ್ನು ಮೂಡಿಸಿತ್ತು. ಆ ಜಾಗೃತಿಯ ಬಳುವಳಿಯಾಗಿ ಮತ್ತು ವಾರಸುದಾರನಾಗಿ ಹೊರಹೊಮ್ಮಿರುವ ರೈತ ಚಳುವಳಿಯು, ಆ ಜಾಗೃತಿಯನ್ನು ಮುಂದಕ್ಕೆ ಕೊಂಡೊಯ್ಯುತ್ತಿದೆ.

ಪ್ರೊ. ಪ್ರಭಾತ್ ಪಟ್ನಾಯಕ್
ಅನು : ಕೆ.ಎಂ. ನಾಗರಾಜ್

ಒಂದು ಜನಾಂದೋಲನವು ಭಾಗವಹಿಸುವವರ ಪ್ರಜ್ಞೆಯ ಮಟ್ಟವನ್ನು ಎತ್ತರಿಸುತ್ತದೆ ಎಂಬುದನ್ನು ಒತ್ತಿ ಹೇಳುವುದು ಅಗತ್ಯವಿಲ್ಲವಾದರೂ, ಅದರ ಪ್ರಾಮುಖ್ಯತೆ ಮಾತ್ರ ಅಗಾಧವೇ. ಈ ಮಾತಿಗೆ, ವಸಾಹತುಶಾಹಿ-ವಿರೋಧಿ ಹೋರಾಟವೇ ಒಂದು ಸ್ಪಷ್ಟ ಉದಾಹರಣೆ. ಸಾಕಷ್ಟು ಮಂದಿ ಇದ್ದಕ್ಕಿದ್ದಂತೆಯೇ ಜಾತಿ-ಲಿಂಗ ಮುಂತಾದ ಬೇದ-ಭಾವಗಳನ್ನು ಮೀರಿ, ಸಮಾಜವಾದಿ ಅಥವಾ ಕಮ್ಯುನಿಸ್ಟ್ ಧೋರಣೆಗಳನ್ನು ಮೈಗೂಡಿಸಿಕೊಂಡಿರುವುದು ಅವರು ವಸಾಹತು-ವಿರೋಧಿ ಹೋರಾಟಗಳಲ್ಲಿ ಭಾಗವಹಿಸಿದ್ದರ ಪರಿಣಾಮವಾಗಿಯೇ. ಭಾರತದಲ್ಲಿ ಈ ಹೋರಾಟದ ಹರವು ಸ್ವಲ್ಪ ಮಟ್ಟಿಗೆ ಸ್ಥಂಬನಗೊಂಡಿತು ಎಂಬುದು ನಿಜವೇ. ಆದರೆ, ಎಲ್ಲ ಪ್ರಜೆಗಳಿಗೂ ಸಮಾನವಾದ ಕೆಲವು ಮೂಲಭೂತ ಹಕ್ಕುಗಳು ಮತ್ತು ಅವುಗಳಿಗೆ ಚ್ಯುತಿಯಾಗದಂತೆ ನೋಡಿಕೊಳ್ಳುವ ಪ್ರಜಾಪ್ರಭುತ್ವ ಸಂಸ್ಥೆಗಳ ಸ್ಥಾಪನೆ ಮತ್ತು ಮತಧರ್ಮಗಳಿಂದ ಪ್ರಭುತ್ವವನ್ನು ಪ್ರತ್ಯೇಕಿಸುವಂತಹ ಮಹತ್ವದ ಅಂಶಗಳನ್ನೊಳಗೊಂಡ ಒಂದು ಸಂವಿಧಾನವನ್ನು ಹೊಂದದೇ ಇದ್ದಿದ್ದರೆ, ಭಾರತವು ಆಧುನಿಕತೆಯ ಪಥದಲ್ಲಿ ಸಾಗುವುದು ಸಾಧ್ಯವಿರಲಿಲ್ಲ. ಸಾವಿರಾರು ವರ್ಷಗಳಿಂದಲೂ ಆಚರಣೆಯಲ್ಲಿರುವ ಜಾತಿ ಪದ್ಧತಿಯ, ಅಸಮಾನತೆಯ, ದಬ್ಬಾಳಿಕೆಯ ಮತ್ತು ಶೋಷಣೆಯ ಸಮಾಜದಲ್ಲಿ, ಸಂವಿಧಾನ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯ ಜಾರಿಯು ಒಂದು ಮಹತ್ತರ ಬದಲಾವಣೆಯಾಗಿದ್ದು ಜನರ ಮನಸ್ಸಿನಲ್ಲಿ ಗಾಢ ಪರಿಣಾಮ ಬೀರಿದವು. ಅಂದಹಾಗೆ, ಈ ಮಹತ್ವದ ಬದಲಾವಣೆಯು ಮಹಾತ್ಮ ಗಾಂಧಿ ಅಥವಾ ಜವಾಹರಲಾಲ್ ನೆಹರೂ ಅಥವಾ ಬಿ.ಆರ್. ಅಂಬೇಡ್ಕರ್ ಅವರ ಅನುಗ್ರಹ-ಆಶೀರ್ವಾದಗಳ ಫಲವಾಗಿ ಬಂದದ್ದಲ್ಲ. ವಸಾಹತುಶಾಹಿ ವಿರುದ್ಧವಾಗಿ ನಡೆದ ದೀರ್ಘ ಚಳುವಳಿಯ ಫಲವೇ ಈ ಬದಲಾವಣೆ. ಆದರೆ, ಹೊಸ ಭಾರತದ ಸಂವಿಧಾನವನ್ನು ರೂಪಿಸುವ ನಿರೀಕ್ಷೆಯು ಈ ಅಗ್ರ ಪಂಕ್ತಿಯ ನಾಯಕರ ಮೇಲಿತ್ತು ಮತ್ತು ಅವರು ಜನರ ಹಂಬಲ-ಆಶೋತ್ತರಗಳಿಗೆ ದನಿಯಾಗಿದ್ದರು ಎಂಬುದಂತೂ ನಿಜವೇ.

ಖಿಲಾಪತ್ ಚಳುವಳಿಯ ಅನುಭವ

ಜನರ ಮನೋಭಾವವನ್ನು ಒಂದು ಜನಾಂದೋಲನವು ಹೇಗೆ ಬದಲಾಯಿಸುತ್ತದೆ ಎಂಬುದರ ಬಗ್ಗೆ ಒಂದು ಒಳ್ಳೆಯ ಉದಾಹರಣೆಯನ್ನು ತತ್ವಶಾಸ್ತ್ರಜ್ಞ ಅಕೀಲ್ ಬಿಲ್‌ಗ್ರಾಮಿ ಕೊಡುತ್ತಾರೆ. ಬಂಗಾಳ ಪ್ರಾಂತದ ವಿಧಾನ ಪರಿಷತ್ತಿನಲ್ಲಿ 1921ರಲ್ಲಿ ಮಹಿಳೆಯರಿಗೂ ವೋಟ್ ಮಾಡುವ (ಮತದಾನ) ಅವಕಾಶವನ್ನು ಕಲ್ಪಿಸುವ ಮಸೂದೆಯನ್ನು ಸೋಲಿಸಲಾಗಿತ್ತು. ಆ ಕಾಲ ಘಟ್ಟದಲ್ಲಿ ಏರುಗತಿಯಲ್ಲಿದ್ದ ಖಿಲಾಫತ್ ಚಳುವಳಿಯು ಅನೇಕ ಮುಸ್ಲಿಮರನ್ನು ಆಕರ್ಷಿಸಿತ್ತು. ಖಿಲಾಫತ್ ಚಳುವಳಿಯಲ್ಲಿ ಸಕ್ರಿಯವಾಗಿ ತೊಡಗಿದ ಅನೇಕ ಮುಸ್ಲಿಮರ ನಡೆ-ನುಡಿ, ಆಚಾರ-ವಿಚಾರಗಳಲ್ಲಿ ಒಂದು ಭಾರೀ ದೊಡ್ಡ ಬದಲಾವಣೆ ಗೋಚರಿಸಿತು. ಅವರಲ್ಲಿ ಅನೇಕರು ಕಾಂಗ್ರೆಸ್ ಪಕ್ಷದೊಳಗೆ ಹುಟ್ಟಿಕೊಂಡಿದ್ದ ಚಿತ್ತರಂಜನ್ ದಾಸ್ ನೇತೃತ್ವದ ಸ್ವರಾಜ್ಯ ಪಕ್ಷವನ್ನು ಸೇರಿದರು ಮತ್ತು ಅವರು ಪ್ರತಿಪಾದಿಸುತ್ತಿದ್ದ ಪ್ರಗತಿಪರ ಬದಲಾವಣೆಗಳನ್ನು ಶಾಸನಗಳ ಮೂಲಕ ತರುವ ಉದ್ದೇಶದಿಂದ ಶಾಸನಸಭೆಗಳನ್ನು ಪ್ರವೇಶಿಸಿದರು. 1925ರಲ್ಲಿ, ಬಂಗಾಳ ಶಾಸನ ಸಭೆಯಲ್ಲಿ ಮತ್ತೊಮ್ಮೆ ಇದೇ ಮಹಿಳಾ ಮತದಾನ ಪರ ಮಸೂದೆಯನ್ನು ಮಂಡಿಸಿದಾಗ, ಸ್ವರಾಜ್ಯ ಪಕ್ಷದ ಜೊತೆಗೆ ಗುರುತಿಸಿಕೊಂಡ ಮುಸ್ಲಿಮರು ಅದನ್ನು ಬೆಂಬಲಿಸಿದರು. ಒಂದು ಸಾಂಪ್ರದಾಯಿಕ ಮುಸ್ಲಿಂ ಸಮಾಜದಿಂದ ಬಂದ ಅವರಿಗೆ ಆ ಸಮಾಜದ ವಿಶಿಷ್ಟ ಲಿಂಗ ಸಂಬಂಧಿತ ಪೂರ್ವಗ್ರಹಗಳನ್ನು ಮೀರುವುದು ಅಷ್ಟು ಸಣ್ಣ ಅವಧಿಯಲ್ಲಿ ಸಾಧ್ಯವಾಗಿತ್ತು, ಏಕೆಂದರೆ, ಒಂದು ಸಾಮೂಹಿಕ ಚಳುವಳಿಯು ಅದರಲ್ಲಿ ಭಾಗವಹಿಸಿದವರ ಮನೋಭಾವವನ್ನು ಆಮೂಲಾಗ್ರವಾಗಿ ಹಾಗೂ ಅಗತ್ಯವಾಗಿ ಬದಲಾಯಿಸುತ್ತದೆ. ಖಿಲಾಫತ್ ಚಳುವಳಿಯು ಒಂದು ಸಾಮ್ರಾಜ್ಯಶಾಹಿ ವಿರೋಧಿ ಚಳವಳಿಯೇ ಆಗಿದ್ದರೂ ಸಹ, ಖಲೀಫರ ಆಡಳಿತವನ್ನು ಮರಳಿ ತರುವ ಹತಾಶ ಸಾಂಪ್ರದಾಯಿಕ ಉದ್ದೇಶದಿಂದ ಪ್ರೇರಿತವಾಗಿತ್ತು. ಹಾಗಿದ್ದರೂ ಸಹ, ಅದು ಭಾಗವಹಿಸಿದವರ ಮನೋಭಾವದಲ್ಲಿ ಗಮನಾರ್ಹ ಬದಲಾವಣೆಗಳನ್ನು ಉಂಟುಮಾಡಿತು. ಪ್ರಾಸಂಗಿಕವಾಗಿ ಹೇಳುವುದಾದರೆ, ಬಂಗಾಳದ ಅನೇಕ ಆರಂಭಿಕ ಕಮ್ಯುನಿಸ್ಟರು ಖಿಲಾಫತ್ ಚಳುವಳಿಯಿಂದ ಬಂದವರೇ.



ದಿಲ್ಲಿ ಗಡಿಗಳಲ್ಲಿ ರೈತ ಮಹಿಳೆಯರ ಈ ವರ್ಷದ ಮಹಿಳಾ ದಿನಾಚರಣೆ

ಮುಜಾಫರ್‌ನಗರದ ಬಿಜೆಪಿಯ ಕೋಮುಧ್ರುವೀಕರಣಕ್ಕೆ ಸೋಲು

ಇಂದಿನ ರೈತ ಚಳವಳಿಯೂ ಇದೇ ರೀತಿಯ ಪರಿಣಾಮವನ್ನೇ ಉಂಟುಮಾಡುತ್ತಿದೆ. 2013ರಲ್ಲಿ, ಉತ್ತರ ಪ್ರದೇಶದ ಮುಜಾಫರ್‌ನಗರ ಜಿಲ್ಲೆಯಲ್ಲಿ ನಡೆದ ಕೋಮು ಗಲಭೆಗಳಲ್ಲಿ ಗಣನೀಯ ಸಂಖ್ಯೆಯಲ್ಲಿ ಭಾಗವಹಿಸಿದ್ದವರು ಇಂದಿನ ರೈತ ಚಳುವಳಿಯಲ್ಲಿ ಭಾಗವಹಿಸುತ್ತಿದ್ದಾರೆ.

ಆಗ, ಆ ಪ್ರದೇಶದಲ್ಲಿ ಒಂದು ಕೋಮು ಉನ್ಮಾದವನ್ನು ಹಬ್ಬಿಸುವ ಮೂಲಕ, ಜಾಟ್-ಹಿಂದೂಗಳು ಮತ್ತು ಮುಸ್ಲಿಮರ ನಡುವೆ ಒಂದು ದ್ವೇಷದ ವಾತಾವರಣವನ್ನು ಸೃಷ್ಟಿಸಿದ ಪರಿಣಾಮವಾಗಿ, ಕೋಮು ಆಧಾರದಲ್ಲಿ ಅವರು ವಿಭಜಿತರಾದರು. ಈ ಕೋಮು ಧ್ರುವೀಕರಣದ ಲಾಭವನ್ನು ಬಿಜೆಪಿಯು ಯಥೇಚ್ಛವಾಗಿ ಪಡೆಯಿತು. ಅಲ್ಲಿಯವರೆಗೆ ಆ ಪ್ರದೇಶದ ಚುನಾವಣಾ ಆಧಿಪತ್ಯವು ಬಿಜೆಪಿಗೆ ದಕ್ಕಿರಲಿಲ್ಲ. 2013ರ ಕೋಮು ಗಲಭೆಗಳ ಮೂಲಕ ಸೃಷ್ಟಿಸಿದ ಕೋಮು ಧ್ರುವೀಕರಣದ ಹಿನ್ನೆಲೆಯಲ್ಲಿ, ಕೋಮು ಅಂಶವನ್ನೇ ಮುಂದಿಟ್ಟುಕೊಂಡು ಬಿಜೆಪಿಯು ಈ ಪ್ರದೇಶಕ್ಕೆ ಲಗ್ಗೆ ಇಟ್ಟಿದ್ದು ಮಾತ್ರವಲ್ಲ, ಕೋಮು ಧ್ರುವೀಕರಣದ ಬಲದ ಮೇಲೇ 2014ರ ಚುನಾವಣೆಯಲ್ಲಿ ಉತ್ತರ ಪ್ರದೇಶದ ಲೋಕಸಭಾ ಸೀಟುಗಳ ಸಿಂಹ ಪಾಲನ್ನೂ ಪಡೆಯಿತು ಮತ್ತು ಈ ರಾಜ್ಯದಲ್ಲಿ ಪಡೆದ ಅತ್ಯಧಿಕ ಸೀಟುಗಳ ಬಲದಿಂದಾಗಿ ಬಿಜೆಪಿಗೆ ಲೋಕಸಭೆಯಲ್ಲಿ ತನ್ನದೇ ಬಹುಮತ ಲಭಿಸಿತು. ಆನಂತರ, ಬಿಜೆಪಿಯು 2016ರ ಉತ್ತರ ಪ್ರದೇಶದ ಅಸೆಂಬ್ಲಿ ಚುನಾವಣೆಯಲ್ಲಾಗಲಿ ಅಥವಾ 2019ರ ಲೋಕ ಸಭಾ ಚುನಾವಣೆಯಲ್ಲಾಗಲಿ ಗಳಿಸಿದ ವಿಜಯವು ಪಶ್ಚಿಮ ಉತ್ತರ ಪ್ರದೇಶದಲ್ಲಿ ನಡೆದ ಈ ಕೋಮು ಧ್ರುವೀಕರಣವನ್ನೇ ಆಧರಿಸಿತ್ತು.

ಆದರೆ, ರೈತ ಚಳುವಳಿಯು ಈ ಧ್ರುವೀಕರಣವನ್ನು ಸೋಲಿಸಿದೆ ಮತ್ತು ಈ ಮೂರು ಕುಖ್ಯಾತ ಕೃಷಿ ಕಾಯಿದೆಗಳ ವಿರುದ್ಧ ಮುಸ್ಲಿಂ ಮತ್ತು ಹಿಂದೂ-ಜಾಟರನ್ನು ಒಂದುಗೂಡಿಸಿದೆ. ಬಿಜೆಪಿಯ ಪ್ರಮುಖ ನಾಯಕರುಗಳೊಂದಿಗೆ ರೈತರು ಸಾಮಾಜಿಕವಾಗಿ ಸಲುಗೆಯಿಂದ ವ್ಯವಹರಿಸಬಾರದು ಎಂಬ ಒಂದು ಕರೆಯನ್ನು ರೈತ ಚಳುವಳಿಯ ಮುಖಂಡರು ಕೊಟ್ಟಿದ್ದರು. ಈ ಕರೆಯನ್ನು ಮುರಿಯಲು ಒಬ್ಬ ಬಿಜೆಪಿ ನಾಯಕ ಮುಂದಾದಾಗ, ತಮ್ಮ ಗ್ರಾಮಗಳಿಗೆ ಆ ಮಹಾನುಭಾವರು ಪ್ರವೇಶಿಸದಂತೆ ಗ್ರಾಮಸ್ಥರು ವಿರೋಧಿಸಿದರು. 2013ರ ಕೋಮು ಗಲಭೆಗಳಿಗೆ ಪ್ರೇರಣೆಯಾಗಿದ್ದರು ಎಂದು ಹೇಳಲಾದ ಬಿಜೆಪಿಯ ಈ ನಾಯಕರು ಈಗ ಕೇಂದ್ರ ಸಚಿವ ಸಂಪುಟದ ಒಬ್ಬ ಸದಸ್ಯರು. ಆ ಮಹಾನುಭಾವರ ವಿರುದ್ಧವಾಗಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ ಗ್ರಾಮಸ್ಥರು, ಒಂದು ಎಫ್‌ಐಆರ್ ದಾಖಲಿಸುವಂತೆ ಪಟ್ಟು ಹಿಡಿದರು. ಈ ವಿದ್ಯಮಾನವು, ಬಿಜೆಪಿಯು ಹೆಣೆಯುತ್ತಿದ್ದ ಹಳೆಯ ಕಂತೆ ಪುರಾಣಗಳು ಈಗ ಕೆಲಸ ಮಾಡುವುದಿಲ್ಲ ಎಂಬುದನ್ನೂ ಮತ್ತು ಈ ಚಳುವಳಿಯಿಂದಾಗಿಯೇ ಜನರ ಧೋರಣೆಗಳಲ್ಲಿ ಹಠಾತ್ ಬದಲಾವಣೆಯಾಗಿದೆ ಎಂಬುದನ್ನೂ ಸ್ಪಷ್ಟಪಡಿಸುತ್ತದೆ.

ಮಹತ್ವದ ಘಟನೆಗಳು

ಅದೇ ರೀತಿಯಲ್ಲಿ, ಈ ಪ್ರದೇಶದ ಜಾಟ್ ರೈತರು ಮತ್ತು ದಲಿತ ಕಾರ್ಮಿಕರ ನಡುವಿನ ಸಂಘರ್ಷವು ಒಂದು ನಿರಂತರ ಲಕ್ಷಣವೇ ಆಗಿದ್ದು, ರೈತ-ಕಾರ್ಮಿಕರ ಐಕ್ಯತೆಗೆ ಒಂದು ದೊಡ್ಡ ಅಡಚಣೆಯಾಗಿತ್ತು. ಒಬ್ಬ ಜಾಟ್ ಉದ್ಯೋಗದಾತ ಮತ್ತು ಒಬ್ಬ ದಲಿತ ಕೆಲಸಗಾರನ ನಡುವಿನ ಆರ್ಥಿಕ ಸಂಘರ್ಷವು ದಲಿತರು ಮತ್ತು ಜಾಟ್‌ರ ನಡುವಿನ ಜಾತಿ ತಿಕ್ಕಾಟದಿಂದಾಗಿ ಜಟಿಲಗೊಂಡಿತ್ತು. ಒಳಗೊಳಗೇ ಕುದಿಯುತ್ತಿದ್ದ ಈ ಜಾತಿ ವೈರುಧ್ಯಗಳು ದಿಲ್ಲಿಯ ಅನತಿ ದೂರದಲ್ಲಿರುವ ಕಂಜವಾಲ ಎಂಬ ಹಳ್ಳಿಯಲ್ಲಿ ದಶಕಗಳ ಹಿಂದೆ ಸ್ಫೋಟಗೊಂಡು ದೇಶದ ಗಮನವನ್ನು ಸೆಳೆದಿದ್ದವು. ಆದರೆ, ಪ್ರಸ್ತುತ ರೈತ ಚಳವಳಿಯು ಈ ಎರಡೂ ಬಣಗಳನ್ನು ಒಂದು ಅಭೂತಪೂರ್ವ ರೀತಿಯಲ್ಲಿ ಒಗ್ಗೂಡಿಸಿ ಅವರ ಒಗ್ಗಟ್ಟನ್ನು ಪ್ರದರ್ಶಿಸಿದೆ. ಈ ಮಸೂದೆಗಳ ಅನುಷ್ಠಾನವು ಇಂದು ಅಸ್ತಿತ್ವದಲ್ಲಿರುವ ಭಾರತದ ಕೃಷಿಯ ಅವಸಾನದ ಸೂಚನೆಯ ಗಂಟೆಯನ್ನು ಬಾರಿಸುತ್ತಿದೆ ಮತ್ತು ಇದು ಎಲ್ಲ ವರ್ಗಗಳ ಮೇಲೂ ಪರಿಣಾಮ ಬೀರುತ್ತದೆ ಎಂಬುದು ಈ ಎರಡು ಗುಂಪುಗಳಿಗೆ ಮಾತ್ರವಲ್ಲ, ಈ ಹೋರಾಟದಲ್ಲಿ ತೊಡಗಿರುವ ಎಲ್ಲರಿಗೂ ಸ್ಪಷ್ಟವಾಗಿ ಗೋಚರಿಸುತ್ತಿದೆ. ಈ ಸನ್ನಿವೇಶದಲ್ಲಿ, ಈ ಎರಡೂ ಗುಂಪುಗಳು ಒಟ್ಟಿಗೆ ಬರುತ್ತಿರುವುದು ಒಂದು ಅತ್ಯಂತ ಮಹತ್ವದ ಘಟನೆಯಾಗಿದೆ. ಅದನ್ನು ಈ ಜನಾಂದೋಲನವು ಸಾಧ್ಯಗೊಳಿಸಿದೆ.

ಈ ಚಳುವಳಿಯು, ಸಾಂಪ್ರದಾಯಿಕ ಮನೋಭಾವವನ್ನು ಅಥವಾ ಕಟ್ಟುಪಾಡುಗಳನ್ನು ಮೀರಿದ ಮೂರನೇ ಕ್ಷೇತ್ರವು ಲಿಂಗದ ಪ್ರಶ್ನೆಗೆ ಸಂಬಂಧಿಸುತ್ತದೆ. ಒಂದು ಕಟ್ಟಾ ಪಿತೃಪ್ರಧಾನ ಸಮಾಜದಲ್ಲಿ, ಮಹಿಳೆಯರು ರೈತ ಚಳುವಳಿಯಲ್ಲಿ ಅಸಾಧಾರಣ ಮಟ್ಟದಲ್ಲಿ ಸಕ್ರಿಯವಾಗಿ ತೊಡಗಿರುವ ಸಂಗತಿಯು ಬಹಳ ಮಹತ್ವಪೂರ್ಣವಾದುದು. ಇದು ಊಹೆ ಮತ್ತು ನಿರೀಕ್ಷೆಗಳಿಗೆ ಮೀರಿದ ಸಂಗತಿಯೇ. ಸಮಾಜವನ್ನು ಕಾಡುತ್ತಿರುವ ಸಮಸ್ಯೆಗಳ ಬಗ್ಗೆ ಮಹಿಳೆಯರು ತೋರಿಸುತ್ತಿರುವ ಕಾಳಜಿಯು ಅವರನ್ನು ಸಾರ್ವಜನಿಕ ವಲಯಕ್ಕೆ ಎಳೆದು ತಂದಿದೆ. ಈ ವಿದ್ಯಮಾನವು ಭವಿಷ್ಯದ ಲಿಂಗ ಸಂಬಂಧಗಳ ದೃಷ್ಟಿಯಲ್ಲಿ ಹೆಚ್ಚು ಮಹತ್ವ ಉಳ್ಳದ್ದಾಗಿದೆ.

ರೈತ ಚಳುವಳಿಯ ಬಿಡಾರದ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ನೆಲಸಿರುವ ಕೈಗಾರಿಕಾ ಕೆಲಸಗಾರರು ಮತ್ತು ರೈತರ ನಡುವೆ ಬೆಳೆಯುತ್ತಿರುವ ಸೌಹಾರ್ದ ಸಂಬಂಧವು ಹಿಂದೆಂದೂ ಈ ಮಟ್ಟದಲ್ಲಿ ಕಂಡುಬಂದಿರಲಿಲ್ಲ. ಇದೂ ಸಹ ಒಂದು ಅಭೂತಪೂರ್ವ ವಿದ್ಯಮಾನವೇ. ಒಂದು

ಪುಟ 14 ನೋಡಿ

ಪುಟ 13 ರಿಂದ

ಜನಾಂದೋಲನ ಶ್ರೇಷ್ಠ ಗುರು

ಜನಾಂದೋಲನವು ಉಂಟು ಮಾಡುವ ಪರಿಣಾಮಗಳು – ಚಳುವಳಿಕಾರರು ಬಳಸುವ ಚಿನ್ಹೆ–ಸಂಕೇತಗಳು, ಅವರು ಪುನರಾವಲೋಕನ ಮಾಡುವ ಕೆಲವು ಚಾರಿತ್ರಿಕ ಘಟನೆಗಳು ಮತ್ತು ಅವರು ಅನುಸರಿಸುತ್ತಿರುವ ಹೋರಾಟದ ಕೆಲವು ಪರಂಪರೆಗಳು – ಈ ಸಾಮೂಹಿಕ ಚಳುವಳಿಯಲ್ಲಿ ಪ್ರಕಟಗೊಂಡಿವೆ. ಉದಾಹರಣೆಗೆ, ಹೋರಾಟ ನಿರತ ರೈತರು ಆಚರಿಸಿದ 'ಪಗಡಿ ಸಂಭಾಲ್' ದಿನಾಚರಣೆ. ಭಗತ್ ಸಿಂಗ್ ಅವರ ಚಿಕ್ಕಪ್ಪ ಅಜಿತ್ ಸಿಂಗ್ 1906ರಲ್ಲಿ ಒಂದು 'ಪಗಡಿ ಸಂಭಾಲ್' ಚಳವಳಿಯನ್ನು ಸಂಘಟಿಸಿದ್ದರು. ಮಧ್ಯಯುಗದ ಕಾಲದಲ್ಲಿ ಗಣ್ಯರು ಮಾತ್ರ ತಲೆಗೆ ಪಗಡಿ (ರುಮಾಲು) ಸುತ್ತಿಕೊಳ್ಳುವುದಿತ್ತು. ಈ ಪದ್ಧತಿಯನ್ನು 17ನೇ ಶತಮಾನದ ಸಿಖ್ ಕ್ರಾಂತಿಯ ಸಂದರ್ಭದಲ್ಲಿ ಗುರು ಗೋವಿಂದ್ ಸಿಂಗ್ ಧಿಕ್ಕರಿಸಿದರು. ಸ್ವಾಭಿಮಾನದ ಸಂಕೇತವಾಗಿ ಎಲ್ಲರೂ ಪಗಡಿ ಸುತ್ತಿಕೊಳ್ಳುವುದನ್ನು ಸಾಮಾನ್ಯಗೊಳಿಸಿದ್ದರು. 1906ರಲ್ಲಿ, ಬ್ರಿಟಿಷರು ಜಾರಿಗೆ ತಂದ ಮೂರು ಕೃಷಿ ಕಾನೂನುಗಳನ್ನು ವಿರೋಧಿಸಿ, ಭಗತ್ ಸಿಂಗ್ ಅವರ ಚಿಕ್ಕಪ್ಪ ಅಜಿತ್ ಸಿಂಗ್ 1906ರಲ್ಲಿ ಒಂದು 'ಪಗಡಿ ಸಂಭಾಲ್' ಚಳವಳಿಯನ್ನು ಸಂಘಟಿಸಿದ್ದರು. 'ಪಗಡಿ ಸಂಭಾಲ್' ಅಂದರೆ, ಈ ಪಗಡಿ, ಅಕ್ಷರಷಃ ಮತ್ತು ರೂಪಕವಾಗಿಯೂ ಸಹ ಕೆಳಗೆ ಬೀಳದಂತೆ ನೋಡಿಕೊಳ್ಳುವುದು ಎಂದರ್ಥ. ವಸಾಹತುಶಾಹಿ ಕಾಲದಲ್ಲಿ ಭಾರತದ ಕೃಷಿಗೆ ಒದಗಿದ್ದ ಆಪತ್ತಿಗೂ ಮತ್ತು ಇಂದಿನ ಭಾರತದ ಕೃಷಿಗೆ ಒದಗಿರುವ ಆಪತ್ತಿಗೂ ಹೋಲಿಕೆಯಲ್ಲಿ ಸಾಮ್ಯತೆ ಇರುವುದನ್ನು ಈ ಒಂದು ಸಂಕೇತದ ಮೂಲಕ ಎತ್ತಿ ತೋರಿಸಲಾಗಿದೆ.

ರೈತ ಸಮುದಾಯವನ್ನು ಪ್ರಜಾಪ್ರಭುತ್ವೀಕರಣಗೊಳಿಸುತ್ತಿರುವ ಮತ್ತು ಎಲ್ಲರನ್ನೂ ಒಗ್ಗೂಡಿಸುತ್ತಿರುವ ರೈತ ಚಳುವಳಿಯ ಪಾತ್ರವು ಎಷ್ಟು ಗಮನಾರ್ಹವಾಗಿದೆಯೋ ಅಷ್ಟೇ ನಿಚ್ಚಳವಾಗಿಯೂ ಇದೆ. ಎಷ್ಟುಮಟ್ಟಿಗೆ ಎಂದರೆ, ಒಂದು ತರದ ಪರಕೀಯತೆಯ ಭಾವನೆಗೊಳಗಾದ ಪಂಜಾಬ್‌ನ ಹತಾಶ ಯುವಕರ ಮಾದಕ–ಪದಾರ್ಥ ಸೇವನೆಯ ಸಮಸ್ಯೆಯ ಪ್ರಸ್ತಾಪವನ್ನು ಈಗ ಯಾರೂ ಮಾಡುತ್ತಿಲ್ಲ. ಈ ವಿಧವಾಗಿ ಗಮನಾರ್ಹತೆ ಪಡೆದಿರುವ ರೈತ ಚಳುವಳಿಯು, ಸಮಾಜ ಬಿಜೆಪಿ ಸರ್ಕಾರವು ಪಸರಿಸುತ್ತಿರುವ ವಿಭಜಕಾರಿ ಮತ್ತು ಸರ್ವಾಧಿಕಾರಿ ಧೋರಣೆಗೆ ತದ್ವಿರುದ್ಧವಾಗಿದೆ.

ಸರ್ಕಾರದ ಪಕ್ಷಪಾತದ ನಿಲುವುಗಳ ವಿರೋಧವಾಗಿ ಮತ್ತು ಜನರ ಹೊಟ್ಟೆ–ಬಟ್ಟೆಯ ಸಮಸ್ಯೆಗಳಿಗೆ ಪರಿಹಾರ ಪಡೆಯುವ ಉದ್ದೇಶದಿಂದ ಸಂಘಟಿಸುವ ಹೋರಾಟ/ಜನಾಂದೋಲನಗಳಿಗೂ ಮತ್ತು ಸಾರಭೂತವಾಗಿ ವಿಭಜನಾಕಾರಿಯಾದ ಹಾಗೂ ಬಿಜೆಪಿಯೊಂದಿಗೆ ಅನಿವಾರ್ಯ ಸಂಬಂಧ ಹೊಂದಿದ ಹೋರಾಟ/ಚಳುವಳಿಗಳಿಗೂ ನಡುವೆ ಇರುವ ವ್ಯತ್ಯಾಸವನ್ನು ಗುರುತಿಸಬಹುದು. ಎಲ್.ಕೆ.ಅಡ್ವಾಣಿಯವರು ತಮ್ಮ ರಥಯಾತ್ರೆಯನ್ನು ಆರಂಭಿಸಿದಾಗ, ಅನೇಕ ವ್ಯಾಖ್ಯಾನಕಾರರು ಅದನ್ನು ಒಂದು "ಬೃಹತ್ ಜನಾಂದೋಲನ"ವನ್ನು ಹೊತ್ತಿಸಿದ ಕಿಡಿ ಎಂದು ಬಣ್ಣಿಸಿದ್ದರು. ಈ ವಿವರಣೆಯು ಹೇಳದೆ ಬಿಟ್ಟದ್ದು ಏನೆಂದರೆ, ಜನರ ಮನೋಭಾವನೆಗಳನ್ನು ಪರಿವರ್ತಿಸುವ "ಜನಾಂದೋಲನಗಳು" ಮತ್ತು ಆ ಉದ್ದೇಶವನ್ನು ಹೊಂದಿರದ ಬಿಜೆಪಿ ರೀತಿಯ ಚಳವಳಿಗಳ ನಡುವೆ ಇರುವ ಒಂದು ಅಗಾಧ ವ್ಯತ್ಯಾಸವನ್ನು.

ರೈತ ಪ್ರತಿಭಟನೆಯಂತಹ ಒಂದು "ಜನಾಂದೋಲನ"ವು ಜನರ ನಿರ್ದಿಷ್ಟ ಮಟ್ಟದ ಪ್ರಜ್ಞೆಯನ್ನು ಎತ್ತರಕ್ಕೆ ಏರಿಸುತ್ತದೆ. ಅದಕ್ಕೆ ಕಾರಣವೆಂದರೆ, ರೈತ ಚಳುವಳಿಯು ಜನರನ್ನು ಸರ್ವ–ಸಮಾನ ಜಾತ್ಯತೀತ ಉದ್ದೇಶಗಳ ಮೇಲೆ ಒಂದುಗೂಡಿಸುತ್ತದೆ. ಇದಕ್ಕೆ ತದ್ವಿರುದ್ಧವಾಗಿ, ಬಿಜೆಪಿಯೊಂದಿಗೆ ಸಂಬಂಧ ಹೊಂದಿದ ಹೋರಾಟ/ಚಳುವಳಿಗಳು ಜನರ ಈಗಿರುವ ಮಟ್ಟದ ಪ್ರಜ್ಞೆಯನ್ನು ಎತ್ತರಿಸುವುದರ ಬದಲಾಗಿ, ಸಮಾಜದಲ್ಲಿ ತಲೆ ಎತ್ತಿದ ಅನಿಷ್ಟ ನಡವಳಿಕೆಗಳನ್ನು ಮತ್ತು ದೋಷಗಳನ್ನು ಚಾಣಾಕ್ಷತೆಯಿಂದ ಸಮರ್ಥಿಸುತ್ತವೆ; ಈಗಾಗಲೇ ಮನೆ ಮಾಡಿಕೊಂಡಿರುವ ಅನೈಕಮತ್ಯವನ್ನು ಉಲ್ಬಣಗೊಳಿಸುತ್ತವೆ; ಜನರ ಈಗಿರುವ ಹಿಂದುಳಿದ ಮಟ್ಟದ ಪ್ರಜ್ಞೆಯನ್ನು ಬಲಪಡಿಸುತ್ತವೆ ಮತ್ತು ಸಮಾಜದಲ್ಲಿ ಉಂಟಾಗಿರುವ ಬಿರುಕುಗಳ ಮೇಲೆ ಆಟ ಆಡುತ್ತವೆ.

ಆರ್‌ಎಸ್‌ಎಸ್ ವಸಾಹತುಶಾಹಿ–ವಿರೋಧಿ ಹೋರಾಟದಿಂದ ದೂರ ಉಳಿದದ್ದು ಆಕಸ್ಮಿಕವೇನಲ್ಲ. ವಸಾಹತುಶಾಹಿ–ವಿರೋಧಿ ಹೋರಾಟವು ದೇಶದಲ್ಲಿ ಒಂದು ಹೊಸ ಜಾಗೃತಿಯನ್ನು ಮೂಡಿಸಿತ್ತು. ಆ ಜಾಗೃತಿಯ ಬಳುವಳಿಯಾಗಿ ಮತ್ತು ವಾರಸುದಾರನಾಗಿ ಹೊರಹೊಮ್ಮಿರುವ ರೈತ ಚಳುವಳಿಯು, ಆ ಜಾಗೃತಿಯನ್ನು ಮುಂದಕ್ಕೆ ಕೊಂಡೊಯ್ಯುತ್ತಿದೆ.

ಕೇರಳ ವಿಧಾನಸಭಾ ಚುನಾವಣೆ –85 ಕ್ಷೇತ್ರಗಳಲ್ಲಿ ಸಿಪಿಐ(ಎಂ) ಸ್ಪರ್ಧೆ



ಕೇರಳ ವಿಧಾನಸಭೆಗೆ ನಡೆಯಲಿರುವ ಚುನಾವಣಾ ಕಣಕ್ಕೆ ಎಡ ಪ್ರಜಾಸತ್ತಾತ್ಮಕ ರಂಗ(ಎಲ್‌ಡಿಎಫ್)ವನ್ನು ಮುನ್ನಡೆಸುತ್ತಿರುವ ಸಿಪಿಐ(ಎಂ) ಮಾರ್ಚ್ 10ರಂದು 83 ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆಗೊಳಿಸಿದೆ. ದೇವಿಕುಳಂ ಮತ್ತು ಮಂಜೇಶ್ವರ ಕ್ಷೇತ್ರಗಳ ಅಭ್ಯರ್ಥಿಗಳ ಹೆಸರನ್ನು ನಂತರ ಪ್ರಕಟಿಸಲಾಗುವದು ಎಂದು ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸುತ್ತ ಎಲ್‌ಡಿಎಫ್‌ನ ಸಂಚಾಲಕರು ಹಾಗೂ ಸಿಪಿಐ(ಎಂ) ಕಾರ್ಯಕಾರಿ ರಾಜ್ಯ ಕಾರ್ಯದರ್ಶಿ ಎ.ವಿಜಯರಾಘವನ್ ರವರು ಹೇಳಿದರು.

140 ಸ್ಥಾನಗಳ ವಿಧಾನಸಭಾ ಕ್ಷೇತ್ರಗಳಲ್ಲಿ 76 ಸ್ಥಾನಗಳಿಗೆ ಸಿಪಿಐ(ಎಂ) ಹಾಗೂ 9 ಕ್ಷೇತ್ರಗಳಲ್ಲಿ ಸ್ವತಂತ್ರ ಅಭ್ಯರ್ಥಿಗಳಿಗೆ ಅವಕಾಶ ನೀಡಿದೆ.

ಈ ಪೈಕಿ ಹನ್ನೆರಡು ಮಹಿಳಾ ಅಭ್ಯರ್ಥಿಗಳ ಸಂಖ್ಯೆ 12. ವಿದ್ಯಾರ್ಥಿ ಮತ್ತು ಯುವಜನ ಸಂಘಟನೆಗಳಿಂದ 13 ಅಭ್ಯರ್ಥಿಗಳಿದ್ದಾರೆ. ಇವರಲ್ಲಿ ನಾಲ್ವರ ವಯಸ್ಸು 30ವರ್ಷಕ್ಕಿಂತ ಕಡಿಮೆ. ಅವರೆಂದರೆ, ಎಸ್‌ಎಫ್‌ಐ ರಾಜ್ಯಕಾರ್ಯದರ್ಶಿ ಸಚಿನ್ ದೇವ್(ಬಾಲುಶೆರಿ), ಜೈಕ್ ಸಿ ಥಾಮಸ್(ಪುಥುಪಲ್ಲಿ), ಲಿಂಡೊ ಜೋಸ್(ತಿರುವಂಬಾಡಿ) ಮತ್ತು ಮಿಥುನಾ (ವಂಡೂರ್).

30 ರಿಂದ 40 ವರ್ಷದೊಳಗಿನ ಅಭ್ಯರ್ಥಿಗಳ ಸಂಖ್ಯೆ 8, 40 ರಿಂದ 50 ವರ್ಷದೊಳಗೆ 13, 51 ರಿಂದ 60 ವರ್ಷದೊಳಗೆ 33 ಹಾಗೂ 60 ವರ್ಷ ಮೇಲ್ಪಟ್ಟ 24 ಜನ ಅಭ್ಯರ್ಥಿಗಳು ಚುನಾವಣಾ ಕಣದಲ್ಲಿ ಸ್ಪರ್ಧಿಸಲಿದ್ದಾರೆ.

ಅಭ್ಯರ್ಥಿಗಳಲ್ಲಿ 28 ಜನ ವಕೀಲರು ಸೇರಿದಂತೆ 42 ಮಂದಿ ಪದವೀಧರರು, 14 ಜನ ಸ್ನಾತಕೋತ್ತರ ಪದವೀಧರರು, ಇಬ್ಬರು ಪಿಹೆಚ್‌ಡಿ ಹಾಗೂ ಇಬ್ಬರು ಎಂಬಿಬಿಎಸ್ ವೈದ್ಯರು ಸ್ಪರ್ಧೆಯಲ್ಲಿದ್ದಾರೆ. ಸಿನೆಮಾ ತಾರೆ ಎಂ.ಮುಕೇಶ್ ಕೊಳ್ಳಂನಿಂದ, ಟಿ.ವಿ. ಆಂಕರ್ ಆಗಿದ್ದ ವೀಣಾ ಜಾರ್ಜ್ ಅವರು ಪಟ್ಟಣಂತಿಟ್ಟದ ಅರಣ್ಮೂಲಾ ಕ್ಷೇತ್ರದಿಂದ ಮತ್ತು ಹಿನ್ನೆಲೆ ಗಾಯಕರಾದ ದಲಿಮ ಜೊಜೊ ಆರೂರಿನಿಂದ ಸ್ಪರ್ಧಿಸುತ್ತಿದ್ದಾರೆ.

ಮುಖ್ಯಮಂತ್ರಿ ಪಿಣರಾಯಿ ವಿಜಯನ್‌ಕಣ್ಣೂರು ಜಿಲ್ಲೆಯ ಧರ್ಮಾದಂ ಕ್ಷೇತ್ರದಿಂದ ಕಣಕ್ಕಿಳಿಯಲಿದ್ದಾರೆ. ಪಕ್ಷದ ಹಿರಿಯ ನಾಯಕಿ ಮತ್ತು ಸಚಿವರಾದ ಕೆ.ಕೆ.ಶೈಲಜಾ ಟೀಚರ್ ರವರು ಮಟ್ಟನೂರು ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ.

ಹಿರಿಯ ಸಚಿವರಾದ ಎಂ.ಎಂ.ಮಣಿ ಇಡುಕ್ಕಿಯ ಉಡುಂಪಂಚೋಳ ಮತ್ತು ಜೆ ಮರ್ಸಿಕುಟ್ಟಿ ಅಮ್ಮ ಕೊಲ್ಲಂನ ಕುಂದಾರ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ.

ಪಾಲಕ್ಕಾಡ್ ಲೋಕಸಭಾ ಕ್ಷೇತ್ರದಿಂದ ಎರಡು ಬಾರಿ ಸಂಸದರಾಗಿದ್ದ ಎಂ.ಬಿ.ರಾಜೇಶ್ ಅವರು ತ್ರಿಥಾಲಾ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದಾರೆ. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಹಾಗೂ ರಾಜ್ಯಸಭಾ ಸದಸ್ಯರಾಗಿದ್ದ ಪಿ. ರಾಜೀವ್ ಕಲಮಶೇರಿಯಿಂದ ಮತ್ತು ಕೇರಳ ಕರ್ಷಕ ಸಂಘಂ (ಎಐಕೆಎಸ್‌ನ ಕೇರಳ ಘಟಕ) ಕೆ.ಎನ್.ಬಾಲಗೋಪಾಲ್ ಕೊಟ್ಟರಕ್ಕಾರದಿಂದ ಸ್ಪರ್ಧಿಸುತ್ತಿದ್ದಾರೆ.

ಸಿಪಿಐ(ಎಂ) ರಾಜ್ಯ ಸಮಿತಿ ಸತತ ಎರಡು ಬಾರಿ ಶಾಸಕರಾಗಿದ್ದವರನ್ನು ಸ್ಪರ್ಧೆಗೆ ಇಳಿಸಬೇಕಾಗಿಲ್ಲ ಎಂದು ನಿರ್ಧರಿಸಿದೆ. ಇದರ ಪ್ರಕಾರ ಐವರು ಮಂತ್ರಿಗಳು, ಥಾಮಸ್ ಐಸಾಕ್, ಜಿ.ಸುಧಾಕರನ್, ಇ.ಪಿ.ಜಯರಾಜನ್, ಎ.ಕೆ.ಬಾಲನ್ ಮತ್ತು ಸಿ.ರವೀಂದ್ರನಾಥ್ ಮತ್ತು 33 ಹಾಲಿ ಶಾಸಕರು ಈ ಬಾರಿ ಚುನಾವಣೆಯಲ್ಲಿ ಸ್ಪರ್ಧಿಸುತ್ತಿಲ್ಲ.

ಸಿಪಿಐ ನಿಂದ 25 ಅಭ್ಯರ್ಥಿಗಳು

ಎಲ್.ಡಿ.ಎಫ್.ನ ಎರಡನೇ ದೊಡ್ಡ ಪಕ್ಷ ಸಿಪಿಐ 25 ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿದೆ, ಇವುಗಳಲ್ಲಿ 21 ಅಭ್ಯರ್ಥಿಗಳ ಪಟ್ಟಿಯನ್ನು ರಾಜ್ಯ ಕಾರ್ಯದರ್ಶಿ ಕಣಂ ರಾಜೇಂದ್ರನ್ ಬಿಡುಗಡೆ ಮಾಡಿದರು. ಕಳೆದ ಬಾರಿ ಸಿಪಿಐ 27 ಸ್ಥಾನಗಳಲ್ಲಿ ಮತ್ತು ಸಿಪಿಐ(ಎಂ) 92 ಸ್ಥಾನಗಳಲ್ಲಿ ಸ್ಪರ್ಧಿಸಿದ್ದವು. ಈ ಬಾರಿ ಎಲ್‌ಡಿಎಫ್ ಸೇರಿರುವ ಕೇರಳ ಕಾಂಗ್ರೆಸ್(ಎಂ) ಜೋಸ್ ಮಣಿ ಗುಂಪಿಗೆ 13 ಸೀಟುಗಳನ್ನು ಕೊಡಲಾಗಿದೆ.

ಪುಟ 11 ರಿಂದ

ಹೋರಾಟ ತೀಕ್ಷ್ಣಗೊಂಡ, ವಿಸ್ತರಣೆಗೊಂಡ ಅವಧಿ

ವೇತನ ದರಗಳು ಅತ್ಯಂತ ಅಸಂಗತ ಮತ್ತು ಅಸ್ತವ್ಯಸ್ತವಾಗಿರುವ ಸ್ಥಿತಿಯನ್ನು ಬಹಿರಂಗಪಡಿಸಿತು. ಯಾವುದೇ ಸಮಾನ ವೇತನ ಸಿಗುವದಿರಲಿ, ಒಂದೇ ಕೈಗಾರಿಕೆಯಲ್ಲಿಯೂ, ಒಂದೇ ರೀತಿಯ ಕೆಲಸಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ವೇತನ ದರಗಳಲ್ಲೂ ಭಾರಿ ತಾರತಮ್ಯವಿತ್ತು. ಭಾರತದಲ್ಲಿನ ಕಾರ್ಮಿಕರನ್ನು ಕುರಿತ ರಾಯಲ್ ಮಿಷನ್(ಸರಕಾರದ ಆಯೋಗ)ದ ತನಿಖೆಯೂ ಇದೇ ತಾರತಮ್ಯವನ್ನು ಬಹಿರಂಗಪಡಿಸಿತು.

ಭಾರತದ ಕೈಗಾರಿಕಾ ಕಾರ್ಮಿಕರ ಸೇವಾ ಪರಿಸ್ಥಿತಿಗಳಲ್ಲಿನ ಅವ್ಯವಸ್ಥೆ ವೇತನ ದರಗಳಲ್ಲಿನ ಅಸಮಾನತೆಯ ಮತ್ತೊಂದು ಅಂಶದಲ್ಲಿ ಮತ್ತಷ್ಟು ಸ್ಪಷ್ಟವಾಗಿತ್ತು. ವಿಶ್ವದ ಹೆಚ್ಚಿನ ಬಂಡವಾಳಶಾಹಿ ದೇಶಗಳಲ್ಲಿ, ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳಲ್ಲಿನ ಕಾರ್ಮಿಕರ ವೇತನ ದರಗಳು ಇತರ ಕೈಗಾರಿಕೆಗಳ ಕಾರ್ಮಿಕರಲ್ಲಿ ಚಾಲ್ತಿಯಲ್ಲಿದ್ದ ವೇತನದ ದರಕ್ಕಿಂತ ದ್ವಿಗುಣವಾಗಿದ್ದವು. ಆದರೆ ಭಾರತದಲ್ಲಿ, ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳಲ್ಲಿನ ಕಾರ್ಮಿಕರ ವೇತನ ದರವು ಜವಳಿ ಕೈಗಾರಿಕೆಗಿಂತ ಶೇಕಡಾ 15 ರಷ್ಟು ಕಡಿಮೆಯಾಗಿದ್ದವು. ಆದರೆ ದೇಶದ ಕೈಗಾರಿಕಾ ವಿಸ್ತರಣೆಗೆ ಸಂಬಂಧಿಸಿದಂತೆ ಒಂದು ಗಮನಾರ್ಹ ಲಕ್ಷಣವೆಂದರೆ ಜವಳಿ ಉದ್ಯಮವನ್ನು ಅತ್ಯಂತ ಸಂಘಟಿತ ವಲಯವಾಗಿ ಸ್ಥಾಪಿಸಿದ್ದು, ಅಲ್ಲಿ ಭಾರತದ ಟ್ರೇಡ್ ಯೂನಿಯನ್ ಆಂದೋಲನದ ಆರಂಭದಿಂದಲೂ ಕಾರ್ಮಿಕರು ಬಂಡವಾಳಶಾಹಿ ಶೋಷಣೆಯ ವಿರುದ್ಧ ನಿರಂತರ ಪ್ರತಿರೋಧವನ್ನು ವ್ಯಕ್ತಪಡಿಸುತ್ತಿದ್ದರು. ಈ ನಿರಂತರ ಪ್ರತಿರೋಧವು ಈ ಕೈಗಾರಿಕೆಯ ಕಾರ್ಮಿಕರಿಗೆ ತುಲನಾತ್ಮಕವಾಗಿ ಉತ್ತಮ ವೇತನವನ್ನು ಪಡೆಯಲು ಅನುವು ಮಾಡಿಕೊಟ್ಟಿತು. ಭಾರತದ ಕೈಗಾರಿಕಾ ಕಾರ್ಮಿಕರ ವೇತನ ದರಗಳ ತುಲನಾತ್ಮಕ ವಿಶ್ಲೇಷಣೆಗೆ ಪ್ರವೇಶಿಸುವಾಗ ಈ ವಿಶಿಷ್ಟ ಲಕ್ಷಣವನ್ನು ಖಂಡಿತವಾಗಿ ಗಣನೆಗೆ ತೆಗೆದುಕೊಳ್ಳಬೇಕಾಗಿದೆ.

ಆದರೆ ಕಾರ್ಮಿಕರ ಜೀವನ ಪರಿಸ್ಥಿತಿಗಳ ಬಗ್ಗೆ ತನಿಖೆ ನಡೆಸಲು ಸರ್ಕಾರ ಯಾವುದೇ ಪ್ರಯತ್ನ ಮಾಡಲಿಲ್ಲ. ಕೆಲವು ಪ್ರಾಂತ್ಯಗಳ ಜೀವನ ವೆಚ್ಚ ಸೂಚ್ಯಂಕವನ್ನು ತಯಾರಿಸಲು ಕೆಲವು ಪ್ರಯತ್ನಗಳು ನಡೆದವು, ಆದರೆ ಕಾರ್ಮಿಕ ವರ್ಗದ ಬಜೆಟ್‌ಗಳಿಗೆ ಸಂಬಂಧಿಸಿದಂತೆ ಯಾವುದೇ ಮಾಹಿತಿಗಳನ್ನು ಸಂಗ್ರಹಿಸಲಾಗಲಿಲ್ಲ. ಕೈಗಾರಿಕಾವಾರಾಗಿ ಹೆಚ್ಚು ಮುಂದುವರಿದ ಬಂಗಾಳ ಪ್ರಾಂತ್ಯದಲ್ಲಿ ಸರ್ಕಾರವು ಜೀವನ ವೆಚ್ಚ ಸೂಚ್ಯಂಕವನ್ನು ನಿರ್ಧರಿಸಲು ಸಹ ಪ್ರಯತ್ನಿಸಲಿಲ್ಲ. ಮುಂಬೈ ಕಾರ್ಮಿಕ ಕಚೇರಿ ಮಾತ್ರ ಮುಂಬೈ, ಶೋಲಾಪುರ ಮತ್ತು ಅಹಮದಾಬಾದ್‌ನಲ್ಲಿನ ಕಾರ್ಮಿಕರ ಕುಟುಂಬ ಬಜೆಟ್ ಬಗ್ಗೆ ತನಿಖೆ ನಡೆಸಲು ಪ್ರಯತ್ನಿಸಿತು.

ಲಭ್ಯವಿರುವ ವರದಿಗಳು ಕಾರ್ಮಿಕ ವರ್ಗದ ಜೀವನ ಪರಿಸ್ಥಿತಿ ಭೀಕರವಾಗಿ ಅವನತಿ ಹೊಂದುತ್ತಿದ್ದವು ಎಂಬುದನ್ನು ಬಹಿರಂಗಪಡಿಸುತ್ತವೆ. ಅತಿ ದಾರಿದ್ರ್ಯದ ಮಟ್ಟದ ಆಹಾರ ಸೇವನೆ ಮತ್ತು ಸರಿಯಾದ ವೈದ್ಯಕೀಯ ನೆರವು ಸಿಗದಿರುವುದು ಅವರನ್ನು ಕಠಿಣ ಕಾಯಿಲೆ ಮತ್ತು ಹೆಚ್ಚಿನ ಮರಣ ಪ್ರಮಾಣದತ್ತ ದೂಡಿತು. ಈ ಸಂದರ್ಭಗಳಲ್ಲಿ, ಶಿಕ್ಷಣಕ್ಕಾಗಿ ಹಣ ಖರ್ಚುಮಾಡುವದು ಕಾರ್ಮಿಕ ವರ್ಗದ ಕುಟುಂಬಗಳಲ್ಲಿ ಕಲ್ಪನೆಗೆ ಮೀರಿದ ವಿಷಯವಾಗಿತ್ತು. ಆದ್ದರಿಂದ ಇಪ್ಪತ್ತನೇ ಶತಮಾನದ ಎರಡನೆಯ ಮತ್ತು ಮೂರನೆಯ ದಶಕದಲ್ಲಿ ಸಹ ಕಾರ್ಮಿಕ ವರ್ಗದ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಗುಣಮಟ್ಟವು ಭವಿಷ್ಯದಲ್ಲಿ ವಿಮೋಚನೆಯ ನಿರೀಕ್ಷೆಯಿಲ್ಲದೆ ಶೋಚನೀಯವಾಗಿ ಹಿಂದುಳಿಯಿತು.

ಆದರೆ ಇದು ಅಂತ್ಯವಾಗಿರಲಿಲ್ಲ. ಈ ಅಸಹಜವಾದ ಕಡಿಮೆ ವೇತನ ದರಗಳು ಮತ್ತು ಅದರ ಪರಿಣಾಮವಾಗಿ ಉಂಟಾದ ಆರ್ಥಿಕ ದುಃಖಗಳು ಅಂತಿಮವಾಗಿ ಭಾರತದ ರೈತರಂತೆ, ಕಾರ್ಮಿಕ ವರ್ಗವನ್ನು ಮತ್ತೆ–ಮತ್ತೆ ಸಾಲ ಮಾಡಬೇಕಾದ ಪರಿಸ್ಥಿತಿ ಆವರಿಸಿತು.

ರೈಲ್ವೆ ಕಾರ್ಮಿಕರನ್ನೂ ಸಹ ಈ ದಾಳಿಯ ಯೋಜನೆಯಿಂದ ಹೊರಗುಳಿಸಲಿಲ್ಲ. 1926 ರಲ್ಲಿ ನೇಮಕಗೊಂಡ ಸರ್ ವಿನ್ಸೆಂಟ್ ರಾವೆನ್ ನೇತೃತ್ವದ ರಾಜ್ಯ ರೈಲ್ವೆ ಕಾರ್ಯಾಗಾರ ಸಮಿತಿಯು ರೈಲ್ವೆ ಕಾರ್ಮಿಕರನ್ನು ದೊಡ್ಡ ಪ್ರಮಾಣದಲ್ಲಿ ರಿಂಟ್ರೆಂಚ್‌ಮಾಡಲು ಶಿಫಾರಸು ಮಾಡಿತು, ಇದರ ಪರಿಣಾಮವಾಗಿ 75,000 ಕಾರ್ಮಿಕರು ನೇರವಾಗಿ ಅಪಾಯಕ್ಕೆ ಒಳಗಾದರು.

ರೈಲ್ವೆ ಕಾರ್ಮಿಕರಲ್ಲಿ ದೀರ್ಘಕಾಲದ ಮತ್ತು ಬಗೆಹರಿಯದ ಸಮಸ್ಯೆಗಳು, ವೇತನದ ಕೊರತೆ, ಕನಿಷ್ಠ ವೇತನದ ಬೇಡಿಕೆಯನ್ನು ತಿರಸ್ಕರಿಸುವುದು, ಸಂಘಗಳಿಗೆ ಮಾನ್ಯತೆ ನೀಡಲು ನಿರಾಕರಿಸುವುದು, ಯುರೋಪಿಯನ್ ಅಧಿಕಾರಿಗಳು ಭಾರತದ ಕಾರ್ಮಿಕರನ್ನು ಅವಮಾನಿಸುವುದು ಮತ್ತು ಇನ್ನೂ ಹಲವಾರು ರೀತಿಯ ತೀವ್ರ ಅಸಮಾಧಾನಗಳು ಆಗಲೇ ಇದ್ದವು. ವಿನ್ಸೆಂಟ್ ರಾವೆನ್ ಸಮಿತಿಯ ಪ್ರತಿಗಾಮಿ ಶಿಫಾರಸು ಪರಿಸ್ಥಿತಿಯನ್ನು ಮತ್ತಷ್ಟು ಉಲ್ಬಣಗೊಳಿಸಿತು.

ಸ್ಥಳೀಯ ಮತ್ತು ವಿದೇಶಿ ಬಂಡವಾಳಶಾಹಿಗಳ ಒಟ್ಟಾರೆ ಆಕ್ರಮಣದಿಂದ ಉಲ್ಬಣಗೊಂಡ ಕಾರ್ಮಿಕರ ಈ ಅಸಹನೀಯ ಸ್ಥಿತಿ ಸಾಮ್ರಾಜ್ಯಶಾಹಿ ಸರ್ಕಾರದ ವಸಾಹತುಶಾಹಿ ಕಾರ್ಮಿಕ–ನೀತಿಯಿಂದ ಮತ್ತಷ್ಟು ಹದಗೆಟ್ಟಿತು. ಮತ್ತು ವಿವಿಧ ಕೈಗಾರಿಕೆಗಳಲ್ಲಿನ ಮುಂಬೈಯಲ್ಲಿ ಹತ್ತಿ, ಬಂಗಾಳದಲ್ಲಿ ಸೆಣಬು, ಜಮ್ಶೆಡ್ಪುರದಲ್ಲಿ ಉಕ್ಕು, ರೈಲ್ವೆಗಳು ಮತ್ತು ಹಲವಾರು ಇತರ ಕಾರ್ಮಿಕರಲ್ಲಿ ಕುದಿಯುತ್ತಿದ್ದ ಅಸಮಾಧಾನದ ಅಲೆಯ ಫಲಿತಾಂಶವಾಗಿ ಸ್ವಲ್ಪೇ ಸಮಯದಲ್ಲಿ ದೇಶಾದ್ಯಂತ ಬೃಹತ್ ಮುಷ್ಕರ ಕಾರ್ಯಾಚರಣೆಗಳು ನಡೆದವು.

ಲುಲಾ ಖುಲಾಸೆ: ಲ್ಯಾಟಿನ್ ಅಮೆರಿಕ ದಲ್ಲಿ ಮತ್ತೆ ಎಳೆಗೆಂಪು ಅಲೆ?



ಜಗದ ಸುತ್ತ

ವಸಂತರಾಜ್ ಎನ್.ಕೆ.

ಬ್ರೆಜಿಲ್ ನ ಮಾಜಿ ಅಧ್ಯಕ್ಷ ಮತ್ತು ಅಲ್ಲಿನ ವರ್ಕರ್ಸ್ ಪಾರ್ಟಿಯ ಜನಪ್ರಿಯ ನಾಯಕ ಲುಲಾ ಅವರ ಶಿಕ್ಷೆಯನ್ನು ಮಾರ್ಚ 8 ರಂದು ಕೊಟ್ಟ ತೀರ್ಪಿನಲ್ಲಿ ಸುಪ್ರೀ ಕೋರ್ಟು ರದ್ದು ಮಾಡಿದೆ. ಇದರೊಂದಿಗೆ ಲುಲಾ ಅಧ್ಯಕ್ಷ ಪದವಿಗೆ ಸ್ಪರ್ಧಿಸುವಂತಿಲ್ಲ ಎಂಬ ನಿಷೇಧ ಸಹ ರದ್ದಾಗಿದೆ. ಇದರಿಂದಾಗಿ ಲುಲಾ 2022ರಲ್ಲಿ ನಡೆಯಲಿರುವ ಅಧ್ಯಕ್ಷೀಯ ಚುನಾವಣೆಗಳಲ್ಲಿ ಸ್ಪರ್ಧಿಸಬಹುದಾಗಿದೆ. ಲುಲಾ ಆಗಲಿ ಅವರ ಪಕ್ಷವಾಗಲಿ ಅವರು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುತ್ತಾರೆ ಎಂದೇನೂ ಹೇಳಿಲ್ಲ. ಆದರೂ ಬ್ರೆಜಿಲ್ ನಲ್ಲಿ ವಿದ್ಯುತ್ ಸಂಚಾರವಾದಂತಾಗಿದೆ.

ಈಗಾಗಲೇ ಲ್ಯಾಟಿನ್ ಅಮೆರಿಕದ 'ಟ್ರಂಪ್' ಎಂದು ಹೆಸರಾದ ಈಗಿನ ಬ್ರೆಜಿಲ್ ನ ಅಧ್ಯಕ್ಷ ಬೊಲ್ಸನಾರೊ ದುರಾಡಳಿತದ ವಿರುದ್ಧ ರೋಸಿ ಹೋಗಿದ್ದು ಜನರ ಆಕ್ರೋಶದ ಕಟ್ಟೆಯೊಡೆಯುತ್ತಿದೆ. ಹಿಂದಿನ ವರ್ಕರ್ಸ್ ಪಾರ್ಟಿಯ ಜನಕಲ್ಯಾಣ ಯೋಜನೆಗಳನ್ನು ರದ್ದು ಮಾಡಿದ ಆತನ ಆಡಳಿತವು ದುಡಿಯುವ ಜನರ ಮೇಲೆ ಉಗ್ರ ನವ-ಉದಾರವಾದಿ ಆರ್ಥಿಕ ನೀತಿಗಳ ಮೂಲಕ ಬೆಲೆಏರಿಕೆ, ಉದ್ಯೋಗನಷ್ಟ, ಆದಾಯ ಕುಸಿತಗಳ ಸಂಕಷ್ಟಗಳ ಸರಮಾಲೆಯನ್ನೇ ಹೇರಿದೆ.

ಕೊವಿಡ್-19 ಸಮಸ್ಯೆಯೇ ಅಲ್ಲ ಎಂಬ ಅವೈಜ್ಞಾನಿಕ ಧೋರಣೆಯಿಂದಾಗಿ ತೀವ್ರ ಆರೋಗ್ಯ ಬಿಕ್ಕಟ್ಟು ಎದುರಾಗಿದೆ. ಬ್ರೆಜಿಲ್ 2.7 ಲಕ್ಷ ಕೊವಿಡ್ ಸಾವುಗಳೊಂದಿಗೆ ಎರಡನೇಯ ಅತಿ ಹೆಚ್ಚು ಕೊವಿಡ್ ಸಾವುಗಳನ್ನು ಕಂಡ ದೇಶ ಎಂಬ ಕುಖ್ಯಾತಿ ಪಡೆಯಿತು. ಹಲವು ತಿಂಗಳುಗಳಿಂದ ಅಮೆರಿಕ, ಬ್ರೆಜಿಲ್, ಕೊವಿಡ್ ಸಾವುಗಳಲ್ಲಿ ಅನುಕ್ರಮವಾಗಿ ಮೊದಲ ಎರಡು ಸ್ಥಾನಗಳನ್ನು ಹೊಂದಿದ್ದು ಈ ದೇಶಗಳ ಮುಖ್ಯಸ್ಥರು ಕೊವಿಡ್-19 ಸಮಸ್ಯೆಯೇ ಅಲ್ಲ ಎಂಬ ಅವೈಜ್ಞಾನಿಕ ಧೋರಣೆ ಮತ್ತು ಉಗ್ರ ನವ-ಉದಾರವಾದಿ ಆರ್ಥಿಕ ನೀತಿಗಳ ಚಾಂಪಿಯನ್ನುಗಳಾಗಿದ್ದರು ಎಂಬುದು ಆಕಸ್ಮಿಕವಲ್ಲ, ಬ್ರೆಜಿಲ್ ಆಸ್ಪತ್ರೆಗಳು ತುಂಬಿದ್ದು ಅದು ಆರೋಗ್ಯ ತುರ್ತು ಪರಿಸ್ಥಿತಿ ಎದುರಿಸುತ್ತಿದೆ. ಆದರೂ ಬೊಲ್ಸನಾರೊ ಧೋರಣೆ ಬದಲಾಗಿಲ್ಲ. ಅಮೆರಿಕನ್ ಸಾಮ್ರಾಜ್ಯಶಾಹಿಗೆ ಸೆಡ್ಡು ಹೊಡೆದು ನಿಂತಿದ್ದ ಬ್ರೆಜಿಲನ್ನು ಅಮೆರಿಕದ ಬಾಲಂಗೋಚಿ ಮಾಡಿದ ಅಪಕೀರ್ತಿ ಸಹ ಇವರದ್ದು.

ಈ ಪರಿಸ್ಥಿತಿಯಿಂದಾಗಿ ಜನ ರೋಸಿ ಹೋಗಿದ್ದು ಕೆಲವು ವಾರಗಳ ಹಿಂದೆ ಬೊಲ್ಸನಾರೊ ರನ್ನು ಅಧ್ಯಕ್ಷೀಯ ಕರ್ತವ್ಯಲೋಪ ಎಸಗಿರುವ ದೋಷಾರೋಪಣೆಗೆ ಒಳಪಡಿಸಿ ಅಧ್ಯಕ್ಷ ಪದವಿಯಿಂದ ಪದಚ್ಯುತಗೊಳಿಸಬೇಕೆಂದು ವಿರೋಧ ಪಕ್ಷಗಳು ಮಾತ್ರವಲ್ಲ, ಅವರನ್ನು ಹಿಂದೆ ಬೆಂಬಲಿಸಿದ್ದ ಪಕ್ಷಗಳು ಕೂಡಾ ವ್ಯಾಪಕ ಪ್ರದರ್ಶನಗಳನ್ನು ನಡೆಸಿವೆ. ಕಳೆದ ಚುನಾವಣೆಯನ್ನು ಸಹ ಬೊಲ್ಸನಾರೊ ಮತ್ತು ಅವರ ಪಕ್ಷ ಸರಣಿ ಅಕ್ರಮಗಳನ್ನು ನಡೆಸಿ ಗೆದ್ದಿತ್ತು. ಇವುಗಳಲ್ಲಿ ವರ್ಕರ್ಸ್ ಪಾರ್ಟಿಯ ಇಬ್ಬರೂ ಮಾಜಿ ಅಧ್ಯಕ್ಷರುಗಳು ಮತ್ತು ಜನಪ್ರಿಯ ನಾಯಕರುಗಳಾದ ಲುಲಾ ಮತ್ತು ದಿಲ್ಮಾ ಅವರಿಬ್ಬರ ಮೇಲೆ ಸುಳ್ಳು ಭ್ರಷ್ಟಾಚಾರದ ಕೇಸುಗಳನ್ನು ಹಾಕಿ ಅವರು ಚುನಾವಣೆಗೆ ಸ್ಪರ್ಧಿಸದಂತೆ ಮಾಡಿದ್ದು ಪ್ರಮುಖವಾದ್ದು.

ಲುಲಾ ಅವರನ್ನು 'ಆಪರೇಶನ್ ಕಾರ್ ವಾಶ್' ಎಂಬ ಹಗರಣದಲ್ಲಿ ಆಪಾದಿತರನ್ನಾಗಿ ಮಾಡಿ 580 ದಿನಗಳ ಕಾಲ ಜೈಲಿಗೆ ಕಳಿಸಲಾಗಿತ್ತು. ಈ ಪಿತೂರಿಯಲ್ಲಿ ರಾಜಕೀಯ ನಾಯಕರುಗಳಲ್ಲದೆ ನ್ಯಾಯಾಂಗ, ಕಾರ್ಯಾಂಗದ ಅಧಿಕಾರಿಗಳು ಶಾಮೀಲಾಗಿದ್ದರು. ಲುಲಾ ಅವರು 'ಅಪರಾಧಿ' ಎಂದು ತೀರ್ಪು ಕೊಟ್ಟ ನ್ಯಾಯಾಧೀಶ ಅದರ ನಂತರ ಕೂಡಲೇ ಕೇಂದ್ರ ಸರಕಾರದಲ್ಲಿ ನ್ಯಾಯ ಇಲಾಖೆಯ ಮಂತ್ರಿಯಾಗಿದ್ದು ಇದನ್ನು ಬಯಲುಗೊಳಿಸುತ್ತದೆ. ಲುಲಾ ಜೈಲಿನಲ್ಲಿದ್ದಷ್ಟು ದಿನ ಜೈಲಿನ ಎದುರು ದಿನಾ ಪ್ರತಿಭಟನೆ ಧರಣಿಗಳು ನಡೆಯುತ್ತಿದ್ದವು. ಬೊಲ್ಸಾರೊ ಸರಕಾರ ಕಲ್ಲುಹೃದಯದ್ದಾಗಿತ್ತು. ಲುಲಾ ಜೈಲಿನಲ್ಲಿದ್ದಾಗ ಅವರ ಸೋದರ ಮತ್ತು ಸಹಚರೆ ಇಬ್ಬರೂ ಗಂಭೀರವಾಗಿ ಕಾಯಿಲೆ ಬಿದ್ದು ಆ ಮೇಲೆ ನಿಧನರಾದರೂ ಅವರ ಅಂತಿಮ ದರ್ಶನ ಪಡೆಯಲಿಕ್ಕೆ ಅವಕಾಶ ಕೊಟ್ಟಿರಲಿಲ್ಲ.

ವರ್ಕರ್ಸ್ ಪಾರ್ಟಿ ಈಗಾಗಲೇ ಬೊಲ್ಸನಾರೊ ದುರಾಡಳಿತದ ವಿರುದ್ಧ ದೇಶವ್ಯಾಪಿ ಅಭಿಯಾನ ನಡೆಸುತ್ತಿದ್ದು, ಲುಲಾ ಅವರು ಅದರ ಜತೆಗೆ ಸೇರಿಕೊಂಡಿದ್ದು ಅದಕ್ಕೆ ಆನೆಬಲ ಬಂದಂತಾಗಿದೆ. ಅವರು ತಮ್ಮ ದೇಶವ್ಯಾಪಿ ಅಭಿಯಾನವನ್ನು ಅವರ ಮೊದಲ ಸಂಘಟನೆಯಾಗಿದ್ದ ಲೋಹಕಾರ್ಮಿಕರ ಯೂನಿಯನಿನ ಮುಖ್ಯ ಕಚೇರಿಯಿಂದ ಆರಂಭಿಸಿದ್ದು ಜನರ ಉತ್ಸಾಹವನ್ನು ಇಮ್ಮಡಿಸಿದೆ. ಮುಖ್ಯ ಕಚೇರಿಯಲ್ಲಿ ಮಾತನಾಡುತ್ತಾ ಬ್ರೆಜಿಲ್ ನಲ್ಲಿ ಸರಕಾರವೇ ಇಲ್ಲ. ಜನತೆಯ ಉದ್ಯೋಗ, ಆದಾಯ, ಜೀವನಾವಶ್ಯಕ ವಸ್ತುಗಳ ಲಭ್ಯತೆ, ಆರೋಗ್ಯ, ಪರಿಸರ, ಕೈಗಾರಿಕೆ, ಕೃಷಿ ಯಾವುದರ ಬಗೆಗೂ ಅದು ತಲೆಕೆಡಿಸಿಕೊಳ್ಳುತ್ತಿಲ್ಲ. ಈ ಸರಕಾರ ಹೋಗಬೇಕು ಎಂದು ಪ್ರಚಾರ ಮಾಡುತ್ತಿದ್ದಾರೆ. ತಮ್ಮ ಬಿಡುಗಡೆಗೆ ಒತ್ತಾಯಿಸಿ ಅವಿತರವಾಗಿ ಸೌಹಾರ್ದತೆ ಪ್ರದರ್ಶಿಸಿದ ಅರ್ಜೆಂಟಿನಾ, ವೆನೆಜುವೆಲಾ, ಕ್ಯೂಬಾ ಅಧ್ಯಕ್ಷರುಗಳು, ಅಮೆರಿಕದ ಬರ್ನಿ ಸ್ಯಾಂಡರ್ಸ್, ಫ್ರಾನ್ಸ್ ಮೇಯರ್ ಮುಂತಾದ ವಿದೇಶೀ ರಾಜಕೀಯ ನಾಯಕರು, ಪೋಪ್, ದೇಶ-ವಿದೇಶಗಳ ಕಾರ್ಮಿಕ ರೈತ-ಕೂಲಿ ಸಂಘಟನೆಗಳು - ಇವರಿಗೆಲ್ಲ ಲುಲಾ ಕೃತಜ್ಞತೆಗಳನ್ನು ಸಲ್ಲಿಸಿದರು.

ಲುಲಾ ಖುಲಾಸೆಯಾಗಿ ಮತ್ತೆ ಸಕ್ರಿಯ ರಾಜಕಾರಣಕ್ಕೆ ಬರಲು ಸಾಧ್ಯವಾಗಿದ್ದು ಬ್ರೆಜಿಲ್ ನ 2022 ಚುನಾವಣಾ ಕಣದ ರಣಕಹಳೆ ಮೊಳಗಿದಂತಾಗಿದೆ. ಬೊಲ್ಸನಾರೊ ರಿಂದ ಅವರ ಬೆಂಬಲಿಗರೂ ಭ್ರಮನಿರಸನ ಹೊಂದಿದ್ದು ಲುಲಾ ಅವರ ವರ್ಕರ್ಸ್ ಪಾರ್ಟಿಗೆ ಬೆಂಬಲ ಹೆಚ್ಚುತ್ತಿದೆ. ಲುಲಾ ಮತ್ತು ವರ್ಕರ್ಸ್ ಪಾರ್ಟಿಯ ಆಡಳಿತದ ಸಾಧನೆಗಳ ನೆನಪು ಬ್ರೆಜಿಲರಲ್ಲಿ ಹಸಿರಾಗಿದೆ. 2003-2013ರ ಅವಧಿಯಲ್ಲಿ ಬ್ರೆಜಿಲ್ ನ ಜಿಡಿಪಿ ಶೇ.64ರಷ್ಟು ಹೆಚ್ಚಿತ್ತು. ಬಡತನವನ್ನು ಅರ್ಧದಷ್ಟು ಕಡಿತ ಮಾಡಲು ಸಾಧ್ಯವಾಗಿತ್ತು. ಲಕ್ಷಾಂತರ ಹೊಸ ಉದ್ಯೋಗಗಳ ಸೃಷ್ಟಿಯಾಗಿತ್ತು. ನಿಜಗೂಲಿ ಶೇ. 75ರಷ್ಟು ಹೆಚ್ಚಿತ್ತು. ಉತ್ತರ ಅಮೆರಿಕದ ವಿರುದ್ಧ ಲ್ಯಾಟಿನ್ ಅಮೆರಿಕದ ದೇಶಗಳ ನಾಯಕರಾಗಿಯೂ, ಬ್ರಿಕ್ಸ್ ಮುಂತಾದ ಜಾಗತಿಕ ವೇದಿಕೆಗಳ ಮೂಲಕ ಮೂರನೇ ಜಗತ್ತಿನ ನಾಯಕರಾಗಿಯೂ ಲುಲಾ ಹೊಮ್ಮಿದ್ದರು. ಹಾಗಾಗಿಯೇ ಏನೋ, ಅವರ ಬಿಡುಗಡೆಯ ನಂತರ ಮಾಡಲಾದ ಸಮೀಕ್ಷೆಯ ಪ್ರಕಾರ, ಈಗ ಚುನಾವಣೆ ನಡೆದರೆ ಲುಲಾ ಶೇ. 50 ಮತ್ತು ಬೊಲ್ಸನಾರೊ ಕೇವಲ ಶೇ. 38 ಮತ ಪಡೆಯಲಿದ್ದಾರೆ.

ಲುಲಾ ಅವರ ಬಿಡುಗಡೆ ಬ್ರೆಜಿಲ್ ನಲ್ಲಿ ಮಾತ್ರವಲ್ಲ, ಇಡೀ ಲ್ಯಾಟಿನ್ ಖಂಡದ ರಾಜಕಾರಣದಲ್ಲಿ ಉತ್ಸಾಹ ಮೂಡಿಸಿದೆ. ಲ್ಯಾಟಿನ್ ಅಮೆರಿಕದ ಎಲ್ಲೆಡೆ ಉಗ್ರ ಬಲಪಂಥೀಯ ಜನಮರುಳು ಮತ್ತು ಎಡ-ಪ್ರಗತಿಪರ ಸಾಮ್ರಾಜ್ಯಶಾಹಿ-ವಿರೋಧಿ ಶಕ್ತಿಗಳ ನಡುವೆ ರಾಜಕೀಯ ಕದನ ತೀವ್ರಗೊಂಡಿದೆ. ಎಡ-ಪ್ರಗತಿಪರ ಸಾಮ್ರಾಜ್ಯಶಾಹಿ-ವಿರೋಧಿ ಶಕ್ತಿಗಳು ಮೈಲುಗೈ ಪಡೆಯುತ್ತಿರುವಂತೆ ಕಾಣುತ್ತಿದೆ. ಈಗಾಗಲೇ ವೆನೆಜುವೇಲಾ, ಅರ್ಜೆಂಟಿನಾ, ಬೊಲಿವಿಯಾ, ಮೆಕ್ಸಿಕೊಗಳಲ್ಲಿ ಎಡ-ಪ್ರಗತಿಪರ ಸರಕಾರಗಳಿವೆ. ಉಗ್ರ ಬಲಪಂಥೀಯ ಸರಕಾರಗಳಿರುವ ಚಿಲಿ, ಬ್ರೆಜಿಲ್ ಗಳಲ್ಲಿ ಸರಕಾರಗಳು ಜನಾಕ್ರೋಶಕ್ಕೆ ಗುರಿಯಾಗಿದ್ದು ತೀವ್ರ ವಿರೋಧ ಎದುರಿಸುತ್ತಿವೆ. ಮುಂದೆ ಬ್ರೆಜಿಲ್ ಮತ್ತು ಚಿಲಿ ಗಳಲ್ಲಿ ಎಡ-ಪ್ರಗತಿಪರ ಸಾಮ್ರಾಜ್ಯಶಾಹಿ-ವಿರೋಧಿ ಶಕ್ತಿಗಳು ಅಧಿಕಾರಕ್ಕೆ ಬಂದರೆ ಮತ್ತೆ 'ಎಳೆಗೆಂಪು ಅಲೆ' ಲ್ಯಾಟಿನ್ ಅಮೆರಿಕವನ್ನು ಆವರಿಸುವ ಸೂಚನೆಗಳು ಕಾಣುತ್ತಿವೆ. 20 ನೇ ಶತಮಾನದ ಕೊನೆಯ ದಶಕದ ಎರಡನೇಯ ಅರ್ಧಭಾಗ ಮತ್ತು 21ನೇ ಶತಮಾನದ ಮೊದಲ ದಶಕದ ಮೊದಲನೆಯ ಅರ್ಧ ಭಾಗದಲ್ಲಿ 2-3 ಬಿಟ್ಟರೆ, ಲ್ಯಾಟಿನ್ ಅಮೆರಿಕದ ಎಲ್ಲ ದೇಶಗಳಲ್ಲಿ ಎಡ-ಪ್ರಗತಿಪರ ಸಾಮ್ರಾಜ್ಯಶಾಹಿ-ವಿರೋಧಿ ಶಕ್ತಿಗಳು ಅಧಿಕಾರಕ್ಕೆ ಬಂದಿದ್ದನ್ನು ಎಳೆಗೆಂಪು ಅಲೆ' ಎಂದು ಕರೆಯಲಾಗಿತ್ತು. ●

ಭಾರತದ ಜನ ಇತಿಹಾಸ ಮಾಲೆಯಿಂದ ಇತಿಹಾಸದ ಪಾಠಗಳನ್ನು............ ಪುಟ 16 ರಿಂದ

ಶ್ರಮದ ಕೆಲಸ. ಇದು ಸಾಲದೆಂಬಂತೆ ಇಂದಿನ ಶ್ರೇಣೀಬದ್ಧ ಜಾತಿ-ಅಸ್ಪೃಶ್ಯತೆಗಳ ಮತ್ತು ವರ್ಗ ವಿಭಜಿತ ಅಸಮಾನ ಸಮಾಜ ವ್ಯವಸ್ಥೆಯನ್ನು ಸಮರ್ಥಿಸಿಕೊಳ್ಳುವ ಗಟ್ಟಿಗೊಳಿಸುವ ವರ್ತಮಾನದ ರಾಜಕೀಯ ಅಗತ್ಯಗಳನ್ನು ಪೂರೈಸುವ ತಿರುಚಿದ ಇತಿಹಾಸ ಸೃಷ್ಟಿಸಲು, ವಸ್ತುನಿಷ್ಠ ಇತಿಹಾಸದ ಅಂಶಗಳನ್ನು ಅಳಿಸಿ ಹಾಕಲು ಗಂಭೀರ ಪ್ರಯತ್ನಗಳು ನಡೆದಿವೆ. ಅದರ ಹುಳುಕುಗಳನ್ನು ಬಯಲಿಗೆಳೆಯಬೇಕಾಗಿದೆ.

ಈ ನಿಟ್ಟಿನಲ್ಲಿ ಸಾಕಷ್ಟು ಸಂಶೋಧನೆ ನಡೆದಿದ್ದರೂ, 'ಭಾರತದ ಜನರ ಒಂದು ಸಮಗ್ರ ಇತಿಹಾಸ'ದ ಸ್ಥೂಲ ರೂಪುರೇಷೆಗಳನ್ನೂ ದಾಖಲಿಸಲಾಗಿಲ್ಲ. **"ಭಾರತದ ಜನ ಇತಿಹಾಸ ಮಾಲೆ"** ಈ ಗುರಿಯತ್ತ ಒಂದು ಗಂಭೀರ ಪ್ರಯತ್ನ. ಈ ಮಹತ್ವಾಕಾಂಕ್ಷೀ ಯೋಜನೆಯನ್ನು ಹಿರಿಯ ಇತಿಹಾಸಕಾರ ಪ್ರೊ. ಇರ್ಫಾನ್ ಹಬೀಬ್ ರವರ ನೇತೃತ್ವದಲ್ಲಿ **"ಅಲಿಘರ್ ಹಿಸ್ಟೋರಿಯನ್ಸ್ ಸೊಸೈಟಿ"** ಹಮ್ಮಿಕೊಂಡಿದೆ. **"ಅಲಿಘರ್ ಹಿಸ್ಟೋರಿಯನ್ಸ್ ಸೊಸೈಟಿ"** ಹಲವು ವರ್ಷಗಳಿಂದ ಇತಿಹಾಸದ ಬಗ್ಗೆ ವೈಜ್ಞಾನಿಕ ಮತ್ತು ಜಾತ್ಯಾತೀತ ಕಣ್ಣೋಟವನ್ನು ಪ್ರೋತ್ಸಾಹಿಸುತ್ತಿರುವ ಹಾಗೂ ಕೋಮುವಾದಿ ಮತ್ತು ಸಂಕುಚಿತವಾದಿ ವ್ಯಾಖ್ಯೆಗಳನ್ನು ಪ್ರತಿರೋಧಿಸುತ್ತಿರುವ ಒಂದು ಸಂಸ್ಥೆ ಕೂಡಾ.

ಹಿರಿಯ ಇತಿಹಾಸಕಾರ **ಪ್ರೊ. ಇರ್ಫಾನ್ ಹಬೀಬ್** ರವರ ನೇತೃತ್ವದಲ್ಲಿ "ಅಲಿಘರ್ ಹಿಸ್ಟೋರಿಯನ್ಸ್ ಸೊಸೈಟಿ"ಯು ಭಾರತದ ಜನ ಇತಿಹಾಸವನ್ನು ಸ್ಥೂಲವಾಗಿಯಾದರೂ ಸಮಗ್ರವಾಗಿ ನಿರೂಪಿಸುವ ಮತ್ತು ಸಂಕಲಿಸುವ ಈ ಮಾಲೆಯಲ್ಲಿ 36 ಕೃತಿಗಳನ್ನು ಪ್ರಕಟಿಸುವ ಬೃಹತ್ ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಇದುವರೆಗೆ 15 ಕೃತಿಗಳು ಪ್ರಕಟವಾಗಿವೆ. ಅವುಗಳಲ್ಲಿ 6 (ಸಂಪುಟಗಳು 1ರಿಂದ 5 ಮತ್ತು 28) ಕೃತಿಗಳು ಈಗಾಗಲೇ ಅನುವಾದವಾಗಿ **"ಚಿಂತನ ಪುಸ್ತಕ"** ಕನ್ನಡದಲ್ಲಿ ಪ್ರಕಟಿಸಿದೆ. ಪೂರ್ವೇತಿಹಾಸ (ಸಂ.1), ಸಿಂಧೂ ನಾಗರಿಕತೆ (ಸಂ.2), ವೈದಿಕ ಯುಗ (ಸಂ.3), ಕಬ್ಬಿಣ ಯುಗ ಮತ್ತು ಧಾರ್ಮಿಕ ಕ್ರಾಂತಿಗಳು (ಸಂ.4), ಮೌರ್ಯರ ಭಾರತ (ಸಂ.5), ಭಾರತದ ಆರ್ಥಿಕತೆ 1858-1914 (ಸಂ.28) - ಈಗಾಗಲೇ ಪ್ರಕಟವಾಗಿರುವ ಕೃತಿಗಳು. ಮೌರ್ಯಾನಂತರದ ಭಾರತದ (ಕ್ರಿ.ಪೂ. 200-ಕ್ರಿ.ಶ. 3030) ರಾಜಕೀಯ-ಆರ್ಥಿಕ (ಸಂಪುಟ 6), ಸಮಾಜ-ಸಂಸ್ಕೃತಿ (ಸಂಪುಟ 7) ಮತ್ತು ಬ್ರಿಟಿಷ್ ಆಳ್ವಿಕೆಯ ಪ್ರಾರಂಭಿಕ ಹಂತದ (1757-1857) ಆರ್ಥಿಕತೆಯ (ಸಂಪುಟ 25) - ಈ ಮೂರು ಕೃತಿಗಳು ಇದೀಗ ಪ್ರಕಟಣೆಗೊಂಡಿವೆ. ಉಳಿದ 6 ಕೃತಿಗಳು ಅನುವಾದದ ಹಂತದಲ್ಲಿವೆ ಎಂದು ಚಿಂತನ ಪುಸ್ತಕ ಮಾಹಿತಿ ನೀಡಿದೆ. ಮೂರು ಕೃತಿಗಳ ಕಿರುವಿವರಗಳನ್ನು ಕೆಳಗೆ ಕೊಡಲಾಗಿದೆ.

ಈ ಮೂರು ಕೃತಿಗಳನ್ನು ಮಾರ್ಚ 13ರಂದು ವೆಬ್ ನಲ್ಲಿ ಬಿಡುಗಡೆ ಮಾಡುತ್ತಾ ಭಾರತದ ಜನ ಇತಿಹಾಸ ಮಾಲೆಯ ಪರಿಕಲ್ಪನೆಯ ಕುರಿತು **ಪ್ರೊ. ಇರ್ಫಾನ್ ಹಬೀಬ್** ಅವರು ಮಾತನಾಡಲಿದ್ದಾರೆ. ಅವರ ಜತೆ ಸಂವಾದಕ್ಕೂ ಅವಕಾಶವಿರುತ್ತದೆ. ಪರಿಣತ ಇತಿಹಾಸಕಾರರಾದ (ಕಲಬುರ್ಗಿ ಕೇಂದ್ರೀಯ ವಿವಿ ಯ ಉಪಕುಲಪತಿಗಳು ಮತ್ತು ಬೆಂಗಳೂರು ವಿ ವಿ ಇತಿಹಾಸ ವಿಭಾಗದ ಮುಖ್ಯಸ್ಥರಾಗಿದ್ದ) **ಡಾ.ಎಸ್. ಚಂದ್ರಶೇಖರ್**, (ಐ.ಸಿ.ಎಚ್.ಆರ್ ದಕ್ಷಿಣ ಕೇಂದ್ರದ) **ಡಾ. ಶಿವಶರಣ ಕೆ ಅರುಣಿ** ಮತ್ತು (ಕ್ರೈಸ್ಟ್ ವಿ ವಿ ಯ ಇತಿಹಾಸ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ) **ಡಾ. ಎಸ್.ಪಿ.ವಾಗೀಶ್ವರಿ** ಅವರು ಅನುಕ್ರಮವಾಗಿ ಸಂಪುಟ 25, 6 ಮತ್ತು 7 ರ ಪರಿಚಯವನ್ನು ಮಾಡಿಕೊಡಲಿದ್ದಾರೆ. ಅನುಕ್ರಮವಾಗಿ ಸಂಪುಟ 25, 6 ಮತ್ತು 7 ರ ಅನುವಾದಕರಾದ **ಡಾ. ಕೆ.ಎಂ. ಲೋಕೇಶ್, ಎಸ್.ಎನ್. ಸ್ವಾಮಿ** ಮತ್ತು **ಟಿ. ವೆಂಕಟೇಶ ಮೂರ್ತಿ** ಅವರುಗಳು ತಮ್ಮ ಅನುವಾದದ ಅನುಭವವನ್ನು ಹಂಚಿಕೊಳ್ಳಲಿದ್ದಾರೆ. ಇಡೀ ಕಾರ್ಯಕ್ರಮವನ್ನು ಫೇಸ್ ಬುಕ್ (ಜನಶಕ್ತಿ ಮೀಡಿಯಾ ಮತ್ತು ಋತುಮಾನ) ಮತ್ತು ಯೂಟ್ಯೂಬ್ (ಜನಶಕ್ತಿ ಮೀಡಿಯಾ) ನೇರ ಪ್ರಸಾರ ಮಾಡಲಾಗುತ್ತದೆ. ಇದು ಅಲ್ಲಿ ಶಾಶ್ವತವಾಗಿ ಲಭ್ಯವಿರಲಿದೆ.

ಪುರಾಣವನ್ನು ಇತಿಹಾಸ ಎಂದು ಪ್ರಚಾರ ಮಾಡುತ್ತಿರುವ ಇಂದಿನ ಸನ್ನಿವೇಶದಲ್ಲಿ ಇತಿಹಾಸದ ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ, ಪ್ರಾಧ್ಯಾಪಕರಿಗೆ ಹಾಗೂ ಎಲ್ಲ ಆಸಕ್ತರಿಗೆ ನಿಜವಾದ ಇತಿಹಾಸ ತಿಳಿಯಲು ಇದೊಂದು ಅಪೂರ್ವ ಅವಕಾಶ. ಭಾರತದ ಜನ ಇತಿಹಾಸ ಮಾಲೆಯಿಂದ ಇತಿಹಾಸದ ಪಾಠಗಳನ್ನು ಕಲಿಯೋಣ! ಇಂದಿನ ಉತ್ತಮ ಬದುಕನ್ನು ಕಟ್ಟಿಕೊಳ್ಳೋಣ ಮತ್ತು ನಾಳಿನ ಇತಿಹಾಸವನ್ನು ಸೃಷ್ಟಿಸೋಣ!!

JANASHAKTHI KANNADA VARA PATRIKE MARCH 15-21, 2021 Price: Rs. 10/- Date of Publication: 12 MARCH 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

ದೆಹಲಿ ರೈತ ಹೋರಾಟಕ್ಕೆ ನೂರು ದಿನ
ಕರಾಳ 3 ಕೃಷಿ ಮಸೂದೆಗಳು ವಾಪಸ್ಸಿಗೆ ರಾಜ್ಯದಾದ್ಯಂತ ಪ್ರತಿಭಟನೆ



ಕೇಂದ್ರ ಸರ್ಕಾರದ ಕೃಷಿ ಕಾಯ್ದೆಗಳ ವಿರುದ್ದ ದೆಹಲಿಯ ಗಡಿಭಾಗಗಳಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತ ಚಳುವಳಿಗೆ ನೂರು ದಿನಗಳು ಪೂರೈಸಿರುವ ಈ ಸಂದರ್ಭವನ್ನು ದೇಶಾಧ್ಯಂತ ಕಪ್ಪು ಬಾವುಟ ಪ್ರದರ್ಶನ ಮಾಡುವ ಮೂಲಕ ಕರಾಳ ದಿನವನ್ನಾಗಿ ಆಚರಿಸಲಾಗುತ್ತಿದೆ. ರೈತ ಚಳುವಳಿ ನೂರು ದಿನಗಳನ್ನು ಪೂರೈಸಿದರೂ ಜವಾಬ್ದಾರಿಯುತ ಮೋದಿ ಸರ್ಕಾರ ರೈತರನ್ನು ಕರೆದು ಮಾತುಕತೆ ನಡೆಸುವ ಬದಲು ರೈತರಿಗೆ ಅವಮಾನ ಮಾಡುವ ಕೆಲಸ ಮಾಡುತ್ತಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಆಕ್ರೋಶ ವ್ಯಕ್ತಪಡಿಸಿದೆ.

ಸಂಯುಕ್ತ ಕಿಸಾನ್ ಮೋರ್ಚಾದಿಂದ ಇಂದು ದೇಶಾಧ್ಯಂತ ನಡೆಯುತ್ತಿರುವ ಕರಾಳ ದಿನದ ಅಂಗವಾಗಿ ರಾಜ್ಯದಾದ್ಯಂತ ರೈತ, ಕಾರ್ಮಿಕ, ದಲಿತ ಮತ್ತು ಜನಪರ ಸಂಘಟನೆಗಳ ನೇತೃತ್ವದಲ್ಲಿ ಕಪ್ಪು ಬಾವುಟ ಪ್ರದರ್ಶಿಸಿ ಪ್ರತಿಭಟನೆ ನಡೆಸಿದೆ.

ಪ್ರತಿಭಟನೆಯಲ್ಲಿ ರೈತ ವಿರೋಧಿ ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯಬೇಕೆಂದು ಒತ್ತಾಯಿಸಿದೆ.













ಭಾರತದ ಜನ ಇತಿಹಾಸ ಮಾಲೆಯಿಂದ ಇತಿಹಾಸದ ಪಾಠಗಳನ್ನು ಕಲಿಯೋಣ!!

ಇತಿಹಾಸದಿಂದ ಪಾಠ ಕಲಿಯದವರು ಅದರ ಪುನರಾವರ್ತನೆ ಮಾಡುವ ಶಿಕ್ಷೆಗೆ ಒಳಗಾಗುತ್ತಾರೆ ಎಂಬ ಒಂದು ಪ್ರಸಿದ್ಧ ನುಡಿಯಿದೆ. ಅಂದರೆ ಇತಿಹಾಸದಲ್ಲಿ ಆಗಿ ಹೋದ ಪ್ರಮಾದಗಳು, ದುರಂತಗಳು ಮತ್ತೆ ಸಂಭವಿಸುತ್ತವೆ. ಇದರರ್ಥ ಇಂದಿನ ಬದುಕಿನ ದಾರಿಯನ್ನು ಅಥವಾ ನಾಳೆಯ ಇತಿಹಾಸವನ್ನು ಸೃಷ್ಟಿಸುವುದು ಜನರೇ. ಇತಿಹಾಸ ತಿಳಿದುಕೊಂಡು ಅದರಿಂದ ಪಾಠ ಕಲಿಯದಿದ್ದರೆ ನಾಳೆಯ ಇತಿಹಾಸ ಪ್ರಮಾದ, ದುರಂತಗಳಿಂದ ತುಂಬಿರುತ್ತದೆ. ಆದರೆ ಇತಿಹಾಸವನ್ನು ಹೆಚ್ಚಾಗಿ ಈ ರೀತಿ ನೋಡಲಾಗಿಲ್ಲ. ಇತಿಹಾಸವು ಕೆಲವು ರಾಜರುಗಳ, ಪ್ರವಾದಿಗಳ, ಮಹಾಪುರುಷರ ಬದುಕು, ಆಳ್ವಿಕೆ/ಚಿಂತನೆಗಳ ಗಾಥೆಗಳ ಸರಮಾಲೆ. ಇತಿಹಾಸವನ್ನು ಸೃಷ್ಟಿಸುವುದು ಅವರೇ. ಸಾಮಾನ್ಯ ಜನರು ಅದರಲ್ಲೂ ನಿಜ ಅರ್ಥದಲ್ಲಿ ಎಲ್ಲವನ್ನೂ ಉತ್ಪಾದಿಸುವ ದುಡಿಯುವ ಜನರಿಗೆ ಅದರಲ್ಲಿ ಹೆಚ್ಚಿನ ಪಾತ್ರವಿಲ್ಲ ಎಂಬ ಧೋರಣೆ ಕೆಲವು ಇತಿಹಾಸಕಾರರಲ್ಲಿ ಈಗಲೂ ಸಾಮಾನ್ಯವಾಗಿದೆ.

ಈ ಧೋರಣೆಗೆ 'ಜನರ ಇತಿಹಾಸ' ಅಥವಾ 'ತಳಮಟ್ಟದಿಂದ ಇತಿಹಾಸ' ಎಂಬ ಬದಲಿ ಧೋರಣೆಯನ್ನು 20ನೇ ಶತಮಾನದಲ್ಲಿ ಪ್ರಮುಖವಾಗಿ ಮಾರ್ಕ್ಸ್‌ವಾದಿ ಇತಿಹಾಸಕಾರರು ರೂಪಿಸಿದ್ದಾರೆ. ಮೊದಲಿಗೆ ಬ್ರಿಟನ್, ಯುರೋಪು, ಅಮೆರಿಕಗಳಲ್ಲಿ ವಿಕಾಸಗೊಂಡ ಇತಿಹಾಸದ ಈ ದೃಷ್ಟಿಕೋಣ ಇಡೀ ಜಗತ್ತನ್ನು ಆವರಿಸಿದೆ. ಇದನ್ನು ಭಾರತದ ಇತಿಹಾಸಕ್ಕೆ ಅನ್ವಯಿಸಿದವರಲ್ಲಿ ಡಿ.ಡಿ. ಕೊಸಾಂಬಿ, ಆರ್.ಎಸ್. ಶರ್ಮಾ ಮತ್ತು ಇರ್ಫಾನ್ ಹಬೀಬ್ ಅವರುಗಳು ಪ್ರಮುಖರು. ಅದು ಈಗ ಅದು ಒಂದು ಸ್ಪಷ್ಟ ಪಂಥವಾಗಿ ಮೂಡಿದೆ. ಈ ದೃಷ್ಟಿಕೋಣದಿಂದ ಸಂಶೋಧನೆ ಮಾಡಿದ ಇತಿಹಾಸ ಬರೆದ ಇತಿಹಾಸಕಾರರು, ತಮ್ಮದೇ ಪೂರ್ವಗ್ರಹಗಳಿಂದ ವಸ್ತುನಿಷ್ಠವಲ್ಲದ ದೃಷ್ಟಿಕೋಣದಿಂದ ಇತಿಹಾಸವನ್ನು ನೋಡಿದ ಬ್ರಿಟಿಷ್ ವಸಾಹತುಶಾಹಿ ಮತ್ತು ರಾಷ್ಟ್ರೀಯವಾದಿ ಇತಿಹಾಸಕಾರರಿಗೆ ಬದಲಿಯನ್ನು ಕಟ್ಟಿದರು.

ಇತಿಹಾಸವನ್ನು ನಿರ್ಮಿಸಿದ ಸಾಮಾನ್ಯ ಜನರನ್ನೇ ಕೇಂದ್ರವಾಗಿರಿಸಿದ ನಿಜವಾದ ಇತಿಹಾಸದ ಈ ವೈಜ್ಞಾನಿಕ, ವಸ್ತುನಿಷ್ಠ ಅಧ್ಯಯನವು ವಿವಿಧ ಕಾಲಘಟ್ಟಗಳಲ್ಲಿ ಇತಿಹಾಸದ ಚಲನೆಯನ್ನು, ಆಯಾ ಕಾಲಘಟ್ಟದಲ್ಲಿ ಜನರ ರಾಜಕೀಯ ಆರ್ಥಿಕ ಮಾತ್ರವಲ್ಲ, ಸಾಮಾಜಿಕ ಸಾಂಸ್ಕೃತಿಕ ಬದುಕಿನ ಎಲ್ಲಾ ಆಯಾಮಗಳನ್ನು ಗಣನೆಗೆ ತೆಗೆದುಕೊಳ್ಳುತ್ತದೆ. ಹೆಚ್ಚೇನೂ ಲಿಖಿತ ದಾಖಲೆಗಳು, ನೇರ ಪುರಾವೆಗಳು ಇರದ ಭಾರತದ ದೀರ್ಘ ಇತಿಹಾಸವನ್ನು ದಾಖಲಿಸುವುದು, ವಿಶ್ಲೇಷಿಸುವುದು ಅಪಾರ

ಪುಟ 15 ನೋಡಿ



ಭಾರತ ಜನ ಇತಿಹಾಸ ಮಾಲೆಯ ಮೂರು ಪುಸ್ತಕಗಳ ಬಿಡುಗಡೆಯ ಸಂದರ್ಭದಲ್ಲಿ ಮಾಲೆಯ ಎಲ್ಲ ಪುಸ್ತಕಗಳಿಗೆ ಶೇ.20 ರಷ್ಟು ಕಡಿಮೆ ಇರುವ ವಿಶೇಷ ರಿಯಾಯಿತಿಯ ಬೆಲೆ ಘೋಷಿಸಲಾಗಿದೆ. ಮೂರು ಪುಸ್ತಕಗಳ ಸೆಟ್ ಮತ್ತು ಎಲ್ಲ 9 ಪುಸ್ತಕಗಳ ಸೆಟ್ ಕೊಳ್ಳುವವರಿಗೆ ಮತ್ತು

ಭಾರತದ ಜನ ಇತಿಹಾಸ ಮಾಲೆಯ ಪುಸ್ತಕಗಳಿಗೆ ಎಪ್ರಿಲ್ 30ರ ವರೆಗೆ ವಿಶೇಷ ರಿಯಾಯಿತಿ ದರ

4ಕ್ಕಿಂತ ಹೆಚ್ಚು ಸೆಟ್ ಕೊಳ್ಳುವವರಿಗೆ ಇನ್ನಷ್ಟು ಹೆಚ್ಚಿನ ರಿಯಾಯಿತಿ ನೀಡಲಾಗಿದೆ.

ಉದಾಹರಣೆಗೆ, ಮೂರು ಪುಸ್ತಕಗಳ (ಒಟ್ಟು ಬೆಲೆ ರೂ.370ರ ಬದಲು) **ಒಂದು ಸೆಟ್ ಗೆ ರೂ. 270** ಮತ್ತು 4 ಕ್ಕಿಂತ ಹೆಚ್ಚು ಸೆಟ್ ಕೊಳ್ಳುವವರಿಗೆ **ಒಂದು ಸೆಟ್ ಗೆ ರೂ. 250** ರಲ್ಲಿ ಕೊಡಲಾಗುತ್ತದೆ. ಇದೇ ರೀತಿ ಎಲ್ಲ 9 ಪುಸ್ತಕಗಳ (ಒಟ್ಟು ಬೆಲೆ ರೂ.1175ರ ಬದಲು) **ಒಂದು ಸೆಟ್ ಗೆ ರೂ. 880** ಮತ್ತು 4 ಕ್ಕಿಂತ ಹೆಚ್ಚು ಸೆಟ್ ಕೊಳ್ಳುವವರಿಗೆ **ಒಂದು ಸೆಟ್ ಗೆ ರೂ. 820** ರಲ್ಲಿ ಕೊಡಲಾಗುತ್ತದೆ. ಇತರ ವಿವರಗಳು ಜೊತೆಗಿರುವ ಪೋಸ್ಟರ್ ನಲ್ಲಿವೆ.

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**